ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಜೂನ್ 19, 2013 ಪುಟ 20 ರೂ. 14/-



ಹೊಸ ಹೀರೊ ಧನಂಜಯ



ಶೃತಿ ಮದುವೆ

ಪತಂಗ - ಲಫಂಗ

ಆಮ್‌ವೇ ವಂಚನೆ




ರಾಯಚೂರು:
ಒಪೆಕ್ ಆಸ್ಪತ್ರೆ ಕತೆ

ಉತ್ತರಕನ್ನಡ-ಚಿತ್ರದುರ್ಗ
ಎಂಪಿ ಟಿಕೆಟ್ ಕಸರತ್ತು

ಸಾಲದ ಸುಳಿಯಲ್ಲಿ?





ಬೆಂಗಳೂರಿಗಾಗಿ ಬಾಯಾರಿದ ಬಯಲುಸೀಮೆ: ಸಿಕ್ಕೀತೇ ಶಾಶ್ವತ ಪರಿಹಾರ?

ಬೆಂಗಳೂರಿನಲ್ಲಿ ಬಡಾವಣೆಯೊಂದು ಎದ್ದು ನಿಂತಿದೆ ಎಂದರೆ, ಅದರ ನೂರು ಕಿ.ಮೀ. ವ್ಯಾಪ್ತಿಯಲ್ಲಿ ಎಲ್ಲೋ ಒಂದಷ್ಟು ಅಂತರ್ಜಲ ಇಂಗಿತು ಎಂದೇ ಅರ್ಥ. ಕಳೆದ 30 ವರ್ಷಗಳಲ್ಲಿ ಇದೇ ಬೆಂಗಳೂರು, ಬೃಹತ್ ಬೆಂಗಳೂರಾಗಿ ಹಿಗ್ಗಿಕೊಂಡಿದೆ. ಇದು ತನ್ನಿಂದ ತಾನೇ ಬೆಳೆದುಕೊಂಡಿರುವುದಲ್ಲ; ಬದಲಿಗೆ ರಾಜ್ಯದ ವಿವಿಧೆಡೆಗಳ ಸಂಪನ್ಮೂಲಗಳನ್ನು ಹೀರಿ ಈ ಊರು ಬೆಳೆದಿದೆ. ಬೆಳೆದೂ, ಬೆಳೆದು ಬೆಂಗಳೂರೆಂಬುದು ಉದ್ಭವಮೂರ್ತಿಯಂತೆ ಮೇಲೆದ್ದ ಅಮರಾವತಿಯೆಂತಲೂ, ಉಳಿದವೆಲ್ಲಕ್ಕೂ ಅದೇ ಆಧಾರವೆಂಬಂತೆಯೂ ಭಾವಿಸುವಂತೆ ಆಗುತ್ತಿದೆ. ಆದರೆ ಇದರ ಹಿಂದೆ ಬೇರೊಂದು ವಾಸ್ತವವೂ ಇದೆ.

ಕೃಷಿ ಕ್ಷೇತ್ರ ದುರ್ಬಲವಾಗುತ್ತಿದ್ದಂತೆ ಮತ್ತು ವಿವಿಧ ಉತ್ಪಾದನಾ ಹಾಗೂ ಸೇವಾಕ್ಷೇತ್ರಗಳ ವಿಸ್ತರಣೆಯಾಗುತ್ತಿದ್ದಂತೆ, ಒಟ್ಟು ರಾಜ್ಯಾದಾಯದ ಸ್ವರೂಪದಲ್ಲಿ ಬದಲಾವಣೆ ಬಂದಿದೆ. ಕೃಷಿ ಕ್ಷೇತ್ರವು ಜಿ.ಡಿ.ಪಿಗೆ (ಒಟ್ಟು ಆಂತರಿಕ ಉತ್ಪನ್ನ) ನೀಡುವ ಕೊಡುಗೆಯು ಇಳಿಯುತ್ತಾ ಬಂದಿದೆ. ಅದೇ ಸಂದರ್ಭದಲ್ಲಿ ನಗರ ಕೇಂದ್ರಿತ ಉದ್ದಿಮೆಗಳ ಪಾಲು ಹೆಚ್ಚಾಗಿದೆ. ಹಾಗಾಗಿಯೇ ಇಡೀ ಕರ್ನಾಟಕದ ಜಿ.ಡಿ.ಪಿಯಲ್ಲಿ ಬೆಂಗಳೂರಿನ ಪಾಲೇ ಶೇ.50 ಎಂದು ಹೇಳಲಾಗುತ್ತಿದೆ. ಆರೋಗ್ಯ ಶಿಕ್ಷಣ ಕ್ಷೇತ್ರಗಳಲ್ಲಿನ ಹೆಚ್ಚಿನ ಹೂಡಿಕೆ ಮತ್ತು ತಜ್ಞರಿರುವುದು ಬೆಂಗಳೂರಿನಲ್ಲೇ. ಮಾಧ್ಯಮಗಳು ಬೆಂಗಳೂರು ಕೇಂದ್ರಿತವಾಗಿವೆ. ರಾಜಕೀಯ ಅಧಿಕಾರವಂತೂ ಇಲ್ಲೇ ಮಡುಗಟ್ಟಿಕೊಂಡಿದೆ. 2011ರ ಜನಗಣತಿಯ ಪ್ರಕಾರ 6 ಕೋಟಿಯಷ್ಟಿರುವ ರಾಜ್ಯದ ಜನಸಂಖ್ಯೆಯಲ್ಲಿ ಆರರಲ್ಲೊಂದು ಪಾಲು (98 ಲಕ್ಷ) ರಾಜಧಾನಿಯದ್ದಾಗಿದೆ. 224 ವಿಧಾನಸಭಾ ಕ್ಷೇತ್ರಗಳ ಕರ್ನಾಟಕ ವಿಧಾನಸಭೆಯಲ್ಲಿ ಬೆಂಗಳೂರೊಂದರಿಂದಲೇ 28 ಎಂಎಲ್‌ಎಗಳಿದ್ದಾರೆ.

ಇಷ್ಟು ಪ್ರಮಾಣದ ಕೇಂದ್ರೀಕರಣವಿರುವ ಊರಿನಲ್ಲೇ ಭಾರೀ ಉದ್ದಿಮೆದಾರರಿದ್ದು, ಅವರುಗಳು ಇಂತಹ ಕೇಂದ್ರೀಕರಣವನ್ನು ಮತ್ತಷ್ಟು ಹೆಚ್ಚಿಸುವ ನೂರು ಯೋಜನೆಗಳನ್ನು ಆಳುವವರ ಕಿವಿಗೆ ತುಂಬುತ್ತಾರೆ. ಅದೇ ಕೆಲಸವನ್ನು ಇಂದು ಬಿಪ್ಯಾಕ್ ಎಂದು ಕರೆದುಕೊಳ್ಳುತ್ತಿರುವ ಕೂಟವೊಂದು ಮಾಡುತ್ತಿದೆ. ಈ ಮಂದಿ ಒಂದು ವಾರದ ಕೆಳಗೆ ಈ ರಾಜ್ಯದ ಯಾವ ಖಾತೆಗೆ ಯಾವ ವ್ಯಕ್ತಿ ಮಂತ್ರಿಯಾಗಬೇಕೆಂದು ಉಪದೇಶ ಹೇಳಲು ಹೋಗಿ ಉಗಿಸಿಕೊಂಡಿದ್ದಾರೆ. ಅದೇನೇ ಇರಲಿ, ಇಂತಹವರ ಪ್ರಭಾವವು ಯಾವ ಸರ್ಕಾರ ಬಂದರೂ ನಡೆಯುತ್ತದೆ; ನಮ್ಮನ್ನು ಆಳುವವರು ಇವರು ಹೇಳುವ ಅಭಿವೃದ್ಧಿಯನ್ನು ಸಾಧಿಸಲು ಇನ್ನಿಲ್ಲದ ಸರ್ಕಸ್ ನಡೆಸುತ್ತಾರೆ.

ಅಂತಹ 'ಅಭಿವೃದ್ಧಿ'ಯ ಪರಿಣಾಮವಾಗಿ ದಕ್ಷಿಣ ಬಯಲುಸೀಮೆಯ 5 ಜಿಲ್ಲೆಗಳು ಇಂದು ಬೆಂಗಾಡಾಗಿವೆ. ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆಗಳಲ್ಲಿ ನಿರಂತರ ಬರಗಾಲದ ಸ್ಥಿತಿ ತಲೆದೋರಿ 20 ವರ್ಷಗಳಿಗೂ ಹೆಚ್ಚು ಕಾಲವಾಗಿದೆ. ಈ 6 ಜಿಲ್ಲೆಗಳು (ಬೆಂ.ನಗರ ಜಿಲ್ಲೆ ಸೇರಿ) 8,299 ಕೆರೆಗಳನ್ನೊಳಗೊಂಡು ತನ್ನದೇ ವಿಶಿಷ್ಟ ನೀರಾವರಿ ಜಾಲವನ್ನು ಹೊಂದಿದ್ದ ಪ್ರದೇಶ. ಮಳೆಗಾಲದಲ್ಲಿ ಹರಿಯುತ್ತಿದ್ದ 18 ನದಿಗಳು ಮತ್ತು ನೂರಾರು ಹಳ್ಳಗಳೊಂದಿಗೆ ಸಾವಯವ ಸಂಬಂಧ ಹೊಂದಿದ್ದ ಕೆರೆಗಳ ಜಾಲದೊಂದಿಗೆ ಕೃಷಿ ಹಾಗೂ ಇನ್ನಿತರ ಚಟುವಟಿಕೆಗಳು ಸಾಗುತ್ತಿದ್ದವು. ಈಗ ನದಿಗಳು, ಹಳ್ಳಗಳು ಮತ್ತು ಕೆರೆಗಳೆಲ್ಲವೂ ಬತ್ತಿ ಹೋಗಿವೆ ಮಾತ್ರವಲ್ಲ, ಭೂಮಿಯೊಳಗಿನ ಜಲವನ್ನು ಹೀರಲು ಹತ್ತಿರ ಹತ್ತಿರ 7.5 ಲಕ್ಷ ಬಾವಿಗಳನ್ನು (ತೆರೆದ ಬಾವಿಗಳು ಮತ್ತು ಕೊಳವೆಬಾವಿಗಳು) ತೋಡಲಾಗಿದೆ. ಅವುಗಳಲ್ಲಿ ಶೇ.50ಕ್ಕೂ ಹೆಚ್ಚು ಇಂಗಿಕೊಂಡಿವೆ. ಉಳಿದವೂ ಆಗಾಗ್ಗೆ ನೀರನ್ನು ಹೊಗೆದು ಕೊಡಲು ಕಷ್ಟಪಡುತ್ತಿವೆ. ಅದಕ್ಕಾಗಿ 650 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ತನ್ನು ವ್ಯಯಿಸಲಾಗುತ್ತಿದೆ.

ನೀರು ಪಡೆಯಬೇಕೆಂದರೆ ಕನಿಷ್ಠ 800ರಿಂದ 1,300 ಅಡಿಗಳವರೆಗೆ ಬೋರ್‌ವೆಲ್ ಕೊರೆಸಬೇಕಾದ ಪರಿಸ್ಥಿತಿ ಹೆಚ್ಚಿನ ಪ್ರದೇಶಗಳಲ್ಲಿದೆ. ಅಂದರೆ ಇದೊಂದು ಬೆಂಗಾಡಾಗಿ ಪರಿವರ್ತನೆ ಹೊಂದಿ, ಜನರು ಗುಳೆ ಹೋಗುವ ಸ್ಥಿತಿ ನಿರ್ಮಾಣಗೊಂಡರೆ ಉಂಟಾಗಬಹುದಾದ ಪರಿಣಾಮ ಸುಲಭಕ್ಕೆ ನಿಭಾಯಿಸಬಹುದಾದದ್ದಲ್ಲ. ಹೀಗಾಗಿಯೇ 20 ವರ್ಷಗಳಿಗೂ ಹಿಂದಿನಿಂದಲೇ 'ಬಯಲುಸೀಮೆಯ ಶಾಶ್ವತ ನೀರಾವರಿ'ಯ ಕೂಗು ಕೇಳಿಬರುತ್ತಿದೆ. ಅದಕ್ಕೂ ಹಿಂದೆಯೇ 'ಕೋಲಾರಕ್ಕೆ ಹೇಮಾವತಿ ನೀರು ಬೇಕು, ಭದ್ರಾ ನೀರು ಬೇಕು' ಎಂಬ ಮಾತು ಕೆಲವು ರಾಜಕಾರಣಿಗಳ ಬಾಯಲ್ಲಿ ಉದುರುತ್ತಿತ್ತು. ತುಮಕೂರು ಜಿಲ್ಲೆಯ ಕೆಲವು ತಾಲೂಕುಗಳಿಗೆ ಹೇಮಾವತಿ ಹರಿದದ್ದು ಈ ಕನಸಿಗೆ ಪುಷ್ಟಿ ಕೊಟ್ಟಿತ್ತು, ನಂತರ ಜಿ.ಎಸ್.ಪರಮಶಿವಯ್ಯ ಎಂಬ ನಿವೃತ್ತ ಮುಖ್ಯ ಇಂಜಿನಿಯರ್‌ರವರು ನೀಡಿದ್ದ ವರದಿಯೊಂದು 'ಪಶ್ಚಿಮಕ್ಕೆ ಹರಿಯುವ ನದಿಗಳ ನೀರಿನಲ್ಲಿ ಒಂದು ಭಾಗವನ್ನು ಈ ದಿಕ್ಕಿಗೆ ಹರಿಸುವ' ಯೋಜನೆಯೊಂದನ್ನು ಮುಂದಿಟ್ಟಿತು.

ಪರಮಶಿವಯ್ಯ ವರದಿಯು ಈಗ ಎಲ್ಲರ ಬಾಯಿಯ ಮಂತ್ರವಾಗಿದೆ. ಸಾಕಷ್ಟು ವಿವಾದಾತ್ಮಕ ಅಂಶಗಳನ್ನೂ ಹೊಂದಿರುವ ಈ ಯೋಜನೆಯ ವಿಸ್ತೃತ ರೂಪವು ನಿಜವಾಗಲೂ ಜಾರಿಯಾಗುವುದಾದರೆ, ಅದು ಬಯಲುಸೀಮೆಯ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸುತ್ತದೆ ಮತ್ತು ವೈಜ್ಞಾನಿಕ ವಿಸ್ಮಯಗಳಲ್ಲೊಂದಾಗಿರುತ್ತದೆ. ಇದರ ಬಗ್ಗೆ ತಜ್ಞರಿಂದ ಸ್ಪಷ್ಟವಾದ, ವೈಜ್ಞಾನಿಕವಾದ, ಸಮಗ್ರವಾದ ಅಭಿಪ್ರಾಯವನ್ನು ತರಿಸುವುದು ಮತ್ತು ಆ ಕುರಿತು ರಾಜ್ಯಮಟ್ಟದಲ್ಲಿ ಚರ್ಚೆಯನ್ನು ಏರ್ಪಡಿಸುವ ಅಗತ್ಯವಿದೆ. ಅಂತಹ ಸಮಗ್ರ ಅಭಿಪ್ರಾಯವನ್ನು ಪಡೆದುಕೊಳ್ಳುವ ಕೆಲಸವನ್ನು ಸರ್ಕಾರ ಮಾಡುತ್ತಿಲ್ಲವಾದ್ದರಿಂದ, ಅಸ್ಪಷ್ಟತೆ, ಭಿನ್ನಾಭಿಪ್ರಾಯ, 'ಏನೇ ಇರಲಿ- ನೀರು ಕೊಡಿ' ಥರದ ಘೋಷಣೆಗಳು ವ್ಯಾಪಕವಾಗಿದೆ.

ಇವೆಲ್ಲ ಏನೇ ಇರಲಿ, ಈ ಭಾಗದ ಜನಸಮುದಾಯದ ಅತ್ಯಂತ ಪ್ರಮುಖ ಸಮಸ್ಯೆಗೆ ಕಾರಣವನ್ನು ಸರಿಯಾಗಿ ಗುರುತಿಸುವ ಅಗತ್ಯವಿದೆ. ಏಕೆಂದರೆ ಇದೇ ಪರಿಹಾರಕ್ಕೂ ದಾರಿ ಮಾಡಿಕೊಡಲಿದೆ. ಇಲ್ಲದಿದ್ದರೆ, ಸಮಸ್ಯೆಯ ಆಳ ಮತ್ತು ವ್ಯಾಪಕತೆ ಹೆಚ್ಚಾಗುತ್ತಾ ಹೋಗುವ ಸಂಭವವಿದೆ.


ಈ ಲೇಖನದ ಆರಂಭದಲ್ಲೇ ಹೇಳಿರುವಂತೆ, ಬಯಲುಸೀಮೆಯ ನೀರಿನ ಸಮಸ್ಯೆಯ ಪ್ರಧಾನ ಕಾರಣ 'ಬೆಂಗಳೂರು ಕೇಂದ್ರಿತ ಅಥವಾ ಬೆಂಗಳೂರು ಮಾದರಿ ಅಭಿವೃದ್ಧಿನೀತಿ'ಯಾಗಿದೆ. ಬೆಂಗಳೂರಿನ ಸೌಧಗಳಿಗೂ, ಅವುಗಳೊಳಗೆ ವಾಸಿಸುವ ಲಕ್ಷಾಂತರ ಮಂದಿಗೂ ಬಯಲುಸೀಮೆಯೇ ಆಸರೆ. ಈ ಭಾಗದ 18 ನದಿಗಳ ಪಾತ್ರದ ಶೇ.75ರಷ್ಟು ಭಾಗದಲ್ಲಿ ನಿಮಗಿಂದು ಮರಳೇ ಕಾಣದಂತೆ, ಗೋರಿ ಗೋರಿ ಬೆಂಗಳೂರಿಗೆ ಸಾಗಿಸಲಾಗಿದೆ. ಈ ಮರಳು ಇಲ್ಲಿನ ರಿಯಲ್ ಎಸ್ಟೇಟ್ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಬಾವಿಗಳಿಗೂ, ಬೋರ್‌ವೆಲ್‌ಗಳಿಗೂ, ನೀರುಣಿಸಬೇಕೆಂದರೆ ಹಳ್ಳ, ನದಿಗಳಲ್ಲಿ ಮರಳು ಇರಬೇಕಾದ್ದು ಅತ್ಯಗತ್ಯ. ಆದರೆ ಮರಳು ಮಾಫಿಯಾವು, ರಾಜಧಾನಿಗೆ ಸಮೀಪವಿರುವ ಈ ಜಿಲ್ಲೆಗಳ ಹಳ್ಳ, ಕೊಳ್ಳಗಳ ಮೇಲೆ ಮೂರು ದಶಕಗಳ ಕಾಲ ನಿರಂತರವಾದ ಅತ್ಯಾಚಾರವನ್ನು ಎಸಗಿತು. ಯಾವ ಕಾಯ್ದೆ ಕಾನೂನುಗಳೂ ಇದನ್ನು ತಡೆಯಲಾಗಲಿಲ್ಲ. ತಡೆಯಲು ಹೊರಟ ಗೌರಿಬಿದನೂರಿನ ಹೋರಾಟಗಾರರಲ್ಲಿ ಒಬ್ಬರು ಕೊಲೆಯಾದರೆ, ಇನ್ನೊಬ್ಬರಾದ ಚೌಡಪ್ಪನವರು ಜೀವ ಬೆದರಿಕೆ ಎದುರಿಸಬೇಕಾಗಿ ಬಂದಿದೆ. ಮರಳು ಖಾಲಿಯಾದಂತೆಲ್ಲಾ ನೆಲಕ್ಕೆ ಇಂಗುವ ನೀರಿನ ಪ್ರಮಾಣವೂ ಕಡಿಮೆಯಾಯಿತು. ಬೆಂಗಳೂರಿನ ಬಿಲ್ಡಿಂಗುಗಳ ಮಾತ್ರ ಭದ್ರವಾದವು.

ಅದೇ ಹೊತ್ತಿನಲ್ಲಿ ಈ ರಾಜ್ಯದ ಬೇರಾವ ಜಿಲ್ಲೆಗಳಲ್ಲೂ ಕಂಡುಬರದ ಪ್ರಮಾಣಕ್ಕೆ ಬೋರ್‌ವೆಲ್‌ಗಳ ಸಂಖ್ಯೆ ಹೆಚ್ಚಾಗುತ್ತಾ ಹೋಯಿತು. ಜೀವನದಿಗಳ ಜಾಲ ಇಲ್ಲಿರದೇ ಇದ್ದುದು ಮಾತ್ರ ಇದಕ್ಕೆ ಕಾರಣವಾಗಿರಲಿಲ್ಲ, ಬೆಂಗಳೂರಿನ ಜೀವನಕ್ಕೆ ಅತ್ಯಗತ್ಯವಾದ ಹಾಲು, ತರಕಾರಿ, ಹೂವುಗಳನ್ನು ನಿರಂತರವಾಗಿ ಸರಬರಾಜು ಮಾಡುವ ಫ್ಯಾಕ್ಟರಿಗಳಂತೆ ಈ ಭಾಗವನ್ನು ದುಡಿಸಿಕೊಳ್ಳಲಾಯಿತು. ಭತ್ತ ರಾಗಿಗಳಲ್ಲದೇ, ಇಲ್ಲಿನ ಸಾಂಪ್ರದಾಯಿಕ ಬೆಳೆಯಾಗಿದ್ದ ಕಡಲೇಕಾಯಿ ಎಲ್ಲವೂ ಕಣ್ಮರೆಯಾಗಿದೆ. ನೀರೇ ಇಲ್ಲದ ಕಾರಣಕ್ಕೆ ಮುಸುಕಿನ ಜೋಳವನ್ನೇ ವ್ಯಾಪಕವಾಗಿ ಬೆಳೆಯುವ ಭಾಗಗಳು ಇವೆಯಾದರೂ, ಬೆಂಗಳೂರಿಗರಿಗಾಗಿ ಉತ್ಪಾದನೆಯಲ್ಲಿ ತೊಡಗಿರುವ ಹೊಲ-ಗದ್ದೆಗಳೇ ಹೆಚ್ಚಾಗಿವೆ.

ಹಾಲಿನ ವಿಚಾರಕ್ಕೆ ಬರುವುದಾದರೆ, ರಾಜ್ಯದ ಇತರೆಡೆಯ ಸುಮಾರು 15 ಜಿಲ್ಲೆಗಳಲ್ಲಿ ಆಗುವ ಹಾಲು ಉತ್ಪಾದನೆಯ ಪ್ರಮಾಣವನ್ನು ಬೆಂಗಳೂರು ಗ್ರಾಮಾಂತರ ಮತ್ತು ಕೋಲಾರ ಹಾಲು ಒಕ್ಕೂಟಗಳೇ ಸರಿಗಟ್ಟುತ್ತವೆ. ಅದೇ ರೀತಿ ತರಕಾರಿಯ ವಿಚಾರವೂ ಅಷ್ಟೇ. ಇದೇ ಭಾಗದಲ್ಲಿ ಕೋಳಿ ಫಾರಂಗಳ ಸಂಖ್ಯೆಯೂ ಸಾಕಷ್ಟಿದೆ. 5000 ಕೋಳಿ ಮರಿಗಳನ್ನು ಸಾಕಬೇಕೆಂದರೆ ದಿನವೊಂದಕ್ಕೆ 3,000 ಲೀಟರ್‌ಗಳಷ್ಟು ನೀರು ಬೇಕೇ ಬೇಕಾದ್ದರಿಂದ, ಅಲ್ಲೊಂದು ಬೋರ್‌ವೆಲ್ ಕಡ್ಡಾಯ. ಬೆಂಗಳೂರು ಹಾಗೂ ಇತರ ಭಾಗಕ್ಕೆ ಹೂವಿನ ರಾಶಿಯನ್ನು ತಂದು ಸುರಿಯುವ ಟೆಂಪೋಗಳೂ ಇದೇ ಭಾಗದಿಂದಲೇ ಹೊರಡುತ್ತವೆ.

ಪ್ರತಿದಿನ ಸಂಜೆ ಅಥವಾ ಬೆಳಗಿನಜಾವ ಮೂರು ಗಂಟೆಗೆದ್ದು ಹೂವನ್ನೋ, ತರಕಾರಿಯನ್ನೋ ಬಿಡಿಸಿ ಕಾದುನಿಂತ ಸಾಗಾಣಿಕೆ ವಾಹನಕ್ಕೆ ತುಂಬಿ, ಮಾರುಕಟ್ಟೆಗೆ ಸಾಗಿಸುವುದು ದಿನನಿತ್ಯದ ವಿದ್ಯಮಾನ. ಮಾರುಕಟ್ಟೆಯ ಮೇಲಾಳ್ವಿಕೆಯಲ್ಲಿ ಈ ಭಾಗದ ರೈತರು ಆಟ ಕಾಯಿಗಳಷ್ಟೇ. ಅವರು ಹೂವು, ತರಕಾರಿ, ರೇಷ್ಮೆ, ಹಾಲ ಕೋಳಿ ಉತ್ಪಾದಿಸಲು ಬೇಕಾದ ನೀರಿಗಾ ಬೋರ್‌ವೆಲ್‌ಗಳನ್ನು ಒಂದಾದಮೇಲೊಂದರಂ ತೋಡಿಸಿದರು. ಅಂತರ್ಜಲವನ್ನು ಎಳೆದೆಳೆದು, ಅದ ಫಲವನ್ನು ಮಹಾನಗರಕ್ಕೆ ರವಾನಿಸಲಾಯಿತು.

ಕೆಲವರು ವ್ಯಾಪಾರಿಗಳಾಗಿ, ಕೆಲವರು ಟೆಂಪೋ ಮಾಲೀಕರೋ, ಚಾಲಕರೋ ಆಗಿ ಜೀವನ ನಡೆಸಿದ್ದೇನೋ ಹೌದು. ಅದೇ ರೀತಿ, ಇಲ್ಲಿನ ಮರಳನ್ನು ಸಾಗಿಸಿದ ಲಾ ಮಾಲೀಕರೂ ಗಂಟು ಭದ್ರ ಮಾಡಿಕೊಂಡರು. ಹೆಚ್ಚಿನವ ಸಿಟ್ಟು ಲಾರಿಯವರ ಮೇಲೆ, ಮರಳು ಮಾಫಿಯಾವ ಕೈಲಿ ಹಿಡಿದಿಟ್ಟುಕೊಂಡಿದ್ದ ಸ್ಥಳೀಯ ಬಲಾ ರಾಜಕಾರಣಿಗಳ ಮೇಲೆ ಇದೆ. ಇವರೆಲ್ಲಾ ಏಜೆಂಟರಾ ಕೆಲಸ ಮಾಡಿದ್ದು ನಿಜವಾದರೂ, ಬೆಂಗಳೂರೆಂ ಮಾಯಾನಗರಿಯ ಬೆಳವಣಿಗೆಯನ್ನು ಹೆಚ್ಚಿಸುವ 'ಅಭಿವೃ ನೀತಿಯ ಕೆಳಹಂತದ ಭಾಗೀದಾರರಾಗಿಯಷ್ಟೇ ಅವ ಕೆಲಸ ಮಾಡುತ್ತಿದ್ದರು. ಇಂತಹದೊಂದು ಆರ್ಥಿಕತೆ ಎ





ದೊಡ್ಡ ನಗರಗಳ ಸುತ್ತಲೂ ಬೆಳೆದುಕೊಂಡಿ ಅವೈಜ್ಞಾನಿಕವಾದ, ಅಪ್ರಜಾತಾಂತ್ರಿಕವಾದ ನಗರೀಕರಣ ನೀತಿಯ ಫಲ ಇದಾಗಿದೆ. ಆ ರೀತಿ ಹೆಚ್ಚಾದ ನಗರೀಕರ ಸೇವೆ ಸಲ್ಲಿಸುತ್ತಾ, ಈ ಭಾಗಗಳು ತಮ್ಮ ಮಾನ ಸಂಪನ್ಮೂಲವನ್ನು ದುಡಿಸಿದ್ದು ಮಾತ್ರವಲ್ಲದ ಜೀವಜಲವನ್ನೂ ಇಂಗಿಸಿಕೊಂಡವು.

ಈಗ ಶಾಶ್ವತ ನೀರಾವರಿಯ ಕೂಗೆದ್ದಿ ಜಿ.ಎಸ್.ಪರಮಶಿವಯ್ಯ ವರದಿ ತಾಂತ್ರಿಕವಾಗಿ ಕಾರ್ಯಸಾ ಹೌದೋ ಅಲ್ಲವೋ ಎಂದು ತಿಳಿಯಲು ಹಿಂದಿನ ಸಕಾ ಎನ್‌ಆರ್‌ಎಸ್ ಸಂಸ್ಥೆಗೆ ಸಮೀಕ್ಷೆ ನಡೆಸಲು ಹೇಳಿ ಅದೇನು ಹೇಳಿತೋ ಗೊತ್ತಿಲ್ಲ, ಈಗ ಸ್ಕಾಟ್ ವಿಲಿಯ ಎಂಬ ಇನ್ನೊಂದು ವಿದೇಶೀ ಕಂಪೆನಿಗೆ ಸಮೀಕ್ಷೆ ಕಾರ್ಯ ವಹಿಸಲಾಗಿದೆ. ಚುನಾವಣೆಗೆ ಮುಂಚೆ ಕಳೆದೊ ವರ್ಷ ಈ ಜಿಲ್ಲೆಗಳ ಜನರು ತಿಂಗಳುಗಟ ಪ್ರತಿಭಟಿಸಿದ್ದರಿಂದ ಎಲ್ಲಾ ಪಕ್ಷಗಳು ತಮ್ಮ ಪ್ರಣಾಳಿಕೆಯ ಶಾಶ್ವತ ನೀರಾವರಿಯ ಮಾತಾಡಿದ್ದವು. ಕಾಂಗ್ರೆಸ್ 'ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂ ತುಮಕೂರು ಮತ್ತು ಚಿತ್ರದುರ್ಗಗಳಿಗೆ ಶಾಶ್ವತ ನೀರಾ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗುವುದು' ಎ ಪ್ರಣಾಳಿಕೆಯಲ್ಲಿ ಬರೆದುಕೊಂಡಿತು. ಶಾಶ್ವತ ನೀರಾ ಎಂದರೆ ಏನು ಎಂಬುದು ಅವರವರ ವ್ಯಾಖ್ಯಾನಕ್ಕೆ ಸಂಗತಿ. ಹಾಗಾಗಿ ಅಮೂರ್ತವಾಗಿ ಮಾತಾಡಿದ ಸುಲಭವಾದ್ದರಿಂದ ಕಾಂಗ್ರೆಸ್ ಅದನ್ನೇ ಹೇಳುತ್ತಿದೆ. ಒಂದಷ್ಟು ಪ್ರಗತಿ ಕಂಡಿರುವ 'ಎತ್ತಿನಹೊಳೆ' ನೀರಾ ಯೋಜನೆಯ ಕುರಿತು ಜೆಡಿಎಸ್ ಮತ್ತು ಬಿಜೆಪಿ ಪಕ್ಷ ಅದನ್ನು ಜಾರಿ ಮಾಡುತ್ತೇವೆಂದು ಹೇಳಿದ್ದವು. ಈಗ ಎಲ್ಲಾ ಪಕ್ಷಗಳು ಒಟ್ಟು ಸೇರಿ ಮುಂದಿನ ದಿನ ಯಾವ ರೀತಿಯ ಪರ್ಯಾಯ ಕಂಡುಕೊಳ್ಳುತ್ತಾರೆಂಬ ಮೇಲೆ ಬಯಲುಸೀಮೆಯ ಈ ಭಾಗದ ಭವಿಷ್ಯ ನಿ ದೊಡ್ಡ ದೊಡ್ಡ ಯೋಜನೆಗಳ ಸಮಸ್ಯೆಯ ಕು ಜಗತ್ತಿನಾದ್ಯಂತ ಚರ್ಚೆ ನಡೆಯುತ್ತಿರುವ ಹೊತ್ತಿಗೆ ಕರ್ನಾ ಈ ಒಣ ಪ್ರದೇಶವು ಬಾಯಾರಿ ನಿಂತಿದೆ.

ಅದು ತಡವಾದಷ್ಟೂ ಬೆಂಗಳೂರು ಬೆಳೆಯುತ್ತಿ ಅದರ ಸುತ್ತಲಿನ ಭಾಗವು ಬಸವಳಿಯುತ್ತಿರುತ್ತದೆ. ಹಾ 'ಬೆಂಗಳೂರು ಕೇಂದ್ರಿತ ಅಭಿವೃದ್ಧಿ ಮಾದರಿ'ಯ ವಿ ಚಿಂತನೆ ಹಾಗೂ ಚಳವಳಿಯೂ ತುರ್ತ ಕೈಗೆತ್ತಿಕೊಳ್ಳಬೇಕಾದ ಸಂಗತಿಯಾಗಿದೆ.

ಜಿ.ಎಸ್.ಪರಮಶಿವಯ್ಯ ವರದಿ: ಗಂಭೀರವಾಗಿ ಪರಿಗಣಿಸಬೇಕು... ಆದರೆ

ನೇತ್ರಾವತಿ ನದಿಗೆ ನೀರುಣಿಸುವ ಪಶ್ಚಿಮ ಘಟ್ಟಗಳ ಪ್ರದೇಶದಲ್ಲಿ, ಒಂದು ಮಾಲಾ ಕಾಲುವೆಯನ್ನು ಕಟ್ಟಿ ಅಲ್ಲಿಂದ ಬಯಲುಸೀಮೆಗೆ ಗುರುತ್ವಾಕರ್ಷಣೆಯನ್ನಷ್ಟೇ ಬಳಸಿ ನೀರು ಹರಿಸುವ ಸಾಧ್ಯತೆಯ ಕುರಿತು ಪರಮಶಿವಯ್ಯ ವರದಿ ಬೆಳಕು ಚೆಲ್ಲುತ್ತದೆ. ಈಗಾಗಲೇ ಇದರ ವಿರುದ್ಧ ಹಲವು ಪರಿಸರ ತಜ್ಞರು ಮಾತನಾಡಿದ್ದಾರೆ. ಆದರೆ ವರದಿಯ ಪರವಾಗಿ, ಅದರ ವೈಜ್ಞಾನಿಕತೆ ಹಾಗೂ ಕಾರ್ಯಸಾಧ್ಯತೆಯ ಬಗ್ಗೆಯೂ ಬಲವಾದ ಅಭಿಪ್ರಾಯವಿದೆ. ಈ ವರದಿಯಲ್ಲಿನ ಅಂಶಗಳು ಕಾರ್ಯಸಾಧುವಾದರೆ ಅದು ಬಯಲುಸೀಮೆಯ ಒಣಪ್ರದೇಶಕ್ಕೆ ಅಪಾರವಾದ ಅನುಕೂಲ ಮಾಡಿಕೊಡುವುದರಲ್ಲಿ ಸಂದೇಹವಿಲ್ಲ, ಹಾಗಾಗಿ ಸರ್ಕಾರವು ಇದನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ. ಎಷ್ಟರಮಟ್ಟಿಗೆ ವೈಜ್ಞಾನಿಕ, ಪರಿಸರ ಸ್ನೇಹಿ ಎಂಬುದರ ಕುರಿತು ಮುಕ್ತವಾದ ಚರ್ಚೆ ಅಗತ್ಯವಿದೆ. ಹಾಗಿಲ್ಲದೇ ಇದರ ಕುರಿತು ಮುಂದುವರೆಯುವುದು ಅಸಾಧ್ಯ, ಹಾಗೆಂದು, ವರ್ಷಗಳ ಕಾಲ ಇಂತಹದೊಂದು ಮಹತ್ವಪೂರ್ಣ ಪ್ರಸ್ತಾಪವನ್ನು ನನೆಗುದಿಗೆ ಹಾಕುವುದೂ ಸರಿಯಲ್ಲ, ಹೊಸ ಸರ್ಕಾರವು ಆದ್ಯತೆಯ ಮೇರೆಗೆ ಮಾಡಬೇಕಾದ ಕೆಲಸ ಇದಾಗಿದೆ.

...ಕಾಲ್ಪನಿಕ ಲೋಕದಲ್ಲಿ ಯಶಸ್ಸನ್ನು ಅರಸುತ್ತಾ...



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಸಾಮಾನ್ಯವಾಗಿ ಹೆಚ್ಚಿನ ಜನರ ಅನುಭವದಲ್ಲಿ 25ರ ...ಯದಲ್ಲಿ ಬದುಕು ಭರವಸೆಗಳಿಂದ ತುಂಬಿರುತ್ತದೆ. ...ಕೆಂದರೆ ಅವರು ಆಗತಾನೇ ತಮ್ಮ ವೃತ್ತಿಬದುಕಿನಲ್ಲಿ ...ಊರಿ ಭವಿಷ್ಯವನ್ನು ರೂಪಿಸಿಕೊಳ್ಳುತ್ತಿರುತ್ತಾರೆ. ಅಷ್ಟು ...ತ್ತಿಗೆ ಮನಸ್ಸೂ ದೃಢವಾಗುತ್ತಿರುತ್ತದೆ ಮತ್ತು ಚಿಂತನೆಗಳೂ ...ದಿಷ್ಟು ಪಕ್ವವಾಗಿರುತ್ತವೆ. ಬಹಳಷ್ಟು ಜನರ ಬದುಕಿನಲ್ಲಿ ...ದೇ ಹೊತ್ತಿಗೆ ಬಾಳಸಂಗಾತಿಯ ಪ್ರವೇಶವೂ ಆಗಿರುತ್ತದೆ. ...ವನವೆಂಬ ಪಯಣವನ್ನು ಆಶಾಭಾವನೆಯಿಂದ ನೋಡಲು ...ದಕ್ಕಿಂತ ಇನ್ನೇನು ಬೇಕು?

ಆದರೆ ಜಿಯಾ ಖಾನ್ ಎಂಬ ನಟಿಯ ಬದುಕಿನಲ್ಲಿ ...ದಲ್ಲ ಇಲ್ಲದಂತಾಗಿ, ಬದುಕಿನಲ್ಲಿ ಭರವಸೆಯೇ ...ಇಲ್ಲದಂತಾಗಿ ಆಕೆ ಮೊನ್ನೆ ತನ್ನ 25ರ ಹರೆಯದಲ್ಲೇ ...ಆತ್ಮಹತ್ಯೆಗೆ ಶರಣಾಗಿದ್ದಾಳೆ. ಇದು ಆಕೆಯ ಬದುಕಿನ ...ದುರಂತವೂ ಹೌದು, ಸಿನಿಮಾ ಎಂಬ ಮಾಯಾಲೋಕದ ...ದಾಕ್ಷಿಣ್ಯ ಧೋರಣೆಯ ಪ್ರತಿಫಲವೂ ಹೌದು.

ತಳುಕುಬಳುಕಿನ ಸಿನಿಮಾಲೋಕವನ್ನು ಪ್ರವೇಶಿಸಲು ...ಸಾರು ಯುವಕ ಯುವತಿಯರು ಪ್ರತಿವರ್ಷ ...ಬಣ್ಣದ ಕನಸುಗಳನ್ನು ಹೊತ್ತು ಮುಂಬೈ ದಾರಿ ...ಹಿಡಿಯುತ್ತಾರೆ. ಅಂತಹವರಲ್ಲಿ ಯಶಸ್ಸು ಸಿಗುವುದು ...ಕೇವಲವೇ ಕೆಲವು ಪ್ರತಿಭಾವಂತರಿಗೆ ಮತ್ತು ಪ್ರತಿಭೆ ...ಇಲ್ಲದಿದ್ದರೂ ಅದೃಷ್ಟ ಇರುವವರಿಗೆ ಮಾತ್ರ. ಉದಾಹರಣೆಗೆ ಈಗ ಎಲ್ಲರಿಂದ ಅತ್ಯದ್ಭುತ ನಟ ...ಎನಿಸಿಕೊಳ್ಳುತ್ತಿರುವ ನವಾಜುದ್ದೀನ್ ಸಿದ್ದಿಕಿ ಎಂಬ ನಟ ...ಎಷ್ಟೋ ವರ್ಷಗಳ ಕಾಲ ಚಿಕ್ಕಪುಟ್ಟ ಪಾತ್ರಗಳಲ್ಲೇ ...ಸಮಾಧಾನ ಕಂಡುಕೊಳ್ಳಬೇಕಿತ್ತು. ಆತನ ವಯಸ್ಸು ...ಹೆಚ್ಚಾಗುತ್ತಾ ಹೋದಂತೆ ಆತ ಕೇವಲ ಸೈಡ್‌ರೋಲ್‌ಗಳಿಗೆ ...ಸೀಮಿತವಾಗಿ ಬಿಡುವ ಅಪಾಯ ಎದ್ದು ಕಾಣುತ್ತಿತ್ತು. ...ಆದರೆ ಆತನಲ್ಲಿದ್ದ ಪ್ರತಿಭೆಯನ್ನು ವಿಭಿನ್ನವಾಗಿ ಯೋಚಿಸುವ ... ನಿರ್ದೇಶಕರು ಗುರುತಿಸಿದ್ದರಿಂದ ಈಗ ಆತ ...ಬೇಡಿಕೆಯಲ್ಲಿರುವ ನಟನಾಗಿದ್ದಾನೆ. ಹಾಗೆಯೇ ಕತ್ರೀನಾ ...ಕೈಫ್ ಎಂಬ ಬೆಡಗಿ ಮೊದಲು ಮುಂಬೈಗೆ ಬಂದಾಗ ...ಆಕೆಗೆ 'ಆಶ್ರಯ' ನೀಡಿದ್ದು ಮತ್ತು ಅವಕಾಶಗಳನ್ನು ...ಒದಗಿಸಿದ್ದು ಸಲ್ಮಾನ್ ಖಾನ್. ಕತ್ರೀನಾ ಕೈಫ್ ಚಿತ್ರರಂಗಕ್ಕೆ ...ಕಾಲಿಟ್ಟು ಒಂದು ದಶಕವಾಗುತ್ತಾ ಬಂದಿದ್ದರೂ ಆಕೆಗೆ ...ಇವತ್ತಿಗೂ ನಟನೆಯ ಗಂಧ ಗಾಳಿ ಗೊತ್ತಿಲ್ಲ. ಆದರೂ ... ಬೇಡಿಕೆಯಲ್ಲಿರುವ ನಟಿಯಾಗಿದ್ದಾಳೆ. ಸಿನಿಮಾಲೋಕ ...ಎಷ್ಟು ಕಠೋರವಾಗಿದೆ ಎಂದರೆ ವಿದ್ಯಾ ಬಾಲನ್ ತರಹದ ...ಉತ್ತಮ ನಟಿ ಕೂಡ ಹಲವು ವರ್ಷಗಳ ಕಾಲ ನಿಂದನೆಗೆ, ...ಅಪಹಾಸ್ಯಕ್ಕೆ ತುತ್ತಾಗಬೇಕಿತ್ತು. ಆಕೆ ಅದನ್ನೆಲ್ಲ ಮೀರಿ ...ನಿಂತಿದ್ದು ತನ್ನದೇ ಆದ ಸ್ಟೈಲ್ ಮತ್ತು ಬದುಕುವ ...ಶೈಲಿಯನ್ನು ರೂಪಿಸಿಕೊಂಡಾಗ, ಇತರರು ಮಾಡಲು ...ಹಿಂಜರಿದ ಪಾತ್ರಗಳನ್ನು ಉತ್ತಮವಾಗಿ ನಿಭಾಯಿಸಿದಾಗ, ...ಇತರರಂತಲ್ಲದೆ ತಾನೇ ಆಗಿ ಬದುಕುವ ಹಾದಿಯನ್ನು ...ಕಂಡುಕೊಂಡಾಗ.

ಹೀಗೆ ಅಲ್ಲೊಬ್ಬ ಪ್ರತಿಭಾವಂತ ನವಾಜುದ್ದೀನ್, ಇಲ್ಲೊಬ್ಬಳು ಅದೃಷ್ಟವಂತೆ ಕತ್ರೀನಾ ಗೆಲ್ಲುತ್ತಾರಾದರೂ ಹೆಚ್ಚಿನವರು ಸಿನಿಮಾ ಎಂಬ ಮಾಯಾಲೋಕಕ್ಕೆ ಪ್ರವೇಶವನ್ನೂ ಗಿಟ್ಟಿಸದೆ, ಸೋತು ಸುಣ್ಣವಾಗಿ ಹೇಳಹೆಸರಿಲ್ಲದಂತಾಗುತ್ತಾರೆ. ಅದರಲ್ಲೂ ಯುವತಿಯರು ತಮ್ಮೆಲ್ಲವನ್ನು ಕಳೆದುಕೊಂಡು ಬೀದಿಪಾಲಾಗುವುದೇ ಹೆಚ್ಚು. ನೆನಪಿದೆಯೇ ಇಂತಹದ್ದೇ ಕನಸುಗಳನ್ನು ಹೊತ್ತು ನಮ್ಮ ಮೈಸೂರಿನಿಂದ ಮುಂಬೈಗೆ ಹೋಗಿದ್ದ ಮರಿಯಾ ಎಂಬ ಯುವತಿ ಮುಂಬೈಯಲ್ಲಿ ಅವಕಾಶ ಸಿಗದೆ, ಖಾಸಗಿ ಬದುಕಿನಲ್ಲಿ ಜಾರಿ, ಕೊನೆಗೆ ಕೊಲೆ ಆರೋಪದ ಮೇಲೆ ಜೈಲುಪಾಲಾಗಿದ್ದು? ಮಾರಿಯಾ ತರಹ ಜೈಲು ಸೇರದಿದ್ದರೂ ಕುಡಿತ, ಡ್ರಗ್ಸ್, ಸೆಕ್ಸ್ ಇತ್ಯಾದಿಗಳಲ್ಲಿ ಕಳೆದುಹೋಗುವ ಹುಡುಗಿಯರಿಗೆ ಲೆಕ್ಕವಿಲ್ಲ.

ಆದರೆ ಜಿಯಾ ಖಾನ್ ಬದುಕು ಆಕೆಯ ಸಾವಿನಷ್ಟೇ ವಿಚಿತ್ರವಾಗಿತ್ತು. ಆಕೆ ಹಿಂದಿ ಸಿನಿಮಾಲೋಕದಲ್ಲಿ ಕೆಳಗಿನಿಂದ



ಮೇಲಕ್ಕೇರುವ ಬದಲು ಮೇಲಿನಿಂದ ಕೆಳಕ್ಕೆ ಉರುಳಿದ ಅಪರೂಪದ ನಟಿಯಾಗಿದ್ದಳು. ಆಕೆಗೆ 16 ವರ್ಷ ತುಂಬುವ ಮುನ್ನವೇ ಬಾಲಿವುಡ್ ಆಕೆಗೆ ಆಹ್ವಾನ ನೀಡಿತ್ತು. ಖ್ಯಾತ ನಿರ್ದೇಶಕ ಮಹೇಶ್ ಭಟ್ಟರ 'ತುಮ್ಸೆ ನಹಿ ದೇಖಾ' ಎಂಬ ಚಿತ್ರದಲ್ಲಿ ನಟಿಸುವ ಅವಕಾಶ ಆಕೆಗೆ ಸಿಕ್ಕಿತ್ತು. ಅದರ ಚಿತ್ರೀಕರಣದಲ್ಲಿ ಆಕೆ ಎರಡು ವಾರಗಳ ಕಾಲ ತೊಡಗಿಯೂ ಇದ್ದಳು. ನ್ಯೂಯಾರ್ಕ್‌ನಲ್ಲಿ ಜನಿಸಿ, ಬ್ರಿಟನ್ನಿನಲ್ಲಿ ಬೆಳೆದಿದ್ದ ಜಿಯಾಳಿಗೆ ಬಿಕಿನಿ ತೊಡುವುದು ಹೊಸದೂ ಆಗಿರಲಿಲ್ಲ, ಧೈರ್ಯದ ಸಂಕೇತವೂ ಆಗಿರಲಿಲ್ಲ. ಆದರೆ ಭಾರತದಲ್ಲಿ ಮೊದಲ ಚಿತ್ರದಲ್ಲೇ ಬಿಂದಾಸ್ ಆಗಿ ಬಿಕಿನಿ ತೊಟ್ಟಿರುವ ನಟಿಯರು ಅಪರೂಪ. ಅದರಲ್ಲೂ ಆರೋಗ್ಯಕರ ಮೈಮಾಟವನ್ನು ಹೊಂದಿದ್ದ ಜಿಯಾ ಬಿಕಿನಿಯನ್ನು ತೊಟ್ಟಿದ್ದ ರೀತಿಯನ್ನು ನೋಡಿ ಸೆಟ್‌ನಲ್ಲಿದ್ದ ಜನ ಬೆಚ್ಚಿಬಿದ್ದಿದ್ದರು. ಅವರ ಪ್ರತಿಕ್ರಿಯೆಯನ್ನು ನೋಡಿ ತತ್ತರಿಸಿದ್ದ ಜಿಯಾ ಆ ಸಿನಿಮಾದಿಂದಲೇ ಹೊರಬಂದಿದ್ದಳು.

ಇದಾದ ಮೂರು ವರ್ಷಗಳ ನಂತರ ಆಕೆಗೆ ಮತ್ತೊಂದು ಅವಕಾಶ ಸಿಕ್ಕಿತು. ಅದೂ ಅಂತಿಂತಹ ಅವಕಾಶವಲ್ಲ. ತನ್ನ ಚೊಚ್ಚಲ ಸಿನಿಮಾದಲ್ಲಿ ಸ್ವತಃ ಬಿಗ್ ಬಿ ಅಮಿತಾಭ್ ಬಚ್ಚನ್ ಅವರ ಮುಂದೆ ನಾಯಕಿಯಾಗಿ ನಟಿಸುವ ಅವಕಾಶ! ರಾಮ್ ಗೋಪಾಲ್ ವರ್ಮಾ ನಿರ್ದೇಶಿಸಿದ್ದ 'ನಿಶ್ಯಬ್ದ್' ಚಿತ್ರದಲ್ಲಿ ಅಮಿತಾಬ್ ಅವರದ್ದು 60ರ ಗಡಿಯನ್ನು ದಾಟಿರುವ ಮುದುಕನ ಪಾತ್ರ. ಆ ಇಳಿವಯಸ್ಸಿನಲ್ಲಿ ಅವರು ತಮ್ಮ ಮಗಳ ವಯಸ್ಸಿನ, ಜೀವನೋತ್ಸಾಹದಿಂದ ತುಂಬಿತುಳುಕುತ್ತಿರುವ ಜಿಯಾ ಎಂಬ ಯುವತಿಯನ್ನು ಕಂಡು ವಿಸ್ಮಿತರಾಗುತ್ತಾರೆ. ಆಕೆಗಾಗಿ ಹಂಬಲಿಸುತ್ತಾರೆ. ಈ ಚಿತ್ರದಲ್ಲಿ ಹೈಸ್ಕೂಲ್ ಹುಡುಗಿಯ ಪಾತ್ರದಲ್ಲಿ ಜಿಯಾ ನಟಿಸಿದಾಗ ಆಕೆಗಿನ್ನೂ 19 ವರ್ಷ ವಯಸ್ಸು. ಆದರೂ ಆಕೆ ಧೈರ್ಯವಾಗಿ ಕ್ಯಾಮೆರಾವನ್ನು ಎದುರಿಸಿದ್ದಳಲ್ಲದೆ, ತನ್ನ ಸೌಂದರ್ಯ, ಮೈಮಾಟ ಮತ್ತು ಪ್ರತಿಭೆಯನ್ನೂ ಜನ ಗಮನಿಸುವಂತೆ ನಟಿಸಿದ್ದಳು. ಬಾಕ್ಸ್ ಆಫೀಸಿನಲ್ಲಿ 'ನಿಶ್ಯಬ್ದ್' ಗೋತಾ ಹೊಡೆದರೂ ಎಲ್ಲರೂ ಜಿಯಾ ಭರವಸೆಯ ನಟಿ ಎಂದೇ ಆಕೆಯನ್ನು ಕೊಂಡಾಡಿದ್ದರು.

'ನಿಶ್ಯಬ್ದ್' ಸಿನಿಮಾದ ನಂತರ ಜಿಯಾ ನಟಿಸಿದ್ದು ಬಾಲಿವುಡ್ಡಿನ ಮತ್ತೋರ್ವ ಸೂಪರ್ ಸ್ಟಾರ್ ಆದ ಅಮೀರ್ ಖಾನ್ ಜೊತೆಗೆ. ತೆಲುಗಿನ ರಿಮೇಕ್ ಆದ 'ಘಜನಿ' ಚಿತ್ರದಲ್ಲಿ ಜಿಯಾಳದ್ದು ಎರಡನೆ ಹಿರೋಯಿನ್ ಪಾತ್ರ. ಆದರೆ ಆ ಸಿನಿಮಾಕ್ಕಾಗಿ ಅಮೀರ್ ಖಾನ್ ಬೆಳೆಸಿಕೊಂಡಿದ್ದ ಸಿಕ್ಸ್ ಪ್ಯಾಕ್, ವಿಭಿನ್ನವಾದ ಹೈ ಸ್ಟೈಲ್‌ಗಳ ಬಗ್ಗೆಯೂ, ಮೊದಲನೆ ಹಿರೋಯಿನ್ ಆಗಿದ್ದ ಆಸಿನ್‌ಳ ಮಾದಕತೆಯ ಬಗ್ಗೆಯೂ ಜನ ಹೆಚ್ಚು ಮಾತನಾಡಿದರೆ ಹೊರತು ಜಿಯಾಳತ್ತ ಯಾರ ಗಮನವೂ ಹರಿಯಲಿಲ್ಲ. ಪರಿಣಾಮವಾಗಿ 'ಘಜನಿ' ಬಾಕ್ಸ್ ಆಫೀಸಿನಲ್ಲಿ ಗೆದ್ದರೂ ಜಿಯಾಳಿಗೆ ಯಾವ ಲಾಭವೂ ಆಗಲಿಲ್ಲ.

ಆಕೆ ನಟಿಸಿದ ಮೂರನೆ ಚಿತ್ರ 'ಹೌಸ್‌ಫುಲ್'. ಈ ಚಿತ್ರದಲ್ಲಿ ಆಕೆಗಿದ್ದ ಪಾತ್ರ ಎಷ್ಟು ಚಿಕ್ಕದ್ದೆಂದರೆ ಆಕೆ ಯಾವಾಗ ತೆರೆಮೇಲೆ ಬಂದಳು ಎಂದು ಗೊತ್ತಾಗುವ ಮುನ್ನವೇ ಆಕೆ ತೆರೆಯಿಂದ ಕಣ್ಮರೆಯಾಗಿದ್ದಳು. ಈ ಚಿತ್ರವೂ ಹಿಟ್ ಆಯಿತಾದರೂ ಯಾರೂ ಜಿಯಾಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ.


ಇದಾದನಂತರದ ಮೂರು ವರ್ಷಗಳಲ್ಲಿ ಜಿಯಾ ಯಾವ ಸಿನಿಮಾದಲ್ಲೂ ನಟಿಸಲಿಲ್ಲ. ಯಾಕೆಂದರೆ ಆಕೆ ತನ್ನ ಪ್ರತಿಭೆಯನ್ನು ತೋರಿಸುವ ಉತ್ತಮ ಪಾತ್ರಗಳನ್ನು ನಿರೀಕ್ಷಿಸುತ್ತಿದ್ದರೆ ಆಕೆಯನ್ನು ಹುಡುಕಿಕೊಂಡು ಬರುತ್ತಿದ್ದದ್ದು ಬಿಚ್ಚಮ್ಮನ ಪಾತ್ರಗಳು ಅಥವಾ ಐಟಂಸಾಂಗ್ ಅವಕಾಶಗಳು.

ಇದೆಲ್ಲದರ ಮಧ್ಯೆ ಆಕೆ ತೆಲುಗು ಮತ್ತು ತಮಿಳು ಸಿನಿಮಾಗಳಲ್ಲಾದರೂ ಅವಕಾಶ ಸಿಗುತ್ತದೆಯೇ ಎಂದು ನೋಡಿದಳು. ಅಲ್ಲೂ ಅವಳಿಗೆ ಸಿಕ್ಕಿದ್ದು 'ನಿಶ್ಯಬ್ದ್' ತರಹದ ಬೋಲ್ಡ್ ಯುವತಿಯ ಪಾತ್ರಗಳು ಅಥವಾ ಸೆಕ್ಸಿ ಐಟಂ ಡ್ಯಾನ್ಸುಗಳು. ಅವೆಲ್ಲವನ್ನೂ ಆಕೆ ತಿರಸ್ಕರಿಸಿದಳು.

ಬಚ್ಚನ್ ತರಹದ ಮೇರುನಟರೊಂದಿಗೆ ಸಿನಿಮಾ ಲೋಕಕ್ಕೆ ಪಾದಾರ್ಪಣೆ ಮಾಡಿದ್ದ ಜಿಯಾಳನ್ನು ನಿರಾಶೆ ಆವರಿಸಿಕೊಳ್ಳತೊಡಗಿತ್ತು. ಆಕೆ ಮಣಿರತ್ನಂ, ಸಂಜಯ್ ಲೀಲಾ ಬನ್ಸಾಲಿ, ಸುಭಾಷ್ ಘೈ ತರಹದ ನಿರ್ದೇಶಕರೊಂದಿಗೂ, ಸೈಫ್ ಅಲಿಖಾನ್, ಸಲ್ಮಾನ್ ಖಾನ್ ಮತ್ತು ಶಾರುಖ್ ಖಾನ್ ತರಹದ ನಟರೊಂದಿಗೂ ನಟಿಸಲು ಹಂಬಲಿಸುತ್ತಿದ್ದರೆ ಅಂತಹ ಅವಕಾಶಗಳೆಲ್ಲ ಇತರೆ ನಟಿಯರ ಪಾಲಾಗುತ್ತಿದ್ದವು. ಅದಕ್ಕೆ ಕಾರಣ ಆ ಯುವತಿಯರಲ್ಲಿದ್ದ ಪ್ರತಿಭೆ ಅಲ್ಲ ಬದಲಾಗಿ ಅವರು ತೋರುತ್ತಿದ್ದ ಚಮತ್ಕಾರ ಮತ್ತು ಪಬ್ಲಿಕ್ ರಿಲೇಷನ್ಸ್ ಎಂಬುದು ಪಾಪ ಜಿಯಾಳಿಗೆ ಅರ್ಥವೇ ಆಗಲಿಲ್ಲ. ಬದಲಾಗಿ ತನ್ನ ಸುತ್ತಲೂ ಇರುವವರು ಯಶಸ್ಸಿನ ಮೆಟ್ಟಿಲನ್ನು ಏರುತ್ತಿದ್ದರೆ ತಾನು ಮಾತ್ರ ಕುಸಿಯುತ್ತಿದ್ದೇನೆ ಎಂಬ ಆತಂಕದಲ್ಲಿ ತೊಳಲಾಡಿದಳು. ನಟನೆಯನ್ನೇ ತನ್ನ ಬದುಕಿನ ಗುರಿಯಾಗಿಸಿಕೊಂಡಿದ್ದ ಜಿಯಾಳ ವೃತ್ತಿಜೀವನ ಹೀಗೆ ಆರಂಭದಲ್ಲೇ ಅಂತ್ಯಗೊಂಡಿತ್ತು. ಇದೇ ಹೊತ್ತಿಗೆ ಆಕೆಯ ವೈಯಕ್ತಿಕ ಬದುಕಿನಲ್ಲೂ ಏರುಪೇರುಗಳಾಗಿದ್ದವು. ಇದೆಲ್ಲದರಿಂದ ಕಂಗಾಲಾದ ಜಿಯಾ ಸಾವಿಗೆ ಶರಣಾದಳು. ಹಿಂದೊಮ್ಮೆ ಸಂದರ್ಶನವೊಂದರಲ್ಲಿ "ಸಿನಿಮಾ ಎಂಬ ಕಾಲ್ಪನಿಕ ಲೋಕದಲ್ಲಿ ಜನ ತಮ್ಮ ನಿತ್ಯಜೀವನದ ಬವಣೆಯಲ್ಲಿ ಮರೆಯುವುದೇ ನನ್ನಲ್ಲಿ ಸೋಜಿಗ ಹುಟ್ಟಿಸುತ್ತದೆ" ಎಂದಿದ್ದ ಜಿಯಾ ಅದೇ ಲೋಕದಲ್ಲಿ ಯಶಸ್ಸಿನಿಂದ ವಂಚಿತಳಾಗಿ ತನ್ನ ಪ್ರಾಣವನ್ನೇ ಕಳೆದುಕೊಂಡಿದ್ದು ಒಂದು ದುರಂತವಲ್ಲವೇ?

...ಮಂಡ್ಯ ಜಿಲ್ಲಾ ಸಾಹಿತ್ಯ ಸಮ್ಮೇಳನ ...ಎಚ್.ಎಲ್. ಕೇಶವಮೂರ್ತಿ ಕುರಿತು...

...ಲಂಕೇಶ್ ವಾರಪತ್ರಿಕೆಯ ಹಿರಿಯ ಬರಹಗಾರ ...ಎಚ್.ಎಲ್. ಕೇಶವಮೂರ್ತಿ ಯವರು ಈ ಬಾರಿಯ ...ಮಂಡ್ಯ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದಾರೆ. ...ಜೂನ್ 8-9 ರಂದು ಸಮ್ಮೇಳನ ನಡೆಯುತ್ತಿದೆ.



...ಕನ್ನಡದ ವಿಶಿಷ್ಟ ಬರಹಗಾರರಾಗಿ ...ತಮ್ಮದೇ ಆದ ಛಾಪು ಮೂಡಿಸಿರುವ, ...ಓದುಗರನ್ನು ಹೊಂದಿರುವ ನಮ್ಮೆಲ್ಲರ ...ಪ್ರೀತಿಯ ಎಚ್.ಎಲ್.ಕೆ ಯವರ ...ಬರವಣಿಗೆಯಲ್ಲಿ ಹಾಸ್ಯದ ಲೇಪನದಡಿ ...ಚುಚ್ಚಿ ಎಚ್ಚರಿಸುವಂತಹ ನಿಲುವು ಇರುತ್ತದೆ. ...ಲಂಕೇಶರೊಂದಿಗೆ ಹಾಗೂ ಲಂಕೇಶ್ ...ಪತ್ರಿಕೆಯೊಂದಿಗೆ ಮೂರು ದಶಕಗಳ ...ಒಡನಾಟವಿರುವ ಎಚ್‌ಎಲ್‌ಕೆ ನಾಡಿನ ...ಹಲವು ಸಾಮಾಜಿಕ ಚಳವಳಿಗಳೊಂದಿಗೂ ...ದನಿಗೂಡಿಸುತ್ತಿದ್ದಾರೆ. ಅವರ ...ಸಾಮಾಜಿಕ ಬದ್ಧತೆ ಹಾಗೂ ಪರಿಶುದ್ಧ ವ್ಯಕ್ತಿತ್ವವನ್ನು ಯುವ ...ಜನರಿಗೆ ಪ್ರೇರಣೆಯಾಗಬೇಕಿದೆ.

...ಜಿಲ್ಲಾ ಸಾಹಿತ್ಯ ಪರಿಷತ್ತಿನ ಜಾತಿ ಹಾಗೂ ಗುಂಪು ...ರಾಜಕೀಯದ ಬಗ್ಗೆ ಸ್ವತಃ ಎಚ್‌ಎಲ್‌ಕೆ ಬೇಸರಿಸಿ ...ಕೊಂಡಿದ್ದರೂ ಸಮ್ಮೇಳನದ ಅಧ್ಯಕ್ಷರ ಆಯ್ಕೆ ವಿಚಾರ ...ಬಂದಾಗ ಅವಿರೋಧವಾಗಿ ಅನುಮೋದನೆ ಮಾಡಿದ್ದು ...ಎಚ್‌ಎಲ್‌ಕೆಯವರ ವ್ಯಕ್ತಿತ್ವವನ್ನು ತೋರುವಂತಿದೆ. ...ಮಂಡ್ಯದ ಕೆಲ ಪ್ರಗತಿಪರರು, ಸಾಹಿತಿಗಳನೇಕರು, ಜಾತಿ-ಜಾತ್ಯತೀತತೆಯ ವಿಚಾರ ಬಂದಾಗ ಕೆಲವೊಮ್ಮೆ ಗೊಂದಲಕ್ಕೊಳಗಾಗಿ ನಿಷ್ಠುರ ನಿಲುವು ತೆಗೆದುಕೊಳ್ಳಲು ಹಿಂಜರಿದಾಗ ಎಚ್‌ಎಲ್‌ಕೆ ಯಾವ ಮುಲಾಜೂ ಇಲ್ಲದೆ ದಮನಿತರ ಪರವಾಗಿ ನಿಂತ ಘಟನೆಗಳಿವೆ.

ಮಂಡ್ಯ ಪಿಇಎಸ್ ಕಾಲೇಜಿನಲ್ಲಿ ಲೆಕ್ಚರರ್ ಆಗಿದ್ದ ಎಚ್‌ಎಲ್‌ಕೆ ಹೆಸರಾಂತ ರಾಜಕಾರಣಿಗಳಾಗಿದ್ದ ಶಂಕರೇಗೌಡ, ಚೌಡಯ್ಯನವರ ಆಡಳಿತದ ಕಾಲದಲ್ಲೂ ರಾಜಿಯಾಗದೆ ತಮ್ಮ ನಿಲುವು-ಧೋರಣೆಗಳೊಂದಿಗೆ ಸಾಗಿಬಂದಿದ್ದರು. ಮಂಡ್ಯ ಮೆಡಿಕಲ್ ಕಾಲೇಜ್ ಹಗರಣ, ನಗರಸಭೆಯಲ್ಲಿ ನಡೆದ ಆಪರೇಷನ್ ಕಮಲದ ವಿರುದ್ಧ ಪ್ರತಿಭಟಿಸಿದ್ದ ಎಚ್‌ಎಲ್‌ಕೆ ಸಕ್ಕರೆ ನಾಡಿನ ಸಾಕ್ಷಿಪ್ರಜ್ಞೆಯಂತೆ ಬಾಳಿ ಬದುಕುತ್ತಿದ್ದಾರೆ.

ಪತ್ರಿಕೆಯಲ್ಲಿ 'ಅಣಕ' ಅಂಕಣ ಬರೆಯುತ್ತಿರುವ ಎಚ್‌ಎಲ್‌ಕೆಯವರ ಬದುಕಿನ ಹಾದಿಯಲ್ಲಿ ಕಳೆದ ಒಂದು ಶತಮಾನ ಹಳೇ ಮೈಸೂರಿನ ಜನಜೀವನದ ನೆನಪುಗಳಿವೆ.

ಮುಂದಿನ ದಿನಗಳಲ್ಲಿ ಎಚ್‌ಎಲ್‌ಕೆ ಇದನ್ನೆಲ್ಲ ಬರೆಯುವಂತಾಗಲಿ.

ಲಂಕೇಶ್ ಬಳಗದ ಹಿರಿಯ ಒಡನಾಡಿ ಎಚ್‌ಎಲ್‌ಕೆ ಅವರಿಗೆ ಅಭಿನಂದನೆಗಳು.

ಲಂಕೇಶ್ ಬಳಗ

ಒಪೆಕ್ ಆಸ್ಪತ್ರೆಯ ದಾರುಣ ಕತೆ

ರಾಜ್ಯದ ಅತ್ಯಂತ ಹಿಂದುಳಿದ ಪ್ರದೇಶವಾದ ಹೈದರಾಬಾದ್ ಕರ್ನಾಟಕದ ನಿಕೃಷ್ಟ ಆರೋಗ್ಯ ಸನ್ನಿವೇಶವನ್ನು ಬದಲಿಸುವ ಆಶಾಜ್ಯೋತಿಯಾಗಿ ಬಂದದ್ದು ಈ ಒಪೆಕ್ ಸೂಪರ್-ಸ್ಪೆಷಾಲಿಟಿ ಆಸ್ಪತ್ರೆ. ಆದರೆ, ಸರ್ಕಾರದ ದಿವ್ಯನಿರ್ಲಕ್ಷ್ಯ ಮತ್ತು ಪಟ್ಟಭದ್ರ ಹಿತಾಸಕ್ತಿಗಳ ಒತ್ತಡಕ್ಕೆ ಸಿಲುಕಿ ಆ ಜೋತಿಯೀಗ ಮೌನವಾಗಿ ನಂದುತ್ತಿದೆ...

ರಾಜ್ಯದ ಅತ್ಯಂತ ಹಿಂದುಳಿದ ಪ್ರದೇಶವಾದ ಹೈದರಾಬಾದ್-ಕರ್ನಾಟಕಕ್ಕೆ ಆಶಾಜ್ಯೋತಿಯಾಗಿ ಬಂದಿದ್ದ ಒಪೆಕ್ ಆಸ್ಪತ್ರೆ ತನ್ನ ಬಾಗಿಲುಗಳನ್ನು ಮುಚ್ಚಿ ಮೊನ್ನೆ ಜೂನ್ ಒಂದಕ್ಕೆ ಸರಿಯಾಗಿ ಒಂದು ವರ್ಷ ತುಂಬಿತು. ಈ ಒಂದು ವರ್ಷದ ನೆನಪಿನಲ್ಲಿ ಒಪೆಕ್ ಆಸ್ಪತ್ರೆಯ ಸುಮಾರು ಇನ್ನೂರೈವತ್ತು ಉದ್ಯೋಗಿಗಳು ಆ ದಿನವನ್ನು 'ಕರಾಳ ದಿನ'ವನ್ನಾಗಿ ಆಚರಿಸಿದರು. ರಾಯಚೂರು-ಹೈದರಾಬಾದ್ ಹೆದ್ದಾರಿಯಲ್ಲಿ "ಒಪೆಕ್ ಆಸ್ಪತ್ರೆಯನ್ನು ಪುನರಾರಂಭಿಸಿ" ಎಂಬ ಘೋಷಣೆ ಕೂಗುತ್ತಾ ಅಡ್ಡ ಕುಳಿತು ಪ್ರತಿಭಟಿಸಿದರು.

ಅವರ ಪ್ರತಿಭಟನೆಯಿಂದಾಗಿ ಹೆದ್ದಾರಿಯಲ್ಲಿ ಸುಮಾರು ಒಂದೂವರೆ ಕಿ.ಮೀ. ದೂರದವರೆಗೆ ವಾಹನಗಳು ಸಾಲುಗಟ್ಟಿ ನಿಂತಿದ್ದು ಸಂಚಾರ ಕೆಲಹೊತ್ತು ಸ್ತಬ್ಧವಾಗಿಬಿಟ್ಟಿತ್ತು. ಅಷ್ಟರಲ್ಲಿ ಪೊಲೀಸರು ಪ್ರತಿಭಟನಾಕಾರರನ್ನು ಬಂಧಿಸಿ ರಾಯಚೂರಿನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಗೆ ಕರೆದೊಯ್ದರು. ನಂತರದಲ್ಲಿ ಅವರನ್ನು ಬಿಡುಗಡೆಗೊಳಿಸಲಾಯಿತು. ಜೂನ್ 15ನೇ ತಾರೀಖಿನ ಒಳಗೆ ಒಪೆಕ್ ಆಸ್ಪತ್ರೆಯ ಪುನರಾರಂಭಕ್ಕೆ ಸಂಬಂಧಿಸಿದಂತೆ ಸರ್ಕಾರ ಸೂಕ್ತ ನಿರ್ಧಾರ ಪ್ರಕಟಿಸಬೇಕೆಂದು ಗಡುವು ವಿಧಿಸಿ ಪ್ರತಿಭಟನಾಕಾರರು ಹೊರಟುಹೋದರು. ಈ ಪ್ರತಿಭಟನೆ ರಾಜಧಾನಿ ಬೆಂಗಳೂರಿಗಾಗಲೀ ಅಥವಾ ರಾಜ್ಯದ ಇನ್ನಿತರ ಪ್ರದೇಶಗಳಿಗಾಗಲೀ ತಲುಪಲೇ ಇಲ್ಲ. ಆದರೆ, ಹೈದರಾಬಾದ್-ಕರ್ನಾಟಕದಲ್ಲಿ ಒಪೆಕ್ ಆಸ್ಪತ್ರೆಯ ವಿಷಯವನ್ನು ಮತ್ತೊಮ್ಮೆ ಮುನ್ನೆಲೆಗೆ ತರುವಲ್ಲಿ ಯಶಸ್ವಿಯಾಯಿತು.

ಏನಿದು ಪ್ರತಿಭಟನೆ, ಯಾವುದೀ ಒಪೆಕ್ ಆಸ್ಪತ್ರೆ, ಯಾರು ಅದನ್ನು ಕಟ್ಟಿದರು, ಏಕೆ ಕಟ್ಟಿದರು, ಏಕೆ ಮುಚ್ಚಿದರು, ಏಕೆ ಅದನ್ನು ತೆರೆಯುತ್ತಿಲ್ಲ ಎಂಬಿತ್ಯಾದಿ ಪ್ರಶ್ನೆಗಳನ್ನು ಹೊತ್ತುಕೊಂಡು ಸ್ವಲ್ಪ ಆಳಕ್ಕೆ ಹೋದಂತೆಲ್ಲಾ ಮೊದಲೇ ಹಿಂದುಳಿದ ಪ್ರದೇಶವಾದ ಹೈದರಾಬಾದ್-ಕರ್ನಾಟಕ್ಕೆ ಸರ್ಕಾರ ಮತ್ತು ಪಟ್ಟಭದ್ರರು ಸೇರಿಕೊಂಡು ಮಾಡಿದ ದ್ರೋಹದ ಅನಾವರಣವಾಗುತ್ತಾ ಹೋಗುತ್ತದೆ.

ಅದು ಸೂಪರ್-ಸ್ಪೆಷಾಲಿಟಿ ಆಸ್ಪತ್ರೆ!

ಈ ಆಸ್ಪತ್ರೆಯ ನೈಜ ಹೆಸರು ರಾಜೀವ್ ಗಾಂಧಿ ಸೂಪರ್-ಸ್ಪೆಷಾಲಿಟಿ ಆಸ್ಪತ್ರೆ. ರಾಯಚೂರಿನ ಗಂಜ್ ಪ್ರದೇಶದಲ್ಲಿ, ರಾಯಚೂರು-ಹೈದರಾಬಾದ್ ಹೆದ್ದಾರಿಗೆ ಅಂಟಿಕೊಂಡಿರುವ 78 ಎಕರೆಗಳ ವಿಶಾಲ ಸರ್ಕಾರಿ ಜಾಗದಲ್ಲಿ ಹದಿಮೂರು ವರ್ಷಗಳ ಹಿಂದೆ ತಲೆ ಎತ್ತಿದ ಈ ಆಸ್ಪತ್ರೆಗೆ ಆ ಕಾಲದಲ್ಲೇ ಆದ ನಿರ್ಮಾಣ ವೆಚ್ಚ ಬರೋಬ್ಬರಿ ಅರವತ್ತು ಕೋಟಿ ರೂಪಾಯಿ. ವಿಶೇಷ ಎಂದರೆ ಅಷ್ಟೂ ಹಣವನ್ನು ಕೊಟ್ಟಿದ್ದು "ಪೆಟ್ರೋಲಿಯಂ ರಫ್ತುದಾರ ದೇಶಗಳ ಸಂಘಟನೆ (ಒಪೆಕ್)". ಆದ್ದರಿಂದಲೇ ಅದು ರಾಜೀವ್ ಗಾಂಧಿ ಸೂಪರ್-ಸ್ಪೆಷಾಲಿಟಿ ಆಸ್ಪತ್ರೆ ಎಂಬುದಕ್ಕಿಂತಲೂ ಒಪೆಕ್ ಆಸ್ಪತ್ರೆ ಎಂದೇ ಜನಮನದಲ್ಲಿ ಉಳಿದುಕೊಂಡುಬಿಟ್ಟಿದೆ.

ಒಪೆಕ್ ಸಂಘಟನೆ ಸೂಪರ್-ಸ್ಪೆಷಾಲಿಟಿ ಆಸ್ಪತ್ರೆಯನ್ನು ಕಟ್ಟುವುದಕ್ಕೆ ರಾಯಚೂರನ್ನೇ ಆಯ್ದುಕೊಂಡಿದ್ದಕ್ಕೆ ಹಲವು ಕಾರಣಗಳಿದ್ದವು. ಮೊದಲನೆಯದು, ಇಡೀ ದೇಶದಲ್ಲೇ ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಒಂದಾದ ಹೈದರಾಬಾದ್-ಕರ್ನಾಟಕಕ್ಕೆ ರಾಯಚೂರೇ ಕೇಂದ್ರಸ್ಥಾನ. ಕಡುಬಡತನದಲ್ಲಿ ಬದುಕುತ್ತಿರುವ ಈ ಪ್ರದೇಶದ ಜನಕ್ಕೆ ಉತ್ತಮ ಗುಣಮಟ್ಟದ ವೈದ್ಯಕೀಯ ಸೇವೆಗಳನ್ನು ಕೊಂಡುಕೊಳ್ಳುವಷ್ಟು ಆರ್ಥಿಕ ಚೈತನ್ಯ ಇಲ್ಲ. ಹೀಗಾಗಿ, ಈ ಬಡಜನರಿಗೆ ಉಚಿತವಾಗಿ ಅಥವಾ ಕೈಗೆಟುಕುವ ಬೆಲೆಯಲ್ಲಿ ಸೂಪರ್-ಸ್ಪೆಷಾಲಿಟಿ ವೈದ್ಯಕೀಯ ಸೇವೆಗಳನ್ನು ಒದಗಿಸಬೇಕೆಂಬುದು ಒಪೆಕ್‌ನ ಉದ್ದೇಶವಾಗಿತ್ತು. ಇನ್ನು ಎರಡನೇ ಕಾರಣ ಎಂದರೆ ಹೈದರಾಬಾದ್ ನಿಜಾಮನ ಆಡಳಿತಕ್ಕೆ ಒಳಪಟ್ಟ ಈ ಪ್ರದೇಶದಲ್ಲಿ ಮತ್ತು ಇದಕ್ಕೆ ಹೊಂದಿಕೊಂಡಿರುವ ಮಹಾರಾಷ್ಟ್ರದ ದಕ್ಷಿಣ ಭಾಗದಲ್ಲಿ ಮುಸ್ಲಿಮರು ಕೇಂದ್ರೀಕರಣಗೊಂಡಿರುವುದು. ಪೆಟ್ರೋಲಿಯಂ ಉತ್ಪನ್ನಗಳನ್ನು ರಫ್ತು ಮಾಡುವ ದೇಶಗಳೂ ಮುಸ್ಲಿಂ ದೇಶಗಳೇ ಆಗಿರುವುದರಿಂದ ಭಾರತದಲ್ಲಿ ಕಡುಬಡತನದಲ್ಲಿ ಬದುಕುತ್ತಿರುವ ಮುಸ್ಲಿಂ ಸಮುದಾಯಕ್ಕೆ ಉಚಿತವಾಗಿ ಆರೋಗ್ಯ ಸೇವೆಗಳನ್ನು ಒದಗಿಸಬೇಕೆಂಬುದು ಒಪೆಕ್‌ಗಿದ್ದ ಎರಡನೇ ಕಾರಣವಾಗಿತ್ತು. ಹೀಗಾಗಿ, ಅದು ಸೂಪರ್-ಸ್ಪೆಷಾಲಿಟಿ ಆಸ್ಪತ್ರೆಯನ್ನು ಕಟ್ಟುವುದಕ್ಕೆ ರಾಯಚೂರನ್ನೇ ಆಯ್ದುಕೊಂಡಿತು. ಆಸ್ಪತ್ರೆ ನಿರ್ಮಾಣಕ್ಕೆ ಬೇಕಾಗಿದ್ದ 78 ಎಕರೆ ಜಾಗವನ್ನು ಅಂದಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರ ಒದಗಿಸಿತು. ಮೂರು ವರ್ಷಗಳ ಸತತ ಪರಿಶ್ರಮದ ನಂತರ ಬೆಂಗಳೂರಿನ ಪ್ರತಿಷ್ಠಿತ ಮತ್ತು ಅತ್ಯುತ್ತಮ ಖಾಸಗೀ ಆಸ್ಪತ್ರೆಗಳನ್ನೂ ನಾಚಿಸುವಂತಹ ಹೈಟೆಕ್ ಸೂಪರ್-ಸ್ಪೆಷಾಲಿಟಿ ಆಸ್ಪತ್ರೆ ಅತ್ಯಂತ ಹಿಂದುಳಿದ ರಾಯಚೂರಿನಲ್ಲಿ ತಲೆಯೆತ್ತಿ ನಿಂತಿತು.



ಬಾಗಿಲು ಮುಚ್ಚಿರುವ ಒಪೆಕ್ ಆಸ್ಪತ್ರೆ



ಒಪೆಕ್ ಆಸ್ಪತ್ರೆಯನ್ನು ಪುನರ್ ಆರಂಭಸಲು ಒತ್ತಾಯಿಸಿ ಪ್ರತಿಭಟನೆ

2000ನೇ ಸಾಲಿನ ಆಕ್ಟೋಬರ್ 18ರಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರೇ ಅದನ್ನು ಉದ್ಘಾಟಿಸಿದರು. 422 ಹಾಸಿಗೆಯ ಈ ಹೈಟೆಕ್ ಆಸ್ಪತ್ರೆ ಇಡೀ ಹೈದರಾಬಾದ್-ಕರ್ನಾಟಕದ ಮೊಟ್ಟ ಮೊದಲ ಮತ್ತು ಏಕೈಕ ಸೂಪರ್-ಸ್ಪೆಷಾಲಿಟಿ ಆಸ್ಪತ್ರೆಯಾಗಿತ್ತು. ಕಡುಬಡವರಿಗೆ ಅತ್ಯುತ್ತಮ ವೈದ್ಯಕೀಯ ಸೇವೆ ಕೊಡುವುದನ್ನೇ ತನ್ನ ಮೂಲಧ್ಯೇಯವಾಗಿಟ್ಟುಕೊಂಡು ತಲೆಯೆತ್ತಿದ ಈ ಆಸ್ಪತ್ರೆಯ ಮೇಲೆ ಇಡೀ ಹೈದರಾಬಾದ್-ಕರ್ನಾಟಕದ ಜನ ಅಪಾರ ನಿರೀಕ್ಷೆಯಿಟ್ಟುಕೊಂಡಿದ್ದರು. ಇದು ಈ ಹಿಂದುಳಿದ ಪ್ರದೇಶದ ನಿಕೃಷ್ಟ ಆರೋಗ್ಯ ಸನ್ನಿವೇಶವನ್ನು ಆಮೂಲಾಗ್ರವಾಗಿ ಬದಲಿಸುತ್ತದೆ ಎಂದೇ ಭಾವಿಸಿದ್ದರು.

ಆದರೆ ದುರಂತ ನೋಡಿ. ಬೆಂಗಳೂರಿನ ಹೈಟೆಕ್ ಆಸ್ಪತ್ರೆಗಳಿಗೆ ಹೋಲಿಸಬಹುದಾದ ಈ ಅತ್ಯದ್ಭುತ ಸೂಪರ್-ಸ್ಪೆಷಾಲಿಟಿ ಆಸ್ಪತ್ರೆಯೇನೋ ಪ್ರಾರಂಭವಾಯಿತು. ಆದರೆ, ಅತ್ಯಂತ ಹಿಂದುಳಿದ ಪ್ರದೇಶಕ್ಕೆ ಹೋಗಿ ಕೆಲಸ ಮಾಡುವುದಕ್ಕೆ, ನುರಿತ ವೈದ್ಯರು, ಸರ್ಜನ್‌ಗಳು, ತಜ್ಞ ವೈದ್ಯರು, ಟೆಕ್ನಿಷಿಯನ್‌ಗಳು ಹಿಂದೇಟು ಹಾಕತೊಡಗಿದರು. ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ತಂದ ಅತ್ಯಾಧುನಿಕ ಯಂತ್ರಗಳು, ವೈದ್ಯಕೀಯ ಸಲಕರಣೆಗಳು ನಿಧಾನಕ್ಕೆ ಧೂಳುಹಿಡಿಯಲಾರಂಭಿಸಿದವು. ರಾಜ್ಯ ಸರ್ಕಾರ ಮನಸ್ಸು ಮಾಡಿದ್ದರೆ ಒಪೆಕ್ ಯಾವ ಸದುದ್ದೇಶದಿಂದ ಪ್ರಾರಂಭವಾಯಿತೋ ಆ ಉದ್ದೇಶವನ್ನು ಈಡೇರಿಸುವ ನಿಟ್ಟಿನಲ್ಲಿ ಕಠಿಣ ನಿರ್ಧಾರಗಳನ್ನು ತೆಗೆದುಕೊಂಡು ಕಾರ್ಯೋನ್ಮುಖವಾಗಬಹುದಿತ್ತು. ಆದರೆ, ಅಂತಹದ್ದೊಂದು ಇಚ್ಛಾಶಕ್ತಿಯನ್ನು ಸರ್ಕಾರ ಪ್ರದರ್ಶಿಸಲಿಲ್ಲ. ಈ ಆಸ್ಪತ್ರೆ ಪ್ರಾರಂಭವಾದ ಒಂದು ವರ್ಷದೊಳಗಾಗಿ, ಅಂದರೆ 2001ರ ಅಕ್ಟೋಬರ್ 10ರಂದು, ಅಪೋಲೋ ಹಾಸ್ಪಿಟಲ್ಸ್ ಎಂಟರ್‌ಪ್ರೈಸಸ್ ಲಿಮಿಟೆಡ್ ಸಂಸ್ಥೆಗೆ 10 ವರ್ಷಗಳ ಒಪೆಕ್ ಆಸ್ಪತ್ರೆಯ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಿ ಕೈತೊಳೆದುಕೊಂಡಿತು. ಅಪೋಲೋ ಆಸ್ಪತ್ರೆಗಳ ಸಮೂಹವು 2002ರ ಏಪ್ರಿಲ್ 13ರಂದು ಒಪೆಕ್ ಆಸ್ಪತ್ರೆಯ ಸಂಪೂರ್ಣ ಆಡಳಿತವನ್ನು ವಹಿಸಿಕೊಂಡಿತು. ಸರ್ಕಾರ ಮತ್ತು ಅಪೋಲೋ ಸಂಸ್ಥೆಯ ನಡುವೆ ನಡೆದ ಒಪ್ಪಂದದ ಪ್ರಕಾರ ಆಸ್ಪತ್ರೆಯ ನಿರ್ವಹಣೆಗಾಗಿ ಪ್ರತೀ ತಿಂಗಳು ಒಂದು ಕೋಟಿ ರೂಪಾಯಿ ಕೊಡುವುದಕ್ಕೆ ಸರ್ಕಾರ ಒಪ್ಪಿಕೊಂಡಿತು. ಮಾತ್ರವಲ್ಲ, ಸೂಪರ್-ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಇನ್ನಷ್ಟು ವೈದ್ಯಕೀಯ ಸಲಕರಣೆಗಳನ್ನು ಕೊಂಡುಕೊಳ್ಳುವುದಕ್ಕೆ 9.5 ಕೋಟಿ ರೂಪಾಯಿ ಹಾಗೂ ಆಡಳಿತಾತ್ಮಕ ವೆಚ್ಚಕ್ಕೆ 10.1 ಕೋಟಿ ರೂಪಾಯಿ ಕೊಡುವುದಕ್ಕೂ (ಒಮ್ಮೆ ಮಾತ್ರ) ಸರ್ಕಾರ ಒಪ್ಪಿಕೊಂಡಿತು.


ಒಪೆಕ್ ಆಸ್ಪತ್ರೆಯ ಆಡಳಿತ ನಿರ್ವಹಣೆಯನ್ನು ಅಪೋಲೋ ಸಮೂಹ ವಹಿಸಿಕೊಂಡ ನಂತರವೂ ಹೈದರಾಬಾದ್-ಕರ್ನಾಟಕದ ಜನಕ್ಕೆ ಈ ಆಸ್ಪತ್ರೆಯಿಂದ ಉತ್ತಮ ಆರೋಗ್ಯ ಸೇವೆಗಳು ಕೈಗೆಟುಕುವ ದರದಲ್ಲಿ ದೊರಕಿದವು. ಪ್ರತಿ ವರ್ಷ ಸರಾಸರಿ 25,000 ರೋಗಿಗಳು ಈ ಆಸ್ಪತ್ರೆಯ ಪ್ರಯೋಜನ ಪಡೆದುಕೊಳ್ಳಲಾರಂಭಿಸಿದರು. ಅವರಲ್ಲಿ ಬಹುತೇಕರು ಹಿಂದುಳಿದ ಹೈದರಾಬಾದ್-ಕರ್ನಾಟಕದ ಆರ್ಥಿಕವಾಗಿ ಹಿಂದುಳಿದ ಜನರು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಏಕೆಂದರೆ, ಈ ಆಸ್ಪತ್ರೆಯಲ್ಲಿ ಬಡತನ ರೇಖೆಗಿಂತ ಮೇಲಿರುವ ಜನ[…] ರಿಯಾಯಿತಿ ದರದಲ್ಲೂ ಹಾಗೂ ಬಡತನ ರೇಖೆಗಿ[…] ಕೆಳಗಿರುವ ಜನಕ್ಕೆ ಉಚಿತವಾಗಿಯೂ ಹೈಟೆ[…] ಸೂಪರ್-ಸ್ಪೆಷಾಲಿಟಿ ಚಿಕಿತ್ಸೆ ಸಿಗತ್ತಿತ್ತು. (ಅಪೋಲೋ[…] ಸಂಸ್ಥೆಯೇನೂ ರಿಯಾಯಿತಿ ದರದಲ್ಲಿ ಅಥವಾ ಉಚಿತವಾ[…] ಚಿಕಿತ್ಸೆ ಕೊಡುತ್ತಿರಲಿಲ್ಲ. ಎಪಿಎಲ್ ಮತ್ತು ಬಿಪಿಎ[…] ರೋಗಿಗಳಿಗೆ ತಾನು ನೀಡಿದ ಚಿಕಿತ್ಸೆಯ ಪಟ್ಟಿಯ[…] ಸರ್ಕಾರಕ್ಕೆ ಸಲ್ಲಿಸಿ ಹಣ ಪಡೆಯುತ್ತಿತ್ತು.)

ಅಪೋಲೋ ಸಮೂಹ ಮತ್ತು ಸರ್ಕಾರದ ನಡು[…] ಒಪ್ಪಂದ 2012ರ ಜೂನ್ 1ಕ್ಕೆ ಮುಕ್ತಾಯವಾಯಿತ[…] ಆ ಒಪ್ಪಂದವನ್ನು ನವೀಕರಣ ಮಾ[…] ಮುಂದುವರೆಸುವುದಕ್ಕಾಗಲೀ ಅಥವಾ ಒಪೆಕ್ ಆಸ್ಪತ್ರೆ[…] ನಿರ್ವಹಣೆಯನ್ನು ತನ್ನ ಕೈಗೇ ತೆಗೆದುಕೊಳ್ಳುವುದಕ್ಕಾಗ[…] ಕರ್ನಾಟಕ ಸರ್ಕಾರ ಆಸಕ್ತಿ ತೋರಲಿಲ್ಲ. ಪರಿಣಾಮವ[…] 2012ರ ಜೂನ್ 1ರಂದು ಒಪೆಕ್ ಆಸ್ಪತ್ರೆ ತನ್ನ 2[…] ನೌಕರರನ್ನು ಬೀದಿಗೆ ತಳ್ಳಿ, ರೋಗಿಗಳನ್ನು ಹೊರಗೆ ಕ[…] ಅನಿರ್ದಿಷ್ಟಾವಧಿಗೆ ತನ್ನ ಬಾಗಿಲುಗಳನ್ನು ಮುಚ್ಚಿಬಿಟ್ಟ[…] ಆಗ ರಾಜಧಾನಿಯಲ್ಲಿ ನಡೆಯುತ್ತಿದ್ದ ರಾಜಕೀಯ ತಿಕ್ಕಾ[…] ಅಧಿಕಾರಕ್ಕಾಗಿ ನಡೆಯುತ್ತಿದ್ದ ರೆಸಾರ್ಟ್ ಯಾತ್ರೆಗ[…] ಅಧಿಕಾರಾರೂಢ ಬಿಜೆಪಿಯಲ್ಲಿ ವಾರಕ್ಕೊವ[…] ಸ್ಫೋಟಗೊಳ್ಳುತ್ತಿದ್ದ ಬಂಡಾಯಗಳು, ದಿನಕ್ಕೊಂ[…] ಬಯಲಾಗುತ್ತಿದ್ದ ಹಗರಣಗಳು - ಇವೆಲ್ಲವುಗಳ ನಡು[…] ಒಪೆಕ್ ಆಸ್ಪತ್ರೆಯನ್ನು ವಿಧಾನಸೌಧದಲ್ಲಿ ಕುಳಿತಿದ್ದ [...] ಮರೆತೇಬಿಟ್ಟರು. ಹೀಗೆ ಹೈದರಾಬಾದ್-ಕರ್ನಾಟ[…] ಆರೋಗ್ಯ ನಕಾಶೆಯನ್ನೇ ಬದಲಿಸುತ್ತದೆ ಎಂದು ನಂಬ[…] ಒಪೆಕ್ ಸೂಪರ್-ಸ್ಪೆಷಾಲಿಟಿ ಆಸ್ಪತ್ರೆ ಜನರ ಅ[…] ನಿರೀಕ್ಷೆಗಳನ್ನು ಹುಸಿ ಮಾಡಿ ಬಾಗಿಲು ಹಾಕಿಕೊಂಡ[…] ಜನರಲ್ಲಿ ತೀವ್ರ ಅಸಮಾಧಾನ ತಂದಿತು. ಆ ಅಸಮಾಧಾನ[…] ನಿಧಾನಕ್ಕೆ ಆಕ್ರೋಶವಾಗಿ ಮಾರ್ಪಟ್ಟು ಸಂಘಟ[…] ಹೋರಾಟಕ್ಕೆ ಜನ್ಮ ನೀಡಿತು. ಒಪೆಕ್ ಆಸ್ಪತ್ರೆಯ[…] ಪುನರಾರಂಭಿಸಿ ಎಂಬ ಘೋಷಣೆ ರಾಯಚೂ[…] ಆಗಸದಲ್ಲಿ ಮಾರ್ದನಿಸತೊಡಗಿತು.

"ಐವತ್ತೇಳು ದಿನಗಳ ನಿರಂತರ ಹೋರಾಟದ ನಂ[…] ಸರ್ಕಾರ ನಮ್ಮೊಂದಿಗೆ ಎರಡು ಸುತ್ತಿನ ಮಾತುಕತೆ ನಡೆಸಿ[…] ಒಪೆಕ್ ಆಸ್ಪತ್ರೆಯನ್ನು ಅದರ ಮೂಲ ಸ್ಥಿತಿಯ[…] ಪುನರಾರಂಭಿಸುವುದಾಗಿ ಸರ್ಕಾರ ಒಪೆಕ್ ಆಸ್ಪತ್ರೆ ಉ[…] ಹೋರಾಟ ಸಮಿತಿ, ಆಸ್ಪತ್ರೆಯ ನೌಕರರ ಸಂಘ ಮ[…] ಜಿಲ್ಲೆಯ ಜನಪ್ರತಿನಿಧಿಗಳ ಸಮ್ಮುಖದಲ್ಲಿ ಘೋಷಿಸಿ[…] ಇದಕ್ಕಾಗಿ 146 ಎ ಗ್ರೂಪ್ ಹುದ್ದೆಗಳನ್ನು, 13[…] ಗ್ರೂಪ್ ಹುದ್ದೆಗಳನ್ನು, 329 ಸಿ ಗ್ರೂಪ್ ಹುದ್ದೆಗಳ[…] ಹಾಗೂ 160 ಡಿ ಗ್ರೂಪ್ ಹುದ್ದೆಗಳನ್ನು ಸೃಜಿಸುವುದ[…] ಸರ್ಕಾರ 2012ರ ನವೆಂಬರ್ 3ರಂದು ಘೋಷಿಸಿ[…] ಅದಕ್ಕೆ ಅಗತ್ಯವಿರುವ 32.32 ಕೋಟಿ ರೂಪಾಯಿಗಳ[…] ಕೂಡಲೇ ಮಂಜೂರು ಮಾಡುವುದಾಗಿ ಆಶ್ವಾಸನೆ ನೀಡಿ[…] ಆದರೆ ಅವೆಲ್ಲಾ ಕೇವಲ ಆಶ್ವಾಸನೆಗಳಾಗಿವೇ ಉಳಿದಿ[…] ಎರಡು ಕೋಟಿ ರೂಪಾಯಿ ಮತ್ತು ಒ[…] ವಿಶೇಷಾಧಿಕಾರಿಯ ನೇಮಕ ಬಿಟ್ಟರೆ ಏನೂ ಆಗಿ[…] ಇದು ಸರ್ಕಾರ ನಮಗೆ ದ್ರೋಹ ಬಗೆದ ಪರಿ" ಎಂ[…] ಪ್ರತಿಭಟನಾಕಾರರು 'ಲಂಕೇಶ್' ಜೊತೆಗೆ ತಮ್ಮ ನೋ[…] ಹಂಚಿಕೊಂಡರು.

ಒಪೆಕ್ ಆಸ್ಪತ್ರೆಯ ಬಗ್ಗೆ ಮೊದಲಿನಿಂದಲೂ ತಾತ[…] ಮತ್ತು ಬೇಜವಾಬ್ದಾರಿಯ ನಿಲುವನ್ನು ತಾಳುತ್ತಾ ಬಂದಿರ[…] ಸರ್ಕಾರ ಅದನ್ನು ಪುನರಾರಂಭಿಸುವ ಯೋಚನೆಯ[…] ಮಾಡುತ್ತಿರಲಿಲ್ಲವೋ ಏನೋ? ಆದರೆ, ಜನರ ಪ್ರತಿಭ[…] ತೀವ್ರವಾದ್ದರಿಂದ ಏನಾದರೂ ಒಂದು ತೀರ್ಮಾ[…] ತೆಗೆದುಕೊಳ್ಳುವ ಇಕ್ಕಟ್ಟಿಗೆ ಸಿಲುಕಿತು. ಹಾಗಾಗಿ, ಒಂ[…] ಪ್ರತಿಭಟನಾಕಾರರ ಎದುರು ಒಪೆಕ್ ಆಸ್ಪತ್ರೆಯ[…] ಪುನರಾರಂಭಿಸುವ ಮಾತಾಡಿ ಅವರ ಕಣ್ಣೊರೆಸು[…] ಇನ್ನೊಂದೆಡೆ ಅದನ್ನು ರಾಯಚೂರು ವೈದ್ಯಕೀಯ ವಿಜ್ಞಾ[…]

>>>



ಬಣಗುಟ್ಟುತ್ತಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ದೃಶ್ಯ

ಚಿತ್ರದುರ್ಗ: ಎಂ.ಪಿ ಎಲೆಕ್ಷನ್‌ಗೆ 'ಕೈ' ಕಸರತ್ತು

ಚಿತ್ರದುರ್ಗದಲ್ಲಿ ಮಹಾಸಮರ ಮುಗಿಯುತ್ತಿರು
ಯೇ ಮುಂಬರುವ ಮಹಾಸಮರದ ಲೆಕ್ಕಾಚಾರಗಳು
ವಾಗಿವೆ. ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ
ಕ್ಷೇತ್ರಗಳ ಪೈಕಿ ನಾಲ್ಕರಲ್ಲಿ ಅಮೋಘ ಜಯಭೇರಿ
ಸಿರುವ 'ಕೈ' ಪಡೆ ಚಿತ್ರದುರ್ಗದಲ್ಲಿ ಮತ್ತೊಮ್ಮೆ
ಆಧಿಪತ್ಯ ಗಿಟ್ಟಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಚಳ್ಳಕೆರೆ,
ಯೂರು, ಹೊಳಲ್ಕೆರೆ, ಹೊಸದುರ್ಗ ಕ್ಷೇತ್ರಗಳಲ್ಲಿ
ಗ್ರೆಸ್ ಅಭ್ಯರ್ಥಿಗಳು ಗೆದ್ದು ಬಂದಿದ್ದಾರೆ. ಅದರಲ್ಲೂ
ಳಲ್ಕೆರೆ ಕ್ಷೇತ್ರದಿಂದ ಬರೋಬ್ಬರಿ 20 ಸಾವಿರ ಮತಗಳ
ರದಲ್ಲಿ ವಿಜಯದ ನಗೆ ಬೀರಿರುವ ಎಚ್.ಆಂಜನೇಯ
ದ ಮಟ್ಟಿಗೆ ಹೊಸದೊಂದು ದಾಖಲೆಯನ್ನೆ ಸೃಷ್ಟಿಸಿದ್ದಾರೆ.
ಸರಿಯಾಗಿ ಸಿದ್ದರಾಮಯ್ಯನವರ ಸಚಿವ ಸಂಪುಟದಲ್ಲಿ
ಜ ಕಲ್ಯಾಣ ಇಲಾಖೆಯಂತಹ ಪ್ರಮುಖ ಖಾತೆಯೂ
ಗೆ ಒಲಿದುಬಂದಿದೆ. ಚುನಾವಣಾ ನಂತರದಲ್ಲಿ
ಯುತ್ತಿರುವ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ
ಪಕ್ಷನಿಷ್ಠೆ ಇಲ್ಲವೇ ಸಿದ್ದು ಆಪ್ತತೆಯ ಕಾರಣಕ್ಕೆ
ನೇಯಗೆ ಮಂತ್ರಿ ಸ್ಥಾನ ದಕ್ಕಿಲ್ಲ ಎನ್ನುವುದು
ಹವಾಗುತ್ತದೆ. ಮುಂಬರುವ ಲೋಕಸಭಾ
ವಣೆಯ ವೇಳೆಗೆ ಬಿಜೆಪಿ ತೆಕ್ಕೆಯಲ್ಲಿರುವ ಚಿತ್ರದುರ್ಗ
ಕ್ಷೇತ್ರವನ್ನು ಕಾಂಗ್ರೆಸ್ ಗದ್ದುಗೆ ಮಾಡಿಕೊಳ್ಳಲು
ಒಂದು ಜಾಣ ನಡೆಯನ್ನು ಇಟ್ಟಿರುವುದಂತೂ ಸತ್ಯ.
ಗ್ರೆಸ್ ಅಲೆ, ಅನುಕೂಲಕರ ಜಾತಿ ಲೆಕ್ಕಾಚಾರ, ಸಿದ್ದು
ಒಲವು ಇವೆಲ್ಲವನ್ನೂ 2014ರ ಸಮರದವರೆಗೂ
ದ್ದುಕೊಳ್ಳಬೇಕೆಂದರೆ ಇಂತಹದ್ದೊಂದು ನಿರ್ಧಾರ
ನಿವಾರ್ಯವಾಗಿತ್ತು. ಆದ್ದರಿಂದಲೇ ಕರ್ನಾಟಕ
ಕಾರಣದ ಇತಿಹಾಸದಲ್ಲೆ ಪ್ರಪ್ರಥಮ ಬಾರಿಗೆ
ಹೊಳಲ್ಕೆರೆಯಿಂದ ಗೆದ್ದ ಶಾಸಕರೊಬ್ಬರು ಸಚಿವ
ರಾಗೇರುವಂತಾಗಿದೆ.

ಹಾಗೆ ನೋಡಿದರೆ ಜಿಲ್ಲೆಯ ಮೊಳಕಾಲ್ಮೂರು ಮತ್ತು
ದುರ್ಗ ಮತಕ್ಷೇತ್ರಗಳಲ್ಲಿ ಈ ಬಾರಿಯ ಚುನಾವಣೆಯಲ್ಲಿ
ಗ್ರೆಸ್ ಮುಗ್ಗರಿಸಿರುವುದು ಅಭ್ಯರ್ಥಿಗಳ ಸ್ವಯಂಕೃತ
ಪರಾಧದಿಂದಾಗಿಯೇ ಹೊರತು ಕಾಂಗ್ರೆಸ್ ಮೇಲಿನ
ತಿರಸ್ಕಾರದಿಂದಲ್ಲ. ಮೊಳಕಾಲ್ಮೂರಿನಲ್ಲಿ ಕೈ ಪಾಳಯದ
ಅಭ್ಯರ್ಥಿಯಾಗಿದ್ದ ಎಸ್.ವೈ.ಗೋಪಾಲಕೃಷ್ಣ ಈ ಹಿಂದೆ
ಬಾರಿ ಶಾಸಕರಾಗಿದ್ದಂತವರು. ಈ ಬಾರಿ ಗೆದ್ದಿದ್ದರೆ
ಕಾರಣ ಮುಂದಿಟ್ಟುಕೊಂಡು ಮಂತ್ರಿಯಾಗುವ
ಅವಕಾಶವೂ ಅವರಿಗಿತ್ತು. ಹಾಗಾಗಿಯೇ ತಮ್ಮನ್ನು ತಾವು
ಜಾತ-ಶತ್ರು, ಪ್ರಶ್ನಾತೀತ ನಾಯಕನೆಂದೇ ಅವರು
ಕೊಂಡದ್ದು ಈ ಸಲ ಸೋಲಾಗಿ ಆವರಿಸಿದೆ.
ಮೊಳಕಾಲ್ಮೂರಿನಲ್ಲಿ ಮುಸ್ಲಿಮ್ ಮತ್ತು ನಾಯಕ ಜನಾಂಗದ
ಗಳೆ ಬಹು ಸಂಖ್ಯೆಯಲ್ಲಿದ್ದು, ಗೋಪಾಲಕೃಷ್ಣರ
ಸಡ್ಡೆಗೇಡಿತನದಿಂದಾಗಿ ಆ ಮತಗಳೆಲ್ಲ ಕಾಂಗ್ರೆಸ್‌ನಿಂದ
ವಾಲಿದ್ದವು.

ನ್ನು ಚಿತ್ರದುರ್ಗದಿಂದ ಸ್ಪರ್ಧಿಸಿದ್ದ ಭೀಮಸಮುದ್ರದ
ಧಣಿ ಜಿ.ಎಸ್.ಮಂಜುನಾಥ್‌ರ ಉತ್ಸಾಹವೆಲ್ಲ ಟಿಕೆಟ್
ಕೊಳ್ಳುವಷ್ಟಕ್ಕೇ ಖಾಲಿಯಾಗಿ ಹೋದದ್ದೇ ಅವರಿಗೆ
ವಾಗಿ ಪರಿಣಮಿಸಿತು. ಚುನಾವಣಾ ಪ್ರಚಾರ
ಯುವ ಹಂತಕ್ಕೆ ಬರುತ್ತಿದ್ದಂತೆಯೇ ಸಾಕ್ಷಾತ್
ಸೋಲನ್ನು ಕಂಡವರಂತೆ ಖಿನ್ನರಾದ ಅವರು ಕಡೇ
ಘಳಿಗೆಗಳಲ್ಲಿ ಕಾರ್ಯಕರ್ತರನ್ನೂ ದೂರವಿಡುವಷ್ಟರ ಮಟ್ಟಿಗೆ
ಬೆದರಿ ಹೋದದ್ದು ಕೈ ಗೆಲುವನ್ನು ಮತ್ತಷ್ಟು ದೂರಕ್ಕೆ
ಕೊಂಡೊಯ್ದಿತ್ತು. ಕಾಂಗ್ರೆಸ್ ಅಭ್ಯರ್ಥಿಗಳು ಈ ಎರಡು
ಕ್ಷೇತ್ರದಲ್ಲಿ ಸ್ವಲ್ಪಮಟ್ಟಿಗಿನ ಕಾಳಜಿ ತೋರಿದ್ದರೆ
ಗೆದ್ದುಬಿಡಬಹುದಾದ ಸಾಧ್ಯತೆಯೂ ಇತ್ತು. ಅಂತಹ
ಕಾಂಗ್ರೆಸ್ ಪರವಾದ ಅಲೆಯೇ ಜಿಲ್ಲೆಯಲ್ಲಿತ್ತು. ಇದಕ್ಕೆ
ಹಿರಿಯೂರಿನ ರಾಜಕೀಯ ಫಲಿತಾಂಶವೇ ಸಾಕ್ಷಿ.

ಹಿರಿಯೂರಿನಲ್ಲಿ ಮಾಜಿ ಸಂಸದ ಕೋದಂಡರಾಮಯ್ಯ
ಕಾಂಗ್ರೆಸ್ ಟಿಕೆಟ್‌ನ ಪ್ರಬಲ ಆಕಾಂಕ್ಷಿಯಾಗಿದ್ದರು. ಆದರೆ
ಕಡೇ ಘಳಿಗೆಯಲ್ಲಿ ಕಳೆದ ಬಾರಿಯ ಪಕ್ಷೇತರ ಭೂಪ
ಡಿ.ಸುಧಾಕರ್‌ಗೆ ಕೈ ಟಿಕೆಟ್ ಲಭಿಸಿದ್ದರಿಂದ
ಕೋದಂಡರಾಮಯ್ಯನಿಗೆ ಭಾರೀ ಮುಖಭಂಗವೇ
ಆದಂತಾಗಿತ್ತು. ಇದಕ್ಕೆ ಪ್ರತೀಕಾರ ಅವರು ಸಕ್ರಿಯ
ರಾಜಕಾರಣದಿಂದ ದೂರ ಉಳಿಯುವುದಾಗಿ ಹೇಳಿದರು.

ಇತ್ತ ಸುಧಾಕರ್ ವಿರುದ್ಧ ಜೆಡಿಎಸ್ ತನ್ನ
ಅಭ್ಯರ್ಥಿಯನ್ನಾಗಿ ಎ.ಕೃಷ್ಣಪ್ಪರನ್ನು ಕಣಕ್ಕಿಳಿಸಿತ್ತು. ಇಲ್ಲಿ ಗೊಲ್ಲ
ಜನಾಂಗದ ಮತಗಳೆ ನಿರ್ಣಾಯಕವಾಗಿದ್ದು ಎ.ಕೃಷ್ಣಪ್ಪ ಮತ್ತು
ಕೋದಂಡರಾಮಯ್ಯ ಇಬ್ಬರೂ ಅದೇ ಜಾತಿಗೆ ಸೇರಿದವರು.
ಕೋದಂಡರಾಮಯ್ಯ ಅವರಿಗೆ ಕಾಂಗ್ರೆಸ್ ಟಿಕೆಟ್ ಕೈತಪ್ಪಿದ್ದು
ಮತ್ತು ಎ.ಕೃಷ್ಣಪ್ಪ ನಿಂತಿದ್ದರಿಂದ ಗೊಲ್ಲರು ಜೆಡಿಎಸ್‌ಗೆ
ಬೆಂಬಲ ನೀಡುವ ಮೂಲಕ ಕಾಂಗ್ರೆಸ್ ಅನ್ನು
ಸೋಲಿಸುತ್ತಾರೆ ಎಂದೇ ಎಲ್ಲರೂ ಲೆಕ್ಕಹಾಕಿದ್ದರು. ಆದರೆ
ಸಿದ್ದು ಮತ್ತು ಕಾಂಗ್ರೆಸ್ ಪರವಾದ ಅಲೆ ಜಾತಿ
ಸಮೀಕರಣವನ್ನೆ ಬುಡಮೇಲು ಮಾಡಿ ಸುಧಾಕರ್‌ರನ್ನು
ಮತ್ತೊಮ್ಮೆ ಶಾಸಕರನ್ನಾಗಿಸಿದವು. ಜಿಲ್ಲೆಯ ಆರೂ ಕ್ಷೇತ್ರಗಳಲ್ಲಿ
ಈ ಪ್ರಮಾಣದ ಕಾಂಗ್ರೆಸ್ ಅಲೆ ಸ್ಪಷ್ಟವಾಗಿತ್ತು.

ಈ ಅಲೆಯನ್ನು 2014ರ ಲೋಕಸಭಾ
ಚುನಾವಣೆವರೆಗೂ ಕಾಯ್ದುಕೊಂಡರೆ ಮಾತ್ರ ಬಿಜೆಪಿಯಿಂದ
ಎಂ.ಪಿ ಸೀಟನ್ನು ಕಾಂಗ್ರೆಸ್ ಕಿತ್ತುಕೊಳ್ಳಬಹುದು. ಆ
ನಿಟ್ಟಿನಲ್ಲಿ ಮಾದಿಗ ಸಮುದಾಯದ ಎಚ್.ಆಂಜನೇಯರಿಗೆ
ಕ್ಯಾಬಿನೆಟ್ ಸಚಿವ ಸ್ಥಾನವಲ್ಲದೆ ಜಿಲ್ಲಾ ಉಸ್ತುವಾರಿ
ಮಂತ್ರಿಯನ್ನಾಗಿಯೂ ಆಯ್ಕೆ ಮಾಡಿರುವುದು ಕಾಂಗ್ರೆಸ್‌ನ
ಉತ್ತಮ ನಡೆಯೇ ಆಗಿದೆ. ಒಟ್ಟು 12 ಲಕ್ಷದ ಆಸುಪಾಸಿನ
ಮತದಾರರಿರುವ ಚಿತ್ರದುರ್ಗ ಲೋಕಸಭಾ ಕ್ಷೇತ್ರದಲ್ಲಿ 4
ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿರುವ ಮಾದಿಗ ಸಮುದಾಯವೇ
ಇಲ್ಲಿ ನಿರ್ಣಾಯಕ. ಇನ್ನುಳಿದಂತೆ 2 ಲಕ್ಷ ಮುಸ್ಲಿಮರ, 2
ಲಕ್ಷ ಗೊಲ್ಲರ, 1.5 ಲಕ್ಷ ನಾಯಕರ, 1.5 ಲಕ್ಷ ಒಕ್ಕಲಿಗರ,
1 ಲಕ್ಷದಷ್ಟು ಲಿಂಗಾಯತರ ಮತಗಳು ಇಲ್ಲಿವೆ. ಇತರೆ
ಜಾತಿಯ ಮತಗಳು ನಿರ್ಣಾಯಕ ಸಂಖ್ಯೆಯಲ್ಲೇನೂ ಇಲ್ಲ.
ಆಂಜನೇಯ ಮಂತ್ರಿ ಆಗಿರುವ ಕಾರಣಕ್ಕೆ ಮಾದಿಗ
ಸಮುದಾಯದ ಮತಗಳು ಕಾಂಗ್ರೆಸ್ ತೆಕ್ಕೆಗೆ ಬೀಳುವುದಂತೂ
ಖಾತ್ರಿಯಾಗಿದೆ. ಜೊತೆಗೆ ಮುಸ್ಲಿಮರು, ನಾಯಕರು,
ಗೊಲ್ಲರು ಸಹ ಈ ವಿಧಾನಸಭಾ ಚುನಾವಣೆಯಲ್ಲಿ 'ಕೈ'ನತ್ತ
ಒಲವು ತೋರಿರುವುದರಿಂದ ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ
ಕಾಂಗ್ರೆಸ್ ನಿರಾಯಾಸವಾಗಿ ಗೆದ್ದು ಬಿಡಬಹುದೆಂದೇ
ಅಂದಾಜಿಸಲಾಗುತ್ತದೆ. ಅಲ್ಲದೆ ಚಿತ್ರದುರ್ಗ ಲೋಕಸಭಾ
ಮತಕ್ಷೇತ್ರಕ್ಕೆ ಸೇರ್ಪಡೆಯಾಗುವ ತುಮಕೂರಿನ ಸಿರಾ
ತಾಲ್ಲೂಕಿನಲ್ಲೂ ಕಾಂಗ್ರೆಸ್ ಅಭ್ಯರ್ಥಿಯೇ ಗೆದ್ದು
ಶಾಸಕನಾಗಿರುವುದು ಈ ಲೆಕ್ಕಾಚಾರಕ್ಕೆ ಮತ್ತಷ್ಟು
ಜೀವತುಂಬಿದೆ.


ಅಸಲಿಗೆ ಕಾಂಗ್ರೆಸ್ 2009ರ ಲೋಕಸಭಾ
ಚುನಾವಣೆಯಲ್ಲೆ ಚಿತ್ರದುರ್ಗದಲ್ಲಿ ಗೆಲ್ಲಬೇಕಾಗಿತ್ತು. ಆದರೆ
ಒನ್ಸ್ ಎಗೇನ್, ಆಂತರಿಕ ಕಚ್ಚಾಟ ಮತ್ತು ದಾಯಾದಿ
ಕಲಹಗಳೇ ಕಾಂಗ್ರೆಸ್‌ನ ಕಾಲೆಳೆದಿದ್ದವು. ಕಳೆದ ಬಾರಿ
ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಡಾ.ತಿಪ್ಪೇಸ್ವಾಮಿಗೆ ಪಕ್ಷದೊಳಗಿನ
ಗುಂಪುಗಾರಿಕೆಯೇ ಮುಳುವಾಯಿತು. ಈಗ
ಸಚಿವನಾಗಿರುವ ಆಂಜನೇಯ ಮತ್ತು ತಿಪ್ಪೇಸ್ವಾಮಿ ನಡುವಿನ
ದಾಯಾದಿ ಕಲಹವೂ ಕಳೆದ ಕಾಂಗ್ರೆಸ್ ಸೋಲಿಗೆ
ಕಾರಣವಾಗಿದ್ದು ಸುಳ್ಳಲ್ಲ. 2008ರ ಎಂ.ಎಲ್.ಎ
ಎಲೆಕ್ಷನ್‌ನಲ್ಲಿ ಸೋತಿದ್ದರೂ ಆಂಜನೇಯಗೆ ಹೊಳಲ್ಕೆರೆ
ತಾಲ್ಲೂಕಿನಲ್ಲಿ ಉತ್ತಮ ಹೋಲ್ಡ್ ಇತ್ತು. ಆದರೂ ತಮ್ಮ
ದಾಯಾದಿ ಕಲಹವನ್ನೆ ಮುಂದುಮಾಡಿಕೊಂಡು ಹಾವೇರಿ
ಚುನಾವಣಾ ಉಸ್ತುವಾರಿ ನೆಪದಲ್ಲಿ ಚಿತ್ರದುರ್ಗದ ಅಖಾಡಕ್ಕೆ
ಇಳಿಯದಿದ್ದದ್ದು ತಿಪ್ಪೇಸ್ವಾಮಿಗೆ ದೊಡ್ಡ ಹೊಡೆತವೇ ಆಗಿತ್ತು.
ಮೊಳಕಾಲ್ಮೂರಿನಿಂದ ಶಾಸಕನಾಗಿದ್ದ ಎಸ್.ವೈ.ಗೋಪಾಲಕೃಷ್ಣ
ಬಳ್ಳಾರಿ ಲೋಕಸಭಾ ಸ್ಥಾನಕ್ಕೆ ಸ್ಪರ್ಧಿಸಿದ್ದ ತನ್ನ ಸೋದರ
ಎನ್.ವೈ.ಹನುಂತಪ್ಪನ ಪರವಾಗಿ ಕೆಲಸ ಮಾಡುವುದಕ್ಕಾಗಿ
ಚಿತ್ರದುರ್ಗದತ್ತ ಗಮನ ನೀಡದ್ದು ಮತ್ತು ಮಾಜಿ ಮಂತ್ರಿ
ಅಶ್ವಥ್ ರೆಡ್ಡಿ, ತಿಪ್ಪಾರೆಡ್ಡಿಯಂತವರು ಕಾಂಗ್ರೆಸ್ ತೊರೆದು
ಬಿಜೆಪಿ ಸೇರಿದ್ದು ಸಹ ಫಲಿತಾಂಶದ ಮೇಲೆ ನಕಾರಾತ್ಮಕ
ಪ್ರಭಾವ ಬೀರುವಲ್ಲಿ ಯಶಸ್ವಿಯಾಗಿದ್ದವು. ಜೊತೆಗೆ ಕಳೆದ
ಬಾರಿ ಯಡ್ಡಿ ಅಲೆಯೂ ತಕ್ಕಮಟ್ಟಿ ಇದ್ದುದರಿಂದ ಬಿಜೆಪಿಯ
ಜನಾರ್ದನ ಸ್ವಾಮಿ 1.50 ಲಕ್ಷ ಮತಗಳ ಅಂತರದಿಂದ
ಗೆದ್ದು ಬರಲು ಕಾರಣವಾಗಿತ್ತು.

ಆದರೆ ಈ ಸಲ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ.
ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ
ಬಾರಿಸಿರುವುದಲ್ಲದೆ ಹಾಲಿ ಬಿಜೆಪಿ ಸಂಸದ ಜನಾರ್ದನ
ಸ್ವಾಮಿಯ 'ಹೈಟೆಕ್ ಗಿರಿ'ಯನ್ನು ನೋಡಿ ಬೇಸತ್ತಿರುವ
ಮತದಾರರೂ ಕಾಂಗ್ರೆಸ್‌ನತ್ತ ಮುಖ ಮಾಡಿದ್ದಾರೆ.
ಬದಲಾವಣೆಯ ನೆಪದಲ್ಲಿ ಗೆದ್ದು ಬಂದ ಜನಾರ್ದನ
ಸ್ವಾಮಿ ಮಾತೆತ್ತಿದರೆ ಅಮೆರಿಕಾ-ಲಂಡನ್ನು-ಕಂಪ್ಯೂಟರ್
ಸಾಫ್ಟ್‌ವೇರ್ ಅಂತ ಕನವರಿಸುತ್ತಾನೆಯೇ ಹೊರತು ಕ್ಷೇತ್ರದ
ಅಭಿವೃದ್ಧಿಗೆ ನಯಾ ಪೈಸೆ ಬೆವರು ಹರಿಸಿಲ್ಲ. ಹೈಟೆಕ್
ಆಲಾಪನೆಯಲ್ಲಿ ಸಾಮಾನ್ಯ ಜನರ ಕೈಗೆ ಸಿಗುವುದೇ
ಅಪರೂಪವಾಗಿ ಹೋಗಿದೆ. 2014ರಲ್ಲಿ ಇದೇ ಆತನಿಗೆ
ಮುಳುವಾಗುವುದು ಸ್ಪಷ್ಟ.

ಅಷ್ಟು ಮಾತ್ರಕ್ಕೇ, ಕಾಂಗ್ರೆಸ್ ಹಾದಿಯೇನು
ಸುಲಭವಾಗಿಲ್ಲ. ಕಾಂಗ್ರೆಸ್ ಗೆಲ್ಲುವ ಸಾಧ್ಯತೆ ಹೆಚ್ಚಿದೆ
ಎನ್ನುವುದು ಗೊತ್ತಾಗುತ್ತಿದ್ದಂತೆಯೇ ಟಿಕೆಟ್ ಆಕಾಂಕ್ಷಿಗಳ
ಪೈಪೋಟಿಯೂ ಜೋರಾಗುತ್ತಿದೆ. ಕಳೆದ ಚುನಾವಣೆಯಲ್ಲಿ
ಸ್ಪರ್ಧಿಸಿ ಸೋತಿದ್ದ ಡಾ.ತಿಪ್ಪೇಸ್ವಾಮಿಯೇ ಕಾಂಗ್ರೆಸ್
ಅಭ್ಯರ್ಥಿಯಾಗುವ ಸಂಭವ ಹೆಚ್ಚು ಎನ್ನುತ್ತಿರುವಂತೆಯೇ
ಹೊಸ ಹೆಸರುಗಳು ಮುಂಚೂಣಿಗೆ ಬಂದುಹೋಗುತ್ತಿವೆ.
ತೀರಾ ಇತ್ತೀಚೆಗೆ, ಕೆಪಿಸಿಸಿ ಅಧ್ಯಕ್ಷ ಜಿ.ಪರಮೇಶ್ವರ್
ಮುಂಬರುವ ಲೋಕಸಭಾ ಚುನಾವಣೆಯಲ್ಲಿ
ಚಿತ್ರದುರ್ಗದಿಂದ ಸ್ಪರ್ಧಿಸಲಿದ್ದಾರೆ ಎನ್ನುವ ಸುದ್ದಿಯೂ
ಹಬ್ಬಿದೆ. ಮುಖ್ಯಮಂತ್ರಿ ಗದ್ದುಗೆಯ ಆಕಾಂಕ್ಷಿಯಾಗಿದ್ದ
ಪರಮೇಶ್ವರ್‌ಗೆ ಎಂ.ಎಲ್.ಎ ಎಲೆಕ್ಷನ್‌ನಲ್ಲಿ ಸ್ವಕ್ಷೇತ್ರ
ಕೊರಟಗೆರೆಯಿಂದ ಸೋತರೂ ಮಂತ್ರಿಯಾಗುವ ಅವಕಾಶ
ಒದಗಿ ಬಂದಿತ್ತು. ಆದರೂ ಕೆಪಿಸಿಸಿ ಅಧ್ಯಕ್ಷ ಗಾದಿಯೇ
ಸಾಕೆಂದು ಮಂತ್ರಿಗಿರಿಯನ್ನೆ ಬೇಡವೆಂದಿರುವ ಪರಮೇಶ್ವರ್
ಚಿತ್ರದುರ್ಗದವರೆಗೂ ಬರಲಾರರೆನ್ನುವ ವಾದವೂ ಇದೆ.
ಈ ನಡುವೆ ಹದಿನೈದು ದಿನದಲ್ಲೆ ಅಮೋಘ ಮೂರು
ಪಕ್ಷಗಳಿಗೆ ವಲಸಾಡಿ ಬಂದ ಜಿ.ಎಸ್.ಮಂಜುನಾಥ್ ಕೂಡಾ
ಟಿಕೆಟ್ ಆಕಾಂಕ್ಷಿಯೆಂಬ ಮಾತುಗಳು ಕೇಳಿಬರುತ್ತಿವೆ.
ಕೆಜೆಪಿ ಸೇರಿ ಮಾಯಕೊಂಡದ ಕನಸು ಕಂಡಿದ್ದ ಸದರೀ
ಮಂಜುನಾಥ್ ಕೊನೆಗೆ ಬಿಜೆಪಿಗೆ ವಲಸೆ ಬಂದಿದ್ದ. ಅಲ್ಲೂ
ಗತಿ ಮುಟ್ಟದ ಈತ ಹಿರಿಯೂರಿನ ಸುಧಾಕರ್ ನೆರಳಲ್ಲಿ
ಕೊನೆಗೆ ಕಾಂಗ್ರೆಸ್ ಪಾಳಯಕ್ಕೆ ಬಂದು ತಲುಪಿದ್ದಾನೆ
ಮಾತ್ರವಲ್ಲ ಎಂ.ಪಿ ಟಿಕೆಟ್ ಆಕಾಂಕ್ಷಿ ಪಟ್ಟಿಯಲ್ಲೂ ಇದ್ದಾನೆ.
ಈ ಪಟ್ಟಿಯಲ್ಲಿ ಬಂಜಾರ ಸಮಾಜದ ಜಲಜಾ ನಾಯ್ಕ
ಹೆಸರೂ ಕೇಳಿಬರುತ್ತಿದೆ. ಇದೇ ರೀತಿ ಎ.ಸಿ.ಪಿ-ಡಿ.ಡಿ.ಪಿ.ಐ
ಮೊದಲಾದ ಸರಕಾರಿ ಆಯಕಟ್ಟಿನ ಹುದ್ದೆಯಲ್ಲಿದ್ದು ಗಂಟು
ಕಟ್ಟಿಕೊಂಡು ಬಂದವರೆಲ್ಲಾ ಇವತ್ತು ಗೆಲ್ಲುವ ಕುದುರೆ
ಕಾಂಗ್ರೆಸ್‌ನ ಬಾಲಕ್ಕಾಗಿ ಕೈ ಅಂಗಳದಲ್ಲಿ ಅಲೆದಾಡುತ್ತಿದ್ದಾರೆ.
ಆದರೂ ಹಲವು ಹುದ್ದೆಗಳಲ್ಲಿ ಅನುಭವವಿರುವ, ಕಾಂಗ್ರೆಸ್‌ಗೆ
ನಿಷ್ಠೆ ಪ್ರದರ್ಶಿಸಿಕೊಂಡು ಬಂದಿರುವ ಎಲ್ಲಕ್ಕೂ ಹೆಚ್ಚಾಗಿ
ರಾಹುಲ್ ಗಾಂಧಿಯ ಸಖ್ಯ ಸಂಪಾದಿಸಿಕೊಂಡಿರುವ
ಡಾ.ತಿಪ್ಪೇಸ್ವಾಮಿಗೇ ಟಿಕೆಟ್ ದಕ್ಕುವ ಚಾನ್ಸ್ ಹೆಚ್ಚಿದೆ.
ಒಟ್ಟಿನಲ್ಲಿ ಟಿಕೆಟ್ ಹಂಚಿಕೆಯ ಕಗ್ಗಂಟನ್ನು ಹೈಕಮಾಂಡ್
ಜಾಣ್ಮೆಯಿಂದ ಸಡಿಲಿಸಿದರೆ ಮಾತ್ರ ಕಾಂಗ್ರೆಸ್ ಗೆಲುವು
ಸಾಧ್ಯವಾಗಲಿದೆ.

ಅದಕ್ಕೂ ಮುನ್ನ, 2014ರವರೆಗೂ ಜಿಲ್ಲೆಯಲ್ಲಿ
ಕಾಂಗ್ರೆಸ್ ಹವಾ ಉಳಿಯುವಂತೆ ಮಾಡುವ ಜವಾಬ್ದಾರಿ
ಸಿದ್ದು ಮತ್ತು ಆಂಜನೇಯರ ಹೆಗಲ ಮೇಲಿದೆ.....

● ಟಿ.ಎನ್. ಷಣ್ಮುಖ



ಎಚ್. ಆಂಜನೇಯ | ತಿಪ್ಪೇಸ್ವಾಮಿ | ಜನಾರ್ದನ ಸ್ವಾಮಿ | ಡಿ. ಸುಧಾಕರ್ | ಮಂಜುನಾಥ್

<<
(ರಿಮ್ಸ್) ವಹಿಸಿ ಕೈತೊಳೆದುಕೊಳ್ಳುವುದಕ್ಕಾಗಿ
ನಡೆಸಿತ್ತು. ಅಂತೆಯೇ ಒಳಗಿಂದ ಒಳಗೇ ಒಪೆಕ್
ಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಖೆಯಿಂದ ತೆಗೆದು ಉನ್ನತ ಶಿಕ್ಷಣ ಇಲಾಖೆಗೆ
ಯಿಸಿ ರಿಮ್ಸ್ ವೈದ್ಯಕೀಯ ಕಾಲೇಜಿನ ಜೋಳಿಗೆಗೆ
ಿ. ರಿಮ್ಸ್ ಕಾಲೇಜು ಅದನ್ನು ಸ್ನಾತಕೋತ್ತರ ಬೋಧಕ
ಯನ್ನಾಗಿ ಮಾಡುವ ಯೋಜನೆ ರೂಪಿಸಿತು. ನಿಜ
ಕೆಂದರೆ ರಿಮ್ಸ್ ವೈದ್ಯಕೀಯ ಕಾಲೇಜಿಗೆ ಈಗಾಗಲೇ
ಹಾಸಿಗೆಯ ಸುಸಜ್ಜಿತ ಆಸ್ಪತ್ರೆಯೊಂದು ಎ ಬ್ಲಾಕ್‌ನಲ್ಲಿ
ಗಿದ್ದು ಉದ್ಘಾಟನೆಗಾಗಿ ಕಾಯುತ್ತಿದೆ. ಇನ್ನೊಂದು
ಹಾಸಿಗೆಯ ಆಸ್ಪತ್ರೆಯನ್ನು ಬಿ ಬ್ಲಾಕ್‌ನಲ್ಲಿ ಕಟ್ಟುವುದಕ್ಕೆ
ಸಿದ್ಧತೆಗಳು ನಡೆದಿವೆ. ಹೀಗಿರುವಾಗಿ ಒಪೆಕ್
ಯನ್ನೂ ಬೋಧಕ ಆಸ್ಪತ್ರೆಯನ್ನಾಗಿ ಮಾಡುವ
ಕತೆಯೇ ಇಲ್ಲ. ಒಂದು ವೇಳೆ ಹಾಗೆ ಮಾಡಿದರೆ
ರಾಬಾದ್-ಕರ್ನಾಟಕದ ಜನರಿಗೆ ಇಬ್ಬದಿಯ ನಷ್ಟ
ಗುತ್ತದೆ. ಮೊದಲನೆಯದು, ಒಪೆಕ್ ಆಸ್ಪತ್ರೆ
ನರಿಗೆ ಅತ್ಯಂತ ಆಧುನಿಕ ಮತ್ತು ಹೈಟೆಕ್
ಯನ್ನು ಕೈಗೆಟುಕುವ ಬೆಲೆಯಲ್ಲಿ ಅಥವಾ ಉಚಿತವಾಗಿ
ಸ ಸೂಪರ್-ಸ್ಪೆಷಾಲಿಟಿ ಆಸ್ಪತ್ರೆಯಾಗಿ ಅದು
ಯುವುದಿಲ್ಲ, ಅದು ವೈದ್ಯಕೀಯ ವಿದ್ಯಾರ್ಥಿಗಳು
ತಿ ಪಡೆಯುವ ಕೇಂದ್ರವಾಗಿಯಷ್ಟೇ
ಾಗುತ್ತದೆ. ಎರಡನೆಯದಾಗಿ, ಒಪೆಕ್ ಆಸ್ಪತ್ರೆ
ಕ ಆಸ್ಪತ್ರೆಯಾಗಿ ಮಾರ್ಪಟ್ಟರೆ ಬಿ ಬ್ಲಾಕ್‌ನಲ್ಲಿ
ತ್ತಲು ಹೊರಟಿರುವ ಐನೂರು ಹಾಸಿಗೆಗಳ
ದು ಆಸ್ಪತ್ರೆ ಅನಗತ್ಯ ಎಂದು ಅದೂ ಕೈತಪ್ಪುತ್ತದೆ.
ನ್ನೊಂದಿಗೆ ನಡೆದ ಎರಡು ಸುತ್ತಿನ ಮಾತುಕತೆಗಳ
ಸಂದರ್ಭದಲ್ಲಿ ಸರ್ಕಾರ ಕೊಟ್ಟ ಆಶ್ವಾಸನೆ ಮತ್ತು
ಭರವಸೆಗಳನ್ನೇ ನಂಬಿ ಕುಳಿತಿದ್ದ ನಮಗೆ 2013ರಲ್ಲಿ
ಸರ್ಕಾರ ಹೊರಡಿಸಿದ ಆದೇಶ ನಿಜಕ್ಕೂ ಆಘಾತ
ಉಂಟುಮಾಡಿತು. ನಮ್ಮೊಂದಿಗೆ ಮಾಡಿಕೊಂಡ ಎಲ್ಲಾ
ಒಪ್ಪಂದವನ್ನು ಬದಿಗೊತ್ತಿದ ಸರ್ಕಾರ ಕೇವಲ 200
ಹುದ್ದೆಗಳನ್ನು ಸೃಜಿಸುವುದಾಗಿ ಈ ಆದೇಶದಲ್ಲಿ ಹೇಳಿದೆ.
ಮೇಲ್ನೋಟಕ್ಕೇ ಕಾಣುವಂತೆ ಇದು ರಿಮ್ಸ್ ವೈದ್ಯಕೀಯ
ಕಾಲೇಜಿನ ಅಗತ್ಯಗಳನ್ನು ಪೂರೈಸುವುದಕ್ಕಾಗಿ ಮಾಡಿರುವ
ಆದೇಶವೇ ಹೊರತು ಒಪೆಕ್ ಸೂಪರ್-ಸ್ಪೆಷಾಲಿಟಿ
ಆಸ್ಪತ್ರೆಯನ್ನು ಪುನರಾರಂಭಿಸುವುದಕ್ಕಾಗಿ ಅಲ್ಲ. ಈ 200
ಹುದ್ದೆಗಳಲ್ಲಿ 41 ಡಿ ದರ್ಜೆಯ ಹುದ್ದೆಗಳನ್ನು, ಕಿರಿಯ
ಸಹಾಯಕರ 20 ಹುದ್ದೆಗಳನ್ನು, ಗಾರ್ಡನ್ ಹಾಗೂ
ಕ್ಯಾಂಟೀನ್ ಸೇರಿ 40 ಹುದ್ದೆಗಳನ್ನು ಮತ್ತು ಸೂಪರ್
ಸ್ಪೆಷಾಲಿಟಿ ವೈದ್ಯರ ಹುದ್ದೆಗಳನ್ನು ಕೈಬಿಡಲಾಗಿದೆ. ಈಗ
ಮಾಡಲಾಗಿರುವ ಹುದ್ದೆಗಳ ವರ್ಗೀಕರಣವು ಹಾಲಿ 285
ಜನ ಸಿಬ್ಬಂದಿ ಹಾಗೂ ಕಾರ್ಮಿಕರಿಗೆ ಅನ್ವಯಿಸದೆ
ಹೋಗುವುದರಿಂದ, ಈ ನೌಕರರು ಶಾಶ್ವತವಾಗಿ ಬೀದಿ
ಪಾಲಾಗುವ ಸಂಕಷ್ಟ ಸ್ಥಿತಿಯನ್ನು ಸರಕಾರ ಸೃಷ್ಟಿಸಿದೆ.
ಹಾಗೆಯೆ, 285 ಜನರ ಇದುವರೆಗಿನ ಸೇವೆಯನ್ನು
ಪರಿಗಣಿಸದೆ, ಹೊಸದಾಗಿ ಸರಕಾರಿ ಹೊರಗುತ್ತಿಗೆ ಅಡಿ
ನೇಮಿಸಿಕೊಳ್ಳಲು ಹೊರಟರೆ 285 ಜನ ನೌಕರರಿಗೆ
ಭಾರಿ ಅನ್ಯಾಯವಾಗಲಿದೆ. ಇದು ಕೈಗಾರಿಕಾ ವಿವಾದ
ಕಾಯ್ದೆಯ ಸೆಕ್ಷನ್ 10 ಸ್ಪಷ್ಟ ಉಲ್ಲಂಘನೆಯಾಗುತ್ತದೆ"
ಎಂದು ವಿವರಿಸುತ್ತಾರೆ ಈ ಒಪೆಕ್ ಹೋರಾಟದಲ್ಲಿ
ಮೊದಲಿನಿಂದಲೂ ಮುಂಚೂಣಿಯಲ್ಲಿರುವ ಆರ್.
ಮಾನಸಯ್ಯ.

"ರಾಯಚೂರಿನ ಖಾಸಗಿ ಆಸ್ಪತ್ರೆಗಳ ಲಾಬಿಯೇ ಒಪೆಕ್
ಆಸ್ಪತ್ರೆಯನ್ನು ಮುಚ್ಚುವಂತೆ ಸರ್ಕಾರದ ಮೇಲೆ ಪ್ರಭಾವ
ಬೀರಿತ್ತು; ಈಗ ಒಪೆಕ್ ಆಸ್ಪತ್ರೆಯನ್ನು ಪುನರಾರಂಭಿಸುವುದಕ್ಕೆ
ಸರ್ಕಾರವನ್ನು ತಡೆಯುತ್ತಿರುವುದೂ ಅದೇ ಲಾಬಿ" ಎಂದು
ಮಾನಸಯ್ಯ ವಿಶ್ಲೇಷಿಸುತ್ತಾರೆ.

ಒಪೆಕ್ ಆಸ್ಪತ್ರೆಯ ಆಡಳಿತ ನಿರ್ವಹಣೆ ಅಪೋಲೋ
ಸಮೂಹದಲ್ಲಿದ್ದಾಗ ಜನರಿಗೆ ಒಟ್ಟಾರೆಯಾಗಿ
ಪ್ರಯೋಜನವಾಗಿತ್ತು ಎಂಬುದನ್ನು ಒಪ್ಪಿಕೊಳ್ಳುತ್ತಲೇ ನಾಗರಿಕ
ಸಮಾಜದ ಕೆಲವರು ಅಪೋಲೋ ಸಂಸ್ಥೆಯ ವಿರುದ್ಧವೂ
ಹರಿಹಾಯುತ್ತಾರೆ. ಕೋಟ್ಯಾಂತರ ರೂಪಾಯಿ ಮೌಲ್ಯದ
ಅತ್ಯಾಧುನಿಕ ಯಂತ್ರೋಪಕರಣಗಳನ್ನು ಒಪೆಕ್ ಆಸ್ಪತ್ರೆಯಿಂದ
ಹೈದರಾಬಾದಿನ ತಮ್ಮ ಸ್ವಂತ ಅಪೋಲೋ ಆಸ್ಪತ್ರೆಗೆ
ಸಾಗಿಸಿದ್ದಾರೆ ಎಂದೂ, ಚಿಕಿತ್ಸೆಗೊಳಗಾದ ಎಪಿಎಲ್ ಮತ್ತು
ಬಿಪಿಎಲ್ ಜನರ ಸಂಖ್ಯೆಯನ್ನು ಮನಬಂದಂತೆ ಹೆಚ್ಚಿಗೆ
ತೋರಿಸಿ ಸರ್ಕಾರದಿಂದ ದುಡ್ಡು ವಸೂಲಿ ಮಾಡಿದ್ದಾರೆ
ಎಂಬಿತ್ಯಾದಿ ವಿಮರ್ಶೆಗಳನ್ನು ಕೆಲವರು ಮಾಡುತ್ತಾರೆ.
ಅಂತೆಯೇ ಒಪೆಕ್ ಆಸ್ಪತ್ರೆ ನಿರ್ವಹಣೆಯ ಒಪ್ಪಂದದ
ಅವಧಿ ಮುಗಿದ ಮೇಲೆ ಆ ಒಪ್ಪಂದವನ್ನು ಮತ್ತೆ
ನವೀಕರಿಸುವುದಕ್ಕೆ ಅಪೋಲೋ ಸಮೂಹ ರಾಜಧಾನಿ
ಬೆಂಗಳೂರಿನಲ್ಲಿ ಭಾರಿ ಲಾಬಿ ನಡೆಸಿತು ಎಂಬ
ಆರೋಪಗಳೂ ಇವೆ. ಆದರೆ, ಕೊನೆಗೆ ಅದು ಯಾವುದೂ
ಕೈಗೂಡಲಿಲ್ಲ ಎಂಬುದು ಈಗ ಇತಿಹಾಸ.

ಈ ಹಿನ್ನಲೆಯಲ್ಲಿ ಹೈದರಾಬಾದ್-ಕರ್ನಾಟಕದ ಜನರ
ಒತ್ತಾಸೆಯನ್ನು ಗ್ರಹಿಸಬೇಕಿದೆ. ಅವರಿಗೆ, ಒಪೆಕ್
ಸೂಪರ್-ಸ್ಪೆಷಾಲಿಟಿ ಆಸ್ಪತ್ರೆ ಮರಳಿ ಕಾರ್ಯಾರಂಭ
ಮಾಡಬೇಕು; ಆದರೆ, ಅದನ್ನು ಯಾವುದೇ ಖಾಸಗೀ
ಸಂಸ್ಥೆಗಳಿಗೆ ನಿರ್ವಹಣೆ ಮಾಡುವುದಕ್ಕೆ ವಹಿಸಬಾರದು.
ಒಂದೊ ಅದನ್ನು ಸ್ವಾಯತ್ತ ಸಂಸ್ಥೆ ಮಾಡಬೇಕು; ಇಲ್ಲವೇ
ರಾಜ್ಯ ಸರ್ಕಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಇಲಾಖೆಯೇ ಅದರ ಆಡಳಿತ ನಿರ್ವಹಣೆಯನ್ನು
ಹೊತ್ತುಕೊಳ್ಳಬೇಕು. ಬೆಂಗಳೂರಿನಲ್ಲಿರುವ ಜಯದೇವ
ಹೃದ್ರೋಗ ಆಸ್ಪತ್ರೆ, ಕಿದ್ವಾಯ್ ಕ್ಯಾನ್ಸರ್ ಆಸ್ಪತ್ರೆ ರೀತಿಯಲ್ಲಿ
ಇದನ್ನೂ ರಾಜ್ಯ ಸರ್ಕಾರದ ಸಂಪೂರ್ಣ ಅಧೀನದಲ್ಲಿ
ಮಾದರಿ ಆಸ್ಪತ್ರೆಯನ್ನಾಗಿ ಮಾಡಬೇಕು. ಇದು
ಹೈದರಾಬಾದ್-ಕರ್ನಾಟಕದ ಜನರ ಇಂದಿನ ಅಭಿಲಾಷೆ.

ಈಗ ಒಂದು ವರ್ಷ ಆಯಿತು. ಸೂಪರ್-ಸ್ಪೆಷಾಲಿಟಿ
ಆಸ್ಪತ್ರೆ ಅನಾಥವಾಗಿ ಬಿದ್ದಿದೆ. ಕೋಟ್ಯಾಂತರ ರೂಪಾಯಿ
ಬೆಲೆಬಾಳುವ ಅದರ ಅತ್ಯಾಧುನಿಕ ಯಂತ್ರೋಪಕರಣಗಳು
ಧೂಳು ತಿನ್ನುತ್ತಿವೆ. ಬೀದಿಗೆ ಬಿದ್ದ ಅದರ ಉದ್ಯೋಗಿಗಳು
ಹತಾಶಸ್ಥಿತಿಯಲ್ಲಿದ್ದಾರೆ. ಕೈಗೆಟುಕುವ ಬೆಲೆಯಲ್ಲಿ ಅಥವಾ
ಉಚಿತವಾಗಿ ಅತ್ಯುತ್ತಮ ಚಿಕಿತ್ಸೆ ಪಡೆಯುವ ಆಶೆ
ಇಟ್ಟುಕೊಂಡಿದ್ದ ಬಡಜನರು ಮಂಕಾಗಿದ್ದಾರೆ.


ಆದರೆ, ಹೋರಾಟ ನಿಂತಿಲ್ಲ, ಆಕ್ರೋಶ ಹೆಪ್ಪುಗಟ್ಟಿ
ಕಟ್ಟೆಯೊಡೆಯುವುದಕ್ಕೆ ಕ್ರೋಢೀಕರಣವಾಗುತ್ತಿದೆ.
ಸಿದ್ದರಾಮಯ್ಯ ನೇತೃತ್ವದ ಹೊಸ ಸರ್ಕಾರ ಹೊಸ ಹೊಸ
ಭರವಸೆಗಳನ್ನು ಹುಟ್ಟುಹಾಕಿದೆ. ಯು.ಟಿ.ಖಾದರ್ ಎಂಬ
ಪ್ರಾಮಾಣಿಕ ಮತ್ತು ದಕ್ಷ ವ್ಯಕ್ತಿ ಆರೋಗ್ಯ ಸಚಿವರಾಗಿದ್ದಾರೆ.
ಇವರೆಲ್ಲರ ಮೇಲೆ ಹೈದರಾಬಾದ್ ಕರ್ನಾಟಕದ ಜನ
ಅಪಾರ ಭರವಸೆ ಇಟ್ಟಿದ್ದಾರೆ. ಅದನ್ನು ಅವರು ಎಷ್ಟರ
ಮಟ್ಟಿಗೆ ಈಡೇರಿಸುತ್ತಾರೆ ಎಂಬುದನ್ನು ಕಾಲವೇ
ನಿರ್ಧರಿಸಲಿದೆ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಫೋಟೋಗಳು: ಸಂತೋಷ್ ಸಾಗರ್, ರಾಯಚೂರು

ಆಮ್‌ವೇ ಮಾರ್ಕೆಟಿಂಗ್‌ನ ವಂಚಕ ಮುಖ







ಬಂಧನಕ್ಕೊಳಗಾದ ವಂಚಕರು .....

ಟೋಪಿ ಬೇಕೆ, ಟೋಪಿ.. ಬಣ್ಣದ ಟೋಪಿ...

ಮಕ್ಕಳಿದ್ದಾಗ ಬಲು ಫೇಮಸ್ ಆಟ ಇದು. ಈ ಆಟವನ್ನು ಕೆಲವೊಬ್ಬರು ಅದೆಷ್ಟು ಹಚ್ಚಿಕೊಂಡಿರ್‍ತಾರಂದ್ರೆ, ದೊಡ್ಡವರಾದ ಮೇಲೂ ಟೋಪಿ ಹಾಕಿಸಿಕೊಳ್ಳಲು ಸದಾ ಸಿದ್ಧರಾಗೇ ಕೂತಿರ್‍ತಾರೆ. ಅಂತವರಿಗೆ ಮಕ್ಮಲ್ ಟೋಪಿ ಹಾಕಲೆಂದೇ ಈ ಚಿಟ್ ಫಂಡ್ ಮಹಾತ್ಮರೂ ಸಜ್ಜಾಗಿ ನಿಂತಿರ್‍ತಾರೆ. ಅದ್ರಲ್ಲೂ ನಮ್ಮ ದೇಶದ ದುಬಾರಿ ಕನಸಿನ ಮಧ್ಯಮ ವರ್ಗದ ಜನರ ಟೋಪಿ ಹಾಕಿಸಿಕೊಳ್ಳುವ ಖಯಾಲಿ ಇಡೀ ವಿಶ್ವದಲ್ಲೇ ಪ್ರಸಿದ್ಧ. ಅದಕ್ಕೇ ವಿದೇಶಿ ಕಂಪನಿಗಳೂ ಇಲ್ಲಿಗೆ ಲಗ್ಗೆ ಇಟ್ಟು ಕರೆಕ್ಟ್ ಸೈಜಿನ ಟೋಪಿ ತೊಡಿಸುತ್ತಿರ್‍ತವೆ. ಅಂತಹ ಫಾರಿನ್ ಪರಮಾತ್ಮರಲ್ಲಿ ಈ ಆಮ್‌ವೇ ಕೂಡಾ ಒಂದು. ಡೈರೆಕ್ಟ್ ಸೇಲ್ಸ್ ನೆಪದಲ್ಲಿ ಈ ಕಂಪನಿ ನಡೆಸುತ್ತಿರೋದು ಪಕ್ಕಾ ಹಗಲು ದರೋಡೆ.

ಇತ್ತೀಚೆಗಷ್ಟೆ ಕೇರಳ ಸಿಐಡಿ ಪೊಲೀಸರು ಈ ಆಮ್‌ವೇ ಕಂಪನಿಯ ಅಮೆರಿಕನ್ ಸಿಇಒ ಕಮ್ ಎಂ.ಡಿ ವಿಲಿಯಮ್ಸ್ ಎಸ್ ಪಿಂಕ್‌ನಿ ಮತ್ತು ಭಾರತೀಯ ಡೈರೆಕ್ಟರ್‌ಗಳಾದ ಸಂಜಯ್ ಮಲ್ಹೋತ್ರಾ ಹಾಗೂ ಅನ್ಶು ಭುದ್ರಾಜರನ್ನು ಬಂಧಿಸಿ ಜೈಲಿಗಟ್ಟಿದ ಮೇಲಂತು ಈ ಕಂಪನಿಯ ಒಂದೊಂದೇ ಹುಳುಕು-ಥಳುಕುಗಳು ಬಯಲಾಗುತ್ತಿವೆ. ಈ ಮೂವರ ಮೇಲೆ 2011ರಲ್ಲೆ ಒಂದು ಕೇಸು ದಾಖಲಾಗಿತ್ತು. ವಿಶಾಲಾಕ್ಷಿ ಎಂಬಾಕೆ ಆಮ್‌ವೇ ಎಂಬ ಬೋಗಸ್ ಕಂಪನಿ ತನಗೆ 3.5 ಲಕ್ಷ ವಂಚನೆ ಮಾಡಿದೆಯೆಂದು ವಯನಾಡ್ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಳು. ಅದಾದನಂತರ 2012ರಲ್ಲಿ ಮತ್ತೆ ಮೂರು ಕೇಸುಗಳು ಈ ಕಂಪನಿಯ ಹೆಗಲೇರಿ ಕೂತಿದ್ದವು. 2011ರ ಕೇಸಿಗೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನು ಪಡೆದಿದ್ದ ಈ ಮೂವರು ಬಂಧನದ ಭೀತಿ ಇಲ್ಲವೆನ್ನುವ ಭ್ರಮೆಯಲ್ಲೆ ವಿಚಾರಣೆಗಂತ ಕೋಜಿಕೋಡ್‌ನ ಸಿಐಡಿ ಕಚೇರಿಗೆ ಆಗಮಿಸಿದ್ದರು. ಆದರೆ 2012ರ ಕೇಸುಗಳಿಗೆ ಸಂಬಂಧಿಸಿದಂತೆ ಸ್ಥಳದಲ್ಲಿಯೇ ಬಂಧಿಸಿದ ಸಿಐಡಿ ಪೊಲೀಸರು ಜೈಲಿಗಟ್ಟಿದ್ದರು. ಇದೀಗ ಷರತ್ತುಬದ್ಧ ಜಾಮೀನಿನ ಮೇಲೆ ಹೊರಬಂದು ನಿಟ್ಟುಸಿರು ಬಿಡುತ್ತಿದ್ದಾರೆ. ಆದರೆ ದೇಶಾದ್ಯಂತ ವಿವಿಧೆಡೆ ರಿಜಿಸ್ಟರ್ ಆಗಿರುವ ಕೇಸುಗಳೆಲ್ಲ ಇದೀಗ ಮತ್ತೆ ಜೀವ ತುಂಬಿಕೊಂಡು ಅಟ್ಯಾಕ್ ಮಾಡಲು ಸಜ್ಜಾಗಿ ನಿಂತಿರೋದ್ರಿಂದ 11.3 ಬಿಲಿಯನ್ ಡಾಲರ್‌ನಷ್ಟು ಬೋಗಸ್ ಅಧಿಪತ್ಯದ ಈ ಅಮೆರಿಕಾ ಕಂಪನಿಗೆ ಮುಂದೆ ಭಯಾನಕ ಭವಿಷ್ಯವೇ ಕಾದಂತಿದೆ.

ಆಮ್‌ವೇ 'ಅಮೆರಿಕಾ ವೇ' ಎಂಬುದರ ಸಂಕ್ಷಿಪ್ತ ರೂಪ. ಹೆಸರೇ ಹೇಳುವಂತೆ ಭಾರತದ ರೊಕ್ಕಕ್ಕೆ ಅಮೆರಿಕಾದ ದಾರಿ ತೋರಿಸೋದೆ ಈ ಕಂಪನಿಯ ಪರಮೋಚ್ಚ ಗುರಿ. ಹೆಲ್ತ್ ಮತ್ತು ಬ್ಯೂಟಿ ಪ್ರೊಡಕ್ಟ್‌ಗಳನ್ನು ಏಜೆಂಟರುಗಳ ಮೂಲಕ ನೇರವಾಗಿ ಮಾರಾಟ ಮಾಡುವ ಮಲ್ಟಿ ಲೆವೆಲ್ ಮಾರ್ಕೆಟಿಂಗ್ (ಎಂಎಲ್‌ಎಂ) ಎನ್ನುವುದೇ ಇವರ ಅಫಿಶಿಯಲ್ ಅಜೆಂಡಾ. ಆದರೆ **Prize Chits and Money Circulation Schemes (Banning) Act, 1978** ಪ್ರಕಾರ ಭಾರತದಲ್ಲಿ ಸ್ಪಷ್ಟವಾಗಿ ನಿಷೇಧಿಸಿರುವ ಮನಿ ಚೈನ್ ಲಿಂಕಿಂಗ್ ಅಕ್ರಮ ವಹಿವಾಟೆ ಇವರ ಮೂಲ ಕಸುಬು. ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಿ ಗಳಿಸುವುದಕ್ಕಿಂತ ಹೆಚ್ಚಾಗಿ ಹೊಸ ಹೊಸ ಏಜೆಂಟ್‌ಗಳ ಮೆಂಬರ್‌ಶಿಪ್ ಮಾಡಿಸಲು ಪುಸಲಾಯಿಸುವ ಮೂಲಕ ಗಳಿಸುವ ಹಣವೇ ಜಾಸ್ತಿ. ಆರಂಭದಲ್ಲಿ ಒಂದಿಬ್ಬರು 'ಟ್ರೈನ್ಡ್ ಆಮ್‌ವೇ'ಗಳು ಬಂದು 'ನೀವು 4,500 ರೂಪಾಯಿ ಕಟ್ಟಿ ನಮ್ಮ ಆಮ್‌ವೇ ಬಿಸಿನೆಸ್ ಓನರ್ಸ್(ಎಬಿಒ)ಗಳಾಗಿ, ಅಷ್ಟೂ ಬೆಲೆಬಾಳುವ ಸರಕುಗಳನ್ನು ನಿಮಗೆ ಕೊಡ್ತೀವಿ. ನೀವದನ್ನು ಮಾರಿಕೊಳ್ಳಬಹುದು. ಆಮೇಲೆ ನೀವು 6-4-3 ಫಾರ್ಮುಲಾ ಅಡಿಯಲ್ಲಿ ಹೊಸ ಎಬಿಒಗಳನ್ನು ಕಂಪನಿಗೆ ಸೇರಿಸಬೇಕು. ಅಂದರೆ, ನೀವು ಆರು ಜನ ಎಬಿಒಗಳನ್ನು ನೇರವಾಗಿ ಸೇರಿಸಿ, ಆ ಆರು ಜನರು ತಲಾ ನಾಲ್ಕು ಜನ ಎಬಿಒಗಳನ್ನು ಸೇರಿಸುವಂತೆ ನೋಡಿಕೊಳ್ಳಿ. ಮತ್ತೆ ಒಬ್ಬೊಬ್ಬರ



ರಜತ್ ಬೆನರ್ಜಿ ಪಂಕಜ್ ಕುಮಾರ್ ಬೋಸ್

ಈ ನಾಲ್ಕೂ ಜನರು ತಲಾ ಮೂರು ಎಬಿಒಗಳನ್ನು ಕಂಪನಿ ತೆಕ್ಕೆಗೆ ತಂದು ಕೂಡಿಸಿದರೆ ಒಂದು ಸೈಕಲ್ ಕಂಪ್ಲೀಟ್ ಆಗುತ್ತದೆ. ಅಷ್ಟಾದರೆ ಮುಗಿಯಿತು ನೀವು ಮನೆಯಲ್ಲೇ ಕೂತು ತಿಂಗಳಿಗೆ 62,000 ರೂಪಾಯಿ ಕಮಾಯಿ ಕಾಣಬಹುದು. ನಿಮ್ಮ ಕೈ ಕೆಳಗಿನ ಎಬಿಒಗಳ ಚೈನು ಬೆಳೆದಂತೆಲ್ಲ ನಿಮಗೆ ಆದಾಯ ಹಿಗ್ಗುತ್ತಲೇ ಹೋಗುತ್ತೆ, ಇಂತಿಷ್ಟು ಸಂಖ್ಯೆಯ ಏಜೆಂಟರಾದ ಮೇಲೆ ನಿಮಗೆ ಸಿಲ್ವರ್ ಪ್ರೊಡ್ಯೂಸರ್ ಸ್ಥಾನ ಸಿಗುತ್ತೆ, ಆಮೇಲೆ ಗೋಲ್ಡ್, ಪ್ಲಾಟಿನಂ... ಕೊನೆಗೆ ಸಂಸ್ಥೆಯಿಂದ ನಿಮಗೆ ಕಾರು ಬಂಗಲೆ ಎಲ್ಲಾ ದಕ್ಕುತ್ತೆ' ಅಂತೆಲ್ಲಾ ಹೇಳಿ ಆಸೆ ಹುಟ್ಟಿಸುತ್ತಾರೆ. ಅದನ್ನು ನಂಬಿ ಹಣ ಹೂಡಿದರೆ ಕಥೆ ಮುಗಿದೇಹೋಯಿತು. ನಮಗೇ ಗೊತ್ತಿಲ್ಲದೆ ವಂಚನೆಗೆ ಒಳಗಾಗುವುದಲ್ಲದೆ, ಅನಿವಾರ್ಯತೆಗೆ ಬಿದ್ದು ಮತ್ತಷ್ಟು ಮುಗ್ಧರನ್ನು ವಂಚಿಸಲು ನಾವೇ ವಂಚಕರಾಗಿ ಬಿಡ್ತೀವಿ.

ಕರ್ನಾಟಕದಲ್ಲೂ ಈ ಆಮ್‌ವೇ ವಂಚನೆಯ ಜಾಲ ಭರ್ಜರಿಯಾಗೇ ಬೀಡುಬಿಟ್ಟಿದೆ. ಬೆಂಗಳೂರು, ಶಿವಮೊಗ್ಗ, ಬಳ್ಳಾರಿ, ಮೈಸೂರು, ಮಂಗಳೂರು, ಬಿಜಾಪುರ, ತುಮಕೂರು ಮತ್ತು ಹುಬ್ಬಳ್ಳಿ-ಹೀಗೆ ಒಂಬತ್ತು ಕಡೆಗಳಲ್ಲಿ ತಮ್ಮ ಅಧಿಕೃತ ಕಚೇರಿ ತೆರೆದು ಕೂತಿರುವ ಆಮ್‌ವೇಗಳು ರಾಜ್ಯದ ಪ್ರತಿ ಮೂಲೆಮೂಲೆಗೂ ತಮ್ಮ ವಂಚನೆಯ ಜಾಲವನ್ನು ವಿಸ್ತರಿಸಿಕೊಂಡಿದ್ದಾರೆ. ಆಮ್‌ವೇ ಕರಾಳ ದಂಧೆಯ ದಕ್ಷಿಣ ಭಾರತದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿರುವ ಪಂಕಜ್ ವಸ್ಸಾಲ್ ಎಂಬಾತನ ಮಾರ್ಗದರ್ಶನದಲ್ಲಿ ಕರ್ನಾಟಕದ ಮಟ್ಟಿಗೆ ಮ್ಯಾನೇಜರ್ ಸ್ಥಾನದಲ್ಲಿ ಕೂತಿರುವ ರಜತ್ ಬೆನರ್ಜಿ ರಾಜ್ಯದ ಜನರನ್ನು ಹಗಲುದರೋಡೆ ನಡೆಸುತ್ತಿದ್ದಾರೆ. ಈ ವಂಚನೆಗೆಂದು ಪ್ರತಿಯೊಂದು ಜಿಲ್ಲೆಗೂ ಒಬ್ಬೊಬ್ಬ ಏರಿಯಾ ಮ್ಯಾನೇಜರ್‌ಗಳನ್ನು ವ್ಯವಸ್ಥಿತವಾಗಿ ನೇಮಿಸಿಕೊಂಡಿರುವ ಆಮ್‌ವೇ ಕಂಪನಿ 2010ರಲ್ಲಿ ಕರ್ನಾಟಕ ಒಂದರಲ್ಲೇ ಲಪಟಾಯಿಸಿರೋದು ಬರೋಬ್ಬರಿ 90 ಕೋಟಿ ರೂಪಾಯಿಯನ್ನು. ಕರಾವಳಿ ತೀರದಲ್ಲಿ ಈ ಆಮ್‌ವೇ ಹಾವಳಿ ತುಸು ಜಾಸ್ತಿಯೇ ಅಂತೆನ್ನಬಹುದು. ಸುಜಯ್ ಬೋಸ್ ಎಂಬ ಆಸಾಮಿ ಈ ಭಾಗದ ಜನರನ್ನು ವಂಚಿಸುವ ಆಮ್‌ವೇ ಗುತ್ತಿಗೆ ಹಿಡಿದು ಕೂತಿದ್ದಾನೆ.

ನಯವಾದ ಮಾತು, ಬೆಂಗಳೂರು-ಹಾಸನ-ಮಂಗಳೂರು ಅಂತ ಕಡೆಗಳಲ್ಲಿ ಟ್ರೈನಿಂಗ್ ನೆಪದ ಟೂರಿಂಗ್ ಆಮಿಷ, ಆ ಸಮಯದಲ್ಲಿ ಒಂದಷ್ಟು 'ಬಿಗ್ ಬಾಡಿ'ಗಳನ್ನು ಕರೆತಂದು ಇವರು ನಮ್ಮ ಆಮ್‌ವೇಯಿಂದಲೇ ಕೋಟ್ಯಾಧೀಶರಾಗಿದ್ದಾರೆನ್ನುವ ಹುಸಿ ಸುಳ್ಳಿನ ಕಂತೆ, ವಿದೇಶಿ ಕಂಪನಿ, ಡಾಲರ್ ಲೆಕ್ಕಾಚಾರದ ಮಾತುಗಳು, ಎದುರಿಗೆ ಕೂತವರ ಆಕರ್ಷಕ ಹಳ್ಳ ತೋಡುವಿಕೆ, ಡಬ್ಬದಲ್ಲಿ ತುಂಬಿರುವ 'ಇಂಪೋರ್ಟೆಡ್' ಐಟಮ್ಮುಗಳು ಅನಾಯಾಸವಾಗಿ ಹಣ ಹೂಡಿಸಿಬಿಡುತ್ತವೆ. 1994ರಲ್ಲಿ ಭಾರತಕ್ಕೆ ಕಾಲಿರಿಸಿದ ಆಮ್‌ವೇ ಅವತ್ತಿನಿಂದ ಇವತ್ತಿನವರೆಗೂ ಮಾಡಿಕೊಂಡು ಬರುತ್ತಿರೋದು ಇದೇ ಕೆಲಸವನ್ನು. ಮನೆ ಕಟ್ಟಿಸಲೆಂದೊ, ಮಗಳ ಮದುವೆಗೆಂದೊ, ಮಗನ ವಿದ್ಯಾಭ್ಯಾಸಕ್ಕೆಂದೊ ಕೂಡಿಟ್ಟಿದ್ದ ಹಣವನ್ನು ಆಮ್‌ವೇನಲ್ಲಿ ಹೂಡಿ ಕಳೆದುಕೊಂಡವರ ಪಟ್ಟಿ ಕರ್ನಾಟಕದಲ್ಲೇನು ಸಣ್ಣದಿಲ್ಲ. ಲಕ್ಷಾಂತರ ಹಣತೆತ್ತು ಇವರ ಉತ್ಪನ್ನಗಳನ್ನು ಖರೀದಿಸಬೇಕು. ನಂತರ ಅವನ್ನು ಥೇಟು ಸೇಲ್ಸ್‌ಮನ್‌ಗಳಂತೆ ಮನೆಮನೆಗೂ ಹೊತ್ತೊಯ್ದು ಮಾರಾಟ ಮಾಡಬೇಕು. ಹಾಗೊಮ್ಮೆ ಸರಕುಗಳು ಮಾರಾಟವಾಗದಿದ್ದರೆ ಕಂಪನಿ ಸತ್ತರೂ ಅವುಗಳನ್ನು ವಾಪಾಸ್ಸು ಪಡೆಯುವುದಿಲ್ಲ. ಅಲ್ಲಿಗೆ ಡಾಲರ್ ಆಮಿಷಕ್ಕೆ ಬಿದ್ದವರು ತಮ್ಮಲ್ಲಿರುವ ರೂಪಾಯಿಯನ್ನೆಲ್ಲ ಕಳೆದುಕೊಂಡು ಹೊರಬರಬೇಕಾಗುತ್ತೆ. ನಿರುದ್ಯೋಗಿ ಯುವಕರು ಮತ್ತು ಗೃಹಿಣಿಯರೆ ಇವರ ಮೊದಲ ಟಾರ್ಗೆಟ್. ಇವರ ಒಟ್ಟಾರೆ ಏಜೆಂಟರುಗಳಲ್ಲಿ ಮಹಿಳೆಯರ ಸಂಖ್ಯೆ 70% ಹೆಚ್ಚಿದೆಯಂತೆ. ಕಾಕತಾಳೀಯ ಎನ್ನುವಂತೆ ಕಂಪನಿ ಮೇಲೆ ಕೇರಳದಲ್ಲಿ ಮೊದಲ ಕಂಪ್ಲೇಂಟ್ ಕೊಟ್ಟಿದ್ದೂ ಗೃಹಿಣಿಯೇ!

ಆಂಧ್ರದಲ್ಲೂ ಕಾದಿದೆ ಗ್ರಹಚಾರ

ಕೇರಳದಲ್ಲಿ ಕಳೆದ ವರ್ಷದಿಂದಲೇ ಆಮ್‌ವೇ ಮೇಲೆ ಪೊಲೀಸರು ಕಣ್ಣಿಟ್ಟಿದ್ದರು. ಕಳೆದ ನವೆಂಬರ್‌ನಲ್ಲಿ ಕೋಜಿಕೋಡ್‌ನ ಕಂಪನಿಯ ಗೋಡೌನ್ ಮೇಲೆ ದಾಳಿ ನಡೆಸಿದ್ದ ಸಿಐಡಿಯ ವಾಣಿಜ್ಯ ಅಪರಾಧಿ ತಂಡದ ಪೊಲೀಸರು ಮುಖ್ಯಸ್ಥ ಪಿ.ಎಂ.ರಾಜ್‌ಕುಮಾರ್ ಎಂಬಾತನನ್ನು ಬಂಧಿಸಿದ್ದಲ್ಲದೆ 17 ಲಕ್ಷ ಬೆಲೆಬಾಳುವ ಅಕ್ರಮ ದಾಸ್ತಾನನ್ನೂ ವಶಪಡಿಸಿಕೊಂಡಿದ್ದರು. ಇದು ಕೇರಳ ಮಾತ್ರ ಸೀಮಿತವಲ್ಲ, ಆಂಧ್ರ ಪ್ರದೇಶದಲ್ಲೂ ಕಂಪ ಮೇಲೆ ಹತ್ತಾರು ಕೇಸುಗಳು ದಾಖಲಾಗಿವೆ.

ಆಂಧ್ರದ ಸಿಐಡಿ ಪೊಲೀಸರ ಬಳಿಯೇ ಆಮ್‌ವ ವಿರುದ್ಧ ಏಳು ಕೇಸುಗಳಿವೆ. ಒಂದು ಕೇಸಿನಲ್ಲಿ ಈಗಾಗಲ ವಿಚಾರಣೆ ಮುಗಿದಿದ್ದು ಚಾರ್ಜ್‌ಶೀಟ್ ಸಹ ಸಲ್ಲಿಸಲಾಗಿ ಇನ್ನುಳಿದ ಆರು ಕೇಸುಗಳ ವಿಚಾರಣೆ ಬಾಕಿ ಇದೆ. ಸಿಐ ಅಲ್ಲದೆ ಚಿಕ್ಕದಪಲ್ಲಿ, ನಚರಾಂ, ಪಟ್ಟಾಭಿಪುರಂ (ಗುಂಟೂರು ಗವರ್ನರ್‌ಪೇಟ್ (ವಿಜಯವಾಡ), ರೈಲ್ವೆ ಕುಡೂರಿ ಪೊಲೀಸ್ ಠಾಣೆಗಳಲ್ಲೂ ಕೇಸುಗಳು ಜಮೆಯಾಗಿವೆ. ಕೆ ವರ್ಷದ ಹಿಂದೆ ವಿಚಾರಣೆ ಒಂದರಲ್ಲಿ ಹೈದ್ರಾಬಾದ ಹೈಕೋರ್ಟ್ ಆಮ್‌ವೇಯ ಕಾರ್ಯವೈಖರಿಗಳ **Money Circulation Schemes (Banning) Act** ನ ನಿಯಮಗಳನ್ನು ಉಲ್ಲಂಘಿಸುವಂತಿವೆ ಎಂದ ಅಭಿಪ್ರಾಯಪಟ್ಟಿತ್ತು. ನಂತರದಲ್ಲಿ ಸ್ವತಃ ಸುಪ್ರೀಂ ಕೋರ್ಟ ಈ ಅಭಿಪ್ರಾಯವನ್ನು ಎತ್ತಿಹಿಡಿದು ಸೂ ಕ್ರಮಕೈಗೊಳ್ಳುವಂತೆ ಆಂಧ್ರ ಸಿಐಡಿ ಪೊಲೀಸರಿಗೆ ತಾಕೀತ ಮಾಡಿತ್ತು. ಆದರೆ ಇದುವರೆವಿಗೆ ಆಂಧ್ರದಲ್ಲಿ ಆಮ್‌ ಮೇಲೆ ಖಾಕಿಗಳು ಖದರು ತೋರಿಸಿಲ್ಲ. ಆಂಧ್ರದ ಬಿಜೆಪಿ ಪ್ರಭಾವಿ ನಾಯಕನೊಬ್ಬನ ಹೆಂಡತಿಯೇ ಈ ಆಮ್‌ ಕಂಪನಿಯ ಏಜೆಂಟ್ ಆಗಿರೋದೆ ಪೊಲೀಸ ಹೊಣೆಗೇಡಿತನದ ಹಿಂದಿನ ರಹಸ್ಯ. ಇದೇ ಕಾರಣ ಆಂಧ್ರದಲ್ಲಿ ಹಲವಾರು ಎಂಎಲ್‌ಎಂ ಕಂಪನಿಗಳ ಮೇ ದಾಳಿ ನಡೆದರೂ ಆಮ್‌ವೇ ತಂಟೆಗೆ ಯಾರ ಹೋಗಿರಲಿಲ್ಲ. ಆದರೆ ಕೇರಳದಲ್ಲಿ ಆಮ್‌ವೇ ಸಿಇಒ ಬಂಧನವಾದ ಮೇಲೆ ಆಂಧ್ರ ಪೊಲೀಸರ ಕಾರ್ಯಪ್ರವೃತ್ತರಾಗಿದ್ದಾರೆ. ಆದ್ದರಿಂದ ಈಗಾಗಲೇ ಕೇ ಪೊಲೀಸರ ಬಂಧಿಯಾಗಿರುವ ವಿಲಿಯಂ ಎ ಪಿಂಕ್‌ನಿಯನ್ನು ಬಂಧಿಸಲು ಅನುವಾಗುವಂತೆ 'ಕೈ ಸ್ಥಿತ್ಯಂತರ' ವಾರೆಂಟ್ ಪಡೆದಿಟ್ಟುಕೊಂಡಿದ್ದಾರೆ. ಅ ಕೇರಳದಲ್ಲಿ ಬಂಧನವಾದ ನಂತರದ ದಿನದಲ್ಲೆ ಪತ್ರ ಸಂ **GO Ms.No. 178** ರಲ್ಲಿ ಅಧಿಕೃತ ಎಚ್ಚರಿಕೆ ಪ್ರಕಟಣೆಯೊಂದನ್ನು ಹೊರಡಿಸಿ 'ಆಮ್‌ವೇ ಎಂಟರ್‌ಪ್ರೈಸ ಅಥವಾ ಇನ್ನಾವುದೇ ಎಂಎಲ್‌ಎಂ ತರಹದ ವ್ಯವಹಾ ಜಾಲಕ್ಕೆ ನಾಗರಿಕರು ಬಲಿಯಾಗಬಾರದು' ಎಂದು ಮ ಮಾಡಿಕೊಂಡಿದ್ದಾರೆ. ಅದೇ ಪ್ರಕಟಣೆಯಲ್ಲಿ ಆಮ್ ಉತ್ಪನ್ನಗಳ ಜಾಹಿರಾತಗಳನ್ನೂ ಬ್ಯಾನ್ ಮಾಡಲಾಗಿದ

ಕೇವಲ ವಂಚನೆಗೆ ಒಳಗಾದವರ ಕೇಸುಗ ಮಾತ್ರವಲ್ಲದೆ ಈ ಆಮ್‌ವೇ ಸಂಸ್ಥೆ ಹಲವಾರು ಭಾರತೀ ಕಾನೂನುಗಳನ್ನು ಉಲ್ಲಂಘಿಸಿದ ಆರೋಪಕ ಗುರಿಯಾಗಲಿದೆ. ಭಾರತೀಯ ರಿಸರ್ವ್ ಬ್ಯಾ ರೂಪಿಸಿರುವ 'ವಿದೇಶಿ ವಿನಿಮಯ ನಿರ್ವಹಣೆ (ಚ ಖಾತೆ), 2000ರ ಕಾನೂನಿನನ್ವಯ ಮಲ್ಟಿ ಲೆವ ಮಾರ್ಕೆಟಿಂಗ್ ವ್ಯವಸ್ಥೆ ಮತ್ತು ವಿಧಾನಗಳ ನಿರ್ಬಂಧಿಸಿದ್ದರೂ ಆಮ್‌ವೇ ಅದನ್ನು ಮುಂ ವರೆಸಿಕೊಂಡೇ ಬಂದಿದೆ. ಸುಪ್ರೀಂ ಕೋರ್ಟ್ ಅಂ ಒಮ್ಮೆ ಈ ಎಂಎಲ್‌ಎಂ ವಹಿವಾಟನ್ನು ಬ್ಯಾನ್ ಆಗಿರ ಲಾಟರಿ, ಜೂಜುಗಳಂತಹ ಕರಾಳದಂಧೆಯೇ ಸರಿ ಎಂದಿ ಅಲ್ಲದೆ ವಿದೇಶಿ ನೇರ ಮಾರಾಟ ಕಂಪನಿಗಳು ಭಾರತ ನಡೆಸುವ ವಹಿವಾಟಿನಿಂದ ಗಳಿಸುವ ಲಾಭಾಂಶವನ್ನು ತ ಸ್ವದೇಶಕ್ಕೆ ಹೊಯ್ಯುವಂತಿಲ್ಲ ಎಂಬ ನಿಬಂಧನೆಯೂ ಆದರೆ ತನ್ನ ಒಂದೂವರೆ ದಶಕದ ಅವಧಿಯುದ್ದ ನೂರಾರು ಕೋಟಿ ಭಾರತೀಯ ಹಣವನ್ನು ಅಮೆರಿ ಹೊತ್ತೊಯ್ದ ಆರೋಪವೂ ಆಮ್‌ವೇಗೆ ಗಂಟುಬೀಳ

ಭಾರತೀಯರಿಗೆ ಬಣ್ಣ ಬಣ್ಣದ ಟೋಪಿ ಹಾಕಿ ಡಾ ಲೆಕ್ಕದಲ್ಲಿ ಲೂಟಿ ಹೊಡೆದ ಈ ಆಮ್‌ವೇ ಕಂಪ ಇನ್ಮುಂದೆ ಕೋರ್ಟಿಗೆ ಅಲೆದಾಡುವ ಕಾ ಖಾಯಮ್ಮಾಗಲಿದೆ...

● ಗಿರೀಶ್ ತಾಳಿಕ

ಕಾನೂನೆ ಬದಲಾಗಬೇಕಂತೆ

ಸಾಲುಸಾಲು ವಂಚನೆಯ ಪಾಪದ ಫಲವಾಗಿ ಆಮ್‌ವೇಯ ಸಿಇಒ, ಡೈರೆಕ್ಟರ್‌ಗಳು ಅರೆಸ್ಟಾಗಿ ಕಂಬಿ ಹಿಂದೆ ಸೇರುತ್ತಿದ್ದಂತೆ ಪ್ರಾಮಾಣಿಕನ ರೀತಿ ಪೋಸು ಕೊಡುತ್ತಿರುವ ಕಂಪನಿ ತನ್ನದು ತಪ್ಪೇ ಇಲ್ಲ ಎಂದು ವಾದಿಸುತ್ತಿದೆ. ಕಂಪನಿಯ ಗ್ಲೋಬಲ್ ಪ್ರೆಸಿಡೆಂಟ್ ಡೌಗ್ ಡೆವೋಸ್ ಎಂಬಾತ 'ಭಾರತೀಯ ಪೊಲೀಸರ ವರ್ತನೆ ಸರಿ ಅಲ್ಲ. ಇದರಿಂದಾಗಿ ಭವಿಷ್ಯದಲ್ಲಿ ಭಾರತವು ವಿದೇಶಿ ಹೂಡಿಕೆಯ ಅವಕಾಶವನ್ನ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿಕೊಳ್ಳಲಿದೆ. ಭಾರತದಲ್ಲಿ ಜಾರಿ ಇರುವ **Prize Chits and Money Circulation Schemes (Banning) Act, 1978** ಅನ್ನು ಸರ್ಕಾರ ಈ ಕೂಡಲೇ ತಿದ್ದುಪಡಿ ಮಾಡಬೇಕು' ಎಂದಿದ್ದಾನೆ. ವಿದೇಶಿ ಹೂಡಿಕೆಯ ನೆಪದಲ್ಲಿ ನಾವೀಗ ಎಂತಹ ದಾಸ್ಯತ್ವದಲ್ಲಿ ಇದ್ದೇವೆಂಬುದಕ್ಕೆ ಈ ಮಾತುಗಳೇ ಸಾಕ್ಷಿ. ಹಣ ಹೂಡಿದವರು ಒಟ್ಟಾಗಿ ಬಂಡೇಳದಿರಲಿ ಮತ್ತು ಹೂಡುವವರು ಹಿಂದೇಟು ಹಾಕದಿರಲೆಂದು ಈ ತರ್ಕವನ್ನು ಮಂಡಿಸುತ್ತಿದೆ ಆಮ್‌ವೇ ಕಂಪನಿ. ಅಂದಹಾಗೆ 'ನಾವು ಭಾರತದಲ್ಲಿ ನಮ್ಮ ಹೂಡಿಕೆ ಮತ್ತು ಆಸಕ್ತಿಗಳನ್ನೇನು ಕಡಿಮೆ ಮಾಡಿಕೊಳ್ಳುವುದಿಲ್ಲ' ಎಂಬ ಅಮೆರಿಕನ್ ಜಾಣ್ಮೆಯ ಮಾತನ್ನಾಡುವುದನ್ನೂ ಆತ ಮರೆತಿಲ್ಲ!

ಗುಣಮಟ್ಟದ ಶಿಕ್ಷಣ: ಕಿಮ್ಮನೆ ಕನಸು

ಇಂದಿನ ರಾಜಕಾರಣದಲ್ಲಿ ಮೌಲ್ಯಾಧಾರಿತ ರಾಜಕಾರಣಿಗಳು ತೀರಾ ವಿರಳ, ನಾವು ಯಾವುದೇ ಪಕ್ಷದತ್ತ ಕಣ್ಣುಹಾಯಿಸಿದರೂ ನಾನಾ ಲಾಬಿಗಳಲ್ಲಿ, ಹಗರಣಗಳಲ್ಲಿ ಕುತ್ತಿಗೆ ಮಟ್ಟ ಮುಳುಗಿರುವ ನಾಯಕರು ದಂಡಿಯಾಗಿ ಸಿಗುತ್ತಾರೆ. ಕಾಂಗ್ರೆಸ್ ಪಕ್ಷ ಇದಕ್ಕಿಂತ ಹೊರತೇನಲ್ಲ, ಆದರೆ ಸರಳ ಸ್ವಭಾವದ, ಸಜ್ಜನಿಕೆಯುಳ್ಳ ರಾಜಕಾರಣಿಗಳು ಅಪರೂಪ. ಇಂಥಾ ಬರಗಾಲದಲ್ಲಿ ತೀರ್ಥಹಳ್ಳಿಯ ಶಾಸಕ ಕಿಮ್ಮನೆ ರತ್ನಾಕರ್ ಸಾಮಾಜಿಕ ಆಸ್ಥೆಯುಳ್ಳವರ ಪಾಲಿಗೆ ಭರವಸೆ ಮೂಡಿಸುವಂಥಾ ವ್ಯಕ್ತಿ.

ತೀರ್ಥಹಳ್ಳಿ ಕ್ಷೇತ್ರದಿಂದ ಕಿಮ್ಮನೆ ರತ್ನಾಕರ್ ಗೆದ್ದುಬರುವುದು ಅಷ್ಟು ಸುಲಭದ ಮಾತಾಗಿರಲಿಲ್ಲ, ಹಣದ ಹೊಳೆಯನ್ನೇ ಹರಿಸಿದ ಕೆಜೆಪಿಯ ಮಂಜುನಾಥಗೌಡ, ಭ್ರಷ್ಟಾಚಾರ-ಗುಂಡಾಗಿರಿಗಳಲ್ಲಿ ಎತ್ತಿದ ಕೈಯೆನಿಸಿಕೊಂಡಿರುವ ಬಿಜೆಪಿಯ ಮಾಜಿ ಶಾಸಕ ಆರಗ ಜ್ಞಾನೇಂದ್ರ ಅವರ ವಿರುದ್ಧ ಚುನಾವಣಾ ರಾಜಕೀಯದಲ್ಲಿ ಸೆಣಸುವುದು ಸುಲಭದ ಮಾತಾಗಿರಲಿಲ್ಲ. ಇಂಥಾ ತೀವ್ರ ಪೈಪೋಟಿಯ ನಡುವೆಯೂ ಕ್ಷೇತ್ರದ ಮತದಾರರು ಜನಪರ ಕಾಳಜಿಯ, ಶುದ್ಧಹಸ್ತದ ರಾಜಕಾರಣಿ ಕಿಮ್ಮನೆಯವರನ್ನು ವಿಧಾನಸಭೆಗೆ ಕಳಿಸಿಕೊಟ್ಟಿದ್ದಾರೆ.


ಕಾಂಗ್ರೆಸ್ ಪಕ್ಷದ ಇಂದಿನ ಸಂಕೀರ್ಣ ಸಂಕೋಲೆಗಳ ನಡುವೆಯೂ ಜನಪರ ಆಡಳಿತ ನೀಡಬೇಕೆಂಬ ಇರಾದೆಯಲ್ಲಿರುವ ಸಿಎಂ ಸಿದ್ದರಾಮಯ್ಯನವರು ತಮ್ಮ ಟೀಂನಲ್ಲಿ ಕಿಮ್ಮನೆ ರತ್ನಾಕರ್‌ಗೆ ಅವಕಾಶ ಕಲ್ಪಿಸಿ, ಪ್ರಾಥಮಿಕ ಶಿಕ್ಷಣ ಇಲಾಖೆಯ ಸ್ವತಂತ್ರ ನಿರ್ವಹಣೆಯನ್ನು ವಹಿಸಿ ಶ್ಲಾಘನೀಯ ಕಾರ್ಯ ಮಾಡಿದ್ದಾರೆ. ಈ ಮೂಲಕ ಕಳೆದ 7-8 ವರ್ಷಗಳಲ್ಲಿ ಪ್ರಾಥಮಿಕ ಶಿಕ್ಷಣ ಕ್ಷೇತ್ರಕ್ಕೆ ಹಿಡಿದಿದ್ದ ಕೇಸರಿ ಗ್ರಹಣ ಬಿಡಿಸುವ ಕಾರ್ಯಕ್ಕೆ ನಾಂದಿ ಹಾಡಿದಂತಾಗಿದೆ ಎಂದರೆ ತಪ್ಪಾಗಲಾರದು.

ಹಲವು ಅಂಶಗಳಲ್ಲಿ ಸಮಾನ ಆಶಯಗಳನ್ನು ಹೊಂದಿರುವ ರತ್ನಾಕರ್ ಅವರು ಮೊದಲಿನಿಂದಲೂ ನಮ್ಮ ಪತ್ರಿಕಾ ಬಳಗಕ್ಕೆ ಉತ್ತಮ ಸ್ನೇಹಿತರಾಗಿದ್ದಾರೆ. ಹೀಗಾಗಿಯೇ ಕಳೆದ ಮಾರ್ಚ್‌ನಲ್ಲಿ ಶಿವಮೊಗ್ಗದಲ್ಲಿ ನಡೆದ ಪತ್ರಿಕೆಯ ವಾರ್ಷಿಕೋತ್ಸವ ಸಮಾರಂಭದ ಪ್ರಮುಖ ಭಾಷಣಕಾರರಲ್ಲಿ ಕಿಮ್ಮನೆಯವರೂ ಇದ್ದರು.

ಸಚಿವರಾಗಿರುವ ರತ್ನಾಕರ್ ಅವರು ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆಯೂ ಕಳೆದ ಬುಧವಾರ ಬಿಡುವು ಮಾಡಿಕೊಂಡು ನಮ್ಮ ಪತ್ರಿಕಾ ಕಚೇರಿಗೆ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರದಲ್ಲಿರುವ ಸಮಸ್ಯೆಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಾರೆ. ಅದರ ಸಂಕ್ಷಿಪ್ತ ರೂಪ ಇಲ್ಲಿದೆ.

• ಪ್ರಸ್ತುತ ಶಿಕ್ಷಣ ಇಲಾಖೆಯಲ್ಲಿರುವ ಪ್ರಮುಖ ಸಮಸ್ಯೆಗಳನ್ನು ಗುರುತಿಸಿದ್ದೀರಾ?

ಕಿಮ್ಮನೆ ರತ್ನಾಕರ್ : ಶಿಕ್ಷಣ ಇಲಾಖೆಯ ಮುಂದೆ ನಾನಾ ರೀತಿಯ ಸವಾಲುಗಳಿವೆ. ಮೊದಲಿಗೆ ನಮ್ಮ ಸರ್ಕಾರಿ ಶಾಲೆಗಳಲ್ಲಿ ಮೂಲಸೌಕರ್ಯದ ಕೊರತೆ ಎದ್ದುಕಾಣುತ್ತಿದೆ. ಬಹಳಷ್ಟು ಕಡೆ ಮಕ್ಕಳಿಗೆ ಸರಿಯಾದ ಕುಡಿಯುವ ನೀರಿನ ಸೌಕರ್ಯವಿಲ್ಲ, ಹುಡುಗರು ಹಾಗೂ ಹುಡುಗಿಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇಲ್ಲ, ಶೌಚಾಲಯ ಇದ್ದರೂ ನೀರಿಲ್ಲದೆ ಉಪಯೋಗಕ್ಕೆ ಬಾರದಂತಾಗಿವೆ. ಶಾಲೆಗಳಿಗೆ ಆಟದ ಮೈದಾನ ಕಡ್ಡಾಯವಾಗಿ ಇರಲೇಬೇಕು ಎಂಬ ನಿಯಮವಿದ್ದರೂ ಬಹುತೇಕ ಶಾಲೆಗಳಿಗೆ ಮೈದಾನವಿಲ್ಲ, ಗ್ರಂಥಾಲಯ ವ್ಯವಸ್ಥೆ ಇಲ್ಲ, ವಿದ್ಯುತ್ ಸಂಪರ್ಕವಿಲ್ಲದ ಶಾಲೆಗಳು ಎಷ್ಟೋ ಇವೆ. ಹೀಗೆ ಸಮಸ್ಯೆಗಳ ದೊಡ್ಡ



ಪಟ್ಟಿಯೇ ನಮ್ಮ ಮುಂದಿದೆ. ಆದ್ಯತೆಯ ಮೇರೆಗೆ ಈ ಸಮಸ್ಯೆಗಳನ್ನು ಒಂದೊಂದಾಗಿ ಬಗೆಹರಿಸಬೇಕಾಗಿದೆ.

ಇನ್ನೊಂದು ಪ್ರಮುಖ ಸಮಸ್ಯೆಯೆಂದರೆ ಶಿಕ್ಷಕರ ಕೊರತೆ. ಇಲಾಖೆಯಲ್ಲಿ ಸುಮಾರು 16 ಸಾವಿರ ಖಾಲಿ ಹುದ್ದೆಗಳಿವೆ. ಈ ಹುದ್ದೆಗಳನ್ನು ಭರ್ತಿ ಮಾಡಬೇಕಾದರೆ ಸರ್ಕಾರ ಆರ್ಥಿಕವಾಗಿ ಸದೃಢವಾಗಿರಬೇಕು. ಈಗಿನ ವಿಷಮ ಆರ್ಥಿಕ ಸನ್ನಿವೇಶದಲ್ಲಿ ಏಕಾಏಕಿ ನಿರ್ಧಾರ ತೆಗೆದುಕೊಳ್ಳುವುದು ಸಾಧ್ಯವಿಲ್ಲ.

• ಇಷ್ಟು ದೊಡ್ಡ ಪ್ರಮಾಣದಲ್ಲಿ ಶಿಕ್ಷಕರ ಕೊರತೆ ಉಂಟಾಗಲು ಏನು ಕಾರಣ?

ಕಿಮ್ಮನೆ ರತ್ನಾಕರ್ : ಪ್ರತಿವರ್ಷ ಸುಮಾರು 4-5 ಸಾವಿರ ಮಂದಿ ನಿವೃತ್ತಿಯಾಗುತ್ತಿರುತ್ತಾರೆ. ಆ ಸ್ಥಾನಕ್ಕೆ ಮತ್ತೆ ನಿಯಮಿತವಾಗಿ ನೇಮಕಾತಿ ನಡೆಯುತ್ತಿರಬೇಕು. ಆದರೆ ಹಿಂದಿನ ಸರ್ಕಾರಗಳು ಈ ವಿಷಯಗಳಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳದೇ ನಿರ್ಲಕ್ಷಿಸಿದ್ದರಿಂದ ಈಗ ಶಿಕ್ಷಕರ ಸಮಸ್ಯೆ ಇಷ್ಟೊಂದು ಅಗಾಧವಾಗಿದೆ.

• ಶಿಕ್ಷಣ ಇಲಾಖೆಯ ಆರ್ಥಿಕ ಸ್ಥಿತಿಗತಿಯ ಬಗ್ಗೆ ಸ್ವಲ್ಪ ವಿವರಿಸುತ್ತೀರಾ?

ಕಿಮ್ಮನೆ ರತ್ನಾಕರ್ : ಪ್ರತಿವರ್ಷ ಇಲಾಖೆಯ ವೆಚ್ಚ ಸುಮಾರು 15 ಸಾವಿರ ಕೋಟಿ ಸಿಗುತ್ತದೆ. ಅದರಲ್ಲಿ ಉದ್ಯೋಗಿಗಳ ಸಂಬಳ, ಸಾರಿಗೆ ಮುಂತಾದವುಗಳಿಗೆ 10.5 ಸಾವಿರ ಕೋಟಿ ಖರ್ಚಾಗಿಬಿಡುತ್ತದೆ. ಇನ್ನು ಯೂನಿಫಾರ್ಮ್ ಬಟ್ಟೆಗಾಗಿ ಸುಮಾರು 60-80 ಕೋಟಿ ವೆಚ್ಚವಾಗುತ್ತದೆ. ಪಠ್ಯಪುಸ್ತಕಗಳ ಹಂಚಿಕೆಗೆಂದು 70-80 ಕೋಟಿ ಹಣ ಬೇಕು. ಮಧ್ಯಾಹ್ನದ ಊಟಕ್ಕೆ ಕೇಂದ್ರದ ಅನುದಾನ ಬಂದರೂ ನಮ್ಮ ಪಾಲಿನ ವೆಚ್ಚವೂ ನೂರಾರು ಕೋಟಿಯಿದೆ. ಇನ್ನು ಸೈಕಲ್ ಖರೀದಿಗೆಂದು ಮತ್ತಷ್ಟು ಹಣ ವೆಚ್ಚವಾಗುತ್ತೆ... ಹೀಗಾಗಿ ಶಿಕ್ಷಣ ಕ್ಷೇತ್ರದಲ್ಲಿ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕೆಂದರೆ ಅಥವಾ ಮೂಲಸೌಕರ್ಯ ಕಲ್ಪಿಸಲೂ ಇಲಾಖೆಯಲ್ಲಿ ಸಂಪನ್ಮೂಲದ ತೀವ್ರವಾದ ಕೊರತೆಯಿದೆ.

ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿಯವರೊಂದಿಗೆ ಈ ಎಲ್ಲಾ ಅಂಶಗಳ ಬಗ್ಗೆ ಚರ್ಚಿಸಿ ಹೆಚ್ಚಿನ ಅನುದಾನ ಪಡೆಯಲು ಪ್ರಯತ್ನಿಸುತ್ತೇನೆ.

• ಶಿಕ್ಷಣದಂಥಾ ಅನುತ್ಪಾದಕ ಕ್ಷೇತ್ರಗಳಿಗೆ ಸರ್ಕಾರಿ ಅನುದಾನ ಕಡಿತ ಮಾಡಬೇಕೆಂಬುದು ಹಿಂದಿನ ಎಲ್ಲಾ ಸರ್ಕಾರಗಳ ನೀತಿಯಾಗಿತ್ತಲ್ಲವೆ?

ಕಿಮ್ಮನೆ ರತ್ನಾಕರ್ : ಶಿಕ್ಷಣವನ್ನು ನಾವು ಅನುತ್ಪಾದಕ ಎಂಬಂತೆ ಪರಿಗಣಿಸಬಾರದು. ಮಾನವ ಸಂಪನ್ಮೂಲ ಅಭಿವೃದ್ಧಿ ಎಂಬುದು ಒಂದು ವಿನೂತನವಾದ, ಉತ್ತಮ ಪರಿಕಲ್ಪನೆ. ಮಾನವ ಸಂಪನ್ಮೂಲ ಅಭಿವೃದ್ಧಿಯಿಂದ ಇತರ ಕ್ಷೇತ್ರಗಳಲ್ಲೂ ಸರ್ವತೋಮುಖ ಅಭಿವೃದ್ಧಿ ಸಾಧ್ಯ. ಅಂದರೆ ತಮ್ಮನ್ನು ತಾವೇ ಅಭಿವೃದ್ಧಿಪಡಿಸಿಕೊಳ್ಳಲು ಸಾಧ್ಯವಾಗುವಂತೆ

ಸಂದರ್ಶನ

ನಮ್ಮ ಜನರನ್ನು ಸಶಕ್ತರನ್ನಾಗಿಸುವುದು ಎಂದು ನಾವು ಈ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳಬಹುದು.

ಇದನ್ನು ಒಂದು ಸರಳ ಉದಾಹರಣೆ ಮೂಲಕ ಅರ್ಥಮಾಡಿಕೊಳ್ಳಬಹುದು. ಮಂಡ್ಯ ಮೈಸೂರು ಜಿಲ್ಲೆಗಳ ರೈತರ ಹೊಲಗಳಿಗೆ ಕೆಆರ್‌ಎಸ್ ಡ್ಯಾಮ್ ಕಟ್ಟಿ ನೀರು ಕೊಟ್ಟದ್ದರಿಂದಾಗಿ ಆ ಭಾಗದ ರೈತರು ಆರ್ಥಿಕವಾಗಿ ಸಶಕ್ತರಾಗಲು ಸಾಧ್ಯವಾಯಿತು. ಅಲ್ಲಿ ಸರ್ಕಾರ ಜನರಿಗೆ ಹಣ ಹಂಚಲಿಲ್ಲ; ಬದಲಿಗೆ ಅವರ ಹೊಲಗಳಿಗೆ ನೀರು ಹರಿಸಿತು. ಆ ಮೂಲಕ ಜನರು ತಮ್ಮ ಭವಿಷ್ಯವನ್ನು ಉತ್ತಮಪಡಿಸಿಕೊಳ್ಳಲು ಸಾಧ್ಯವಾಯ್ತು. ನಾವು ಇಂಥಾ ನೀತಿಗಳನ್ನು ಅಳವಡಿಸಿಕೊಂಡರೆ ಅದು ತನ್ನಿಂತಾನೇ ಅಭಿವೃದ್ಧಿಗೆ ದಾರಿ ಮಾಡಿಕೊಡುತ್ತದೆ ಎಂಬುದು ನನ್ನ ನಂಬಿಕೆ.

• ಇಲಾಖೆಯಲ್ಲಿ ಹಂಗಾಮಿ ಶಿಕ್ಷಕರು/ಬೋಧಕರನ್ನು ನೇಮಿಸಿಕೊಳ್ಳುವ ಪದ್ಧತಿ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಕಿಮ್ಮನೆ ರತ್ನಾಕರ್ : ನಾನು ಜವಾಬ್ದಾರಿ ವಹಿಸಿಕೊಂಡಾಗಿನಿಂದ ಇಂಥಾ ಹಲವಾರು ಸಮಸ್ಯೆಗಳು ನನ್ನ ಮುಂದೆ ಬಂದಿವೆ. ಹತ್ತಾರು ವರ್ಷಗಳಿಂದ ದೈಹಿಕ ಶಿಕ್ಷಕರಾಗಿ ದುಡಿಯುತ್ತಿದ್ದರೂ ತಮ್ಮನ್ನು ಕಾಯಂ ಮಾಡಿಲ್ಲ ಎಂಬ ದೂರು ಬಂದಿದೆ. ಚಿತ್ರಕಲಾ ಬೋಧಕರದೂ ಇದೇ ಸ್ಥಿತಿ. ಇನ್ನೂ ಕೆಲವರು ಎಂಫಿಲ್, ಬಿಎಡ್ ಮುಂತಾದ ಪದವಿ ಪಡೆದವರೂ ಹಂಗಾಮಿಗಳಾಗಿ ಕೇವಲ 3 ಸಾವಿರ ರೂಪಾಯಿಗಳಿಗೆ ದುಡಿಯುತ್ತಿದ್ದೇವೆ ಎಂದು ಅಲವತ್ತುಕೊಂಡಿದ್ದಾರೆ. ಇಂಥಾ ನಾನಾ ಸಮಸ್ಯೆಗಳು ಇರುವುದು ನಿಜ. ಆದರೆ ಇವುಗಳಿಗೆ ಪರಿಹಾರ ಕಂಡುಕೊಳ್ಳುವುದು ಅಷ್ಟು ಸುಲಭ ಸಾಧ್ಯವಿಲ್ಲ. ಆದ್ದರಿಂದ ಇಂಥಾ ಸಮಸ್ಯೆಗಳನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿ, ಸೂಕ್ತ ಪರಿಹಾರೋಪಾಯ ಕಂಡುಕೊಳ್ಳಬೇಕು. ಆದ್ದರಿಂದ ಈಗಲೇ ಅವುಗಳ ಬಗ್ಗೆ ಯಾವುದೇ ನಿಲುವು ತಾಳುವುದು ಸಾಧ್ಯವಿಲ್ಲ, ಇನ್ನು ಹೆಚ್ಚಿನ ಸಮಯಾವಕಾಶ ಬೇಕು.

• ಹಿಂದಿನ ಬಿಜೆಪಿ ಸರ್ಕಾರ ಶಿಕ್ಷಣದ ಕೇಸರೀಕರಣ ನೀತಿಯನ್ನು ಜಾರಿಗೆ ತಂದಿತ್ತಲ್ಲಾ? ಅದನ್ನು ಯಾವ ರೀತಿ ಬಗೆಹರಿಸುತ್ತೀರಿ?

ಕಿಮ್ಮನೆ ರತ್ನಾಕರ್ : ಈ ಬಗ್ಗೆ ನಾನು ಈಗಾಗಲೇ ನಮ್ಮ ನಿಲುವನ್ನು ತಿಳಿಸಿದ್ದೇನೆ. ಆದರೆ ಕೆಲವು ಮಾಧ್ಯಮಗಳಲ್ಲಿ 'ಕೇಸರೀಕರಣಕ್ಕೆ ಸಚಿವರ ವಿರೋಧ' ಎಂದು ಬಿಂಬಿತವಾಗಿದೆ. ನನ್ನ ನಿಲುವು ನೇರ ಮತ್ತು ಸ್ಪಷ್ಟ. ನಾನು ಯಾವುದರ ಪರವೂ ಅಲ್ಲ; ವಿರೋಧವೂ ಅಲ್ಲ, ನಮ್ಮ ಸಂವಿಧಾನದಲ್ಲಿ ನಮಗೆ ನೀಡಲಾಗಿರುವ ಮಾರ್ಗದರ್ಶನದ ಪ್ರಕಾರ ನಾವು ಆಡಳಿತ ನಡೆಸಬೇಕು. ಒಂದು ಆರೋಗ್ಯವಂತ, ಪ್ರಜಾತಾಂತ್ರಿಕ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವುದು ನಮ್ಮ ಕರ್ತವ್ಯ. ಜಾತ್ಯತೀತತೆ, ಸಾಮಾಜಿಕ ನ್ಯಾಯ ಮುಂತಾದ ಮೌಲ್ಯಗಳು ನಮ್ಮ ಶಿಕ್ಷಣದಲ್ಲಿರಬೇಕು. ಅದಕ್ಕೆ ಧಕ್ಕೆ ತರುವಂತಹ ಅಂಶಗಳನ್ನು ನಿವಾರಿಸಬೇಕಾಗುತ್ತದೆ.

ಈ ಸಂವಿಧಾನಬದ್ಧ ಕರ್ತವ್ಯವನ್ನು ಪ್ರಾಮಾಣಿಕವಾಗಿ ಈಡೇರಿಸಲು ಪ್ರಯತ್ನ ಮಾಡುತ್ತೇನೆ.

• ಶಿಕ್ಷಣ ಸಚಿವರಾಗಿ ನಿಮ್ಮ ಕನಸು ...?

ಕಿಮ್ಮನೆ : 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಉಚಿತ ಹಾಗೂ ಕಡ್ಡಾಯ ಶಿಕ್ಷಣ ನೀಡುವುದು ಚುನಾಯಿತ ಸರ್ಕಾರದ ಜವಾಬ್ದಾರಿ ಎಂದು ನಮ್ಮ ಸಂವಿಧಾನ ಹೇಳುತ್ತದೆ. ಅದನ್ನು ಸಮರ್ಪಕವಾಗಿ ಜಾರಿಗೆ ತರಬೇಕೆಂಬುದು ನನ್ನ ಕನಸು. ಅಲ್ಲದೆ ಪಿಯುಸಿ(10+2ತರಗತಿ)ವರೆಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ನಾವು ಪ್ರಯತ್ನ ಮಾಡಬೇಕಿದೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಲಂಕೇಶ್: ಒಂದು ನೆನಪು

ಬಹುಶಃ 1982ನೇ ಇಸವಿಯ ಮೇ ತಿಂಗಳ ಒಂದು ದಿನ. ನಾನಾಗ ಪ್ರಾಥಮಿಕ ಶಾಲಾ ಶಿಕ್ಷಕನಾಗಿದ್ದೆ. ಬೆಳಗ್ಗೆ 8 ಗಂಟೆ ಸಮಯದಲ್ಲಿ ಬಸವನಗುಡಿಯ ಗೋವಿಂದಪ್ಪ ರಸ್ತೆಯಲ್ಲಿದ್ದ 'ಲಂಕೇಶ್ ಪತ್ರಿಕೆ' ಕಚೇರಿಗೆ ಹೋಗಿ ಲಂಕೇಶರನ್ನು ಭೇಟಿ ಮಾಡಿದ್ದೆ. ಆಗ ಪತ್ರಿಕೆ ಬಹಳ ಉತ್ತುಂಗದಲ್ಲಿತ್ತು, ರಾಜಕಾರಣಿಗಳಿಗೆ, ಭ್ರಷ್ಟ ಅಧಿಕಾರಿಗಳಿಗೆ ಸಿಂಹಸ್ವಪ್ನವಾಗಿತ್ತು, ವಸ್ತುನಿಷ್ಠ ವರದಿಗಳಿಂದ, ಆಧಾರಸಹಿತ ಮಾಹಿತಿಗಳಿಂದ, ಮೊನಚಾದ ಭಾಷೆಯಿಂದ ನಮ್ಮಂತಹ ಶಿಕ್ಷಕರಿಗೆ, ಯುವಕರಿಗೆ, ಬದಲಾವಣೆ ಬಯಸುತ್ತಿದ್ದ ಸಾರ್ವಜನಿಕರಿಗೆ ಪತ್ರಿಕೆ ಆದರ್ಶವಾಗಿದ್ದು ಮಾರ್ಗದರ್ಶನ ನೀಡುವಂತಿತ್ತು.

ಪತ್ರಿಕೆಯಲ್ಲಿ ಆಗ 'ಬಂ', 'ಗುಂ' ಪದಗಳು ಬಳಕೆಯಾಗುತ್ತಿದ್ದವಲ್ಲದೆ ಭ್ರಷ್ಟ ರಾಜಕಾರಣಿ, ಹಾದಿ ತಪ್ಪಿದ ಸರ್ಕಾರಿ ಅಧಿಕಾರಿಗಳಿಗೆ ಮರ್ಮಾಘಾತಪಡಿಸುವಂತಹ ಭಾಷೆಯೂ ಇರುತ್ತಿತ್ತು. "ಮಡಿವಂತಿಕೆಯಿಂದ ನಾಜೂಕಾಗಿ ಇತರೆ ಪತ್ರಿಕೆಗಳಲ್ಲಿ ಬಳಸುವ ಶಬ್ದಗಳಿಗೆ ಬದಲಾಗಿ ಭ್ರಷ್ಟರಿಗೆ 'ಹೇಲು, ಕೆರ, ಸೂ... ಮಕ್ಕಳು' ಇತ್ಯಾದಿ ಶಬ್ದ ಪ್ರಯೋಗಿಸುವುದು ಸ್ವಲ್ಪ ಅಸಹನೀಯವಲ್ಲವೇ?" ಎಂದು ನಾನು ಅಂದಾಗ, ಮುಂಜಾನೆ ವಾಕಿಂಗ್ ಮುಗಿಸಿ ಶಾಂತರಾಗಿದ್ದ ಲಂಕೇಶರು ಕೆರಳಿ ಕೆಂಡವಾದರು. ವ್ಯಗ್ರತೆಯಿಂದ "ಏನ್ರಿ? ನಿಮಗೆ ಬುದ್ಧಿಗಿದ್ದಿ ಸರಿ ಇದೆಯೇನ್ರಿ? ನಿಮ್ಮಪ್ಪ ಏನು ಕೆಲಸ ಮಾಡುತ್ತಾನೆ?" ಎಂದು ಕೇಳಿದರು.


ನಾನು ವಿನೀತನಾಗಿ "ಕೃಷಿಕ" ಎಂದೆ.

"ನಿಮ್ಮ ಹೊಲಕ್ಕೆ ಯಾರದೋ ಹಸು ನುಗ್ಗಿ ನಾಲ್ಕಾರು ದಂಟು/ಸಸಿ ತಿನ್ನುತ್ತದೆ ಎನ್ನಿ, ಆಗ ನಿಮ್ಮ ತಂದೆ ಯಾವ ರೀತಿ ಪ್ರತಿಕ್ರಿಯೆ ಮಾಡುತ್ತಾರೆ, ಗೊತ್ತಾ? ರೀ ಮೇಷ್ಟ್ರೆ, ನಿಮ್ಮಪ್ಪ ಖಂಡಿತವಾಗಿ 'ಯಾವ ಬೋಳಿ ಮಗನ ದನ ಇದು? ಅಂಡಲೆಯಲು, ಹುಂಡು ಮೇಯಲು ಬಿಟ್ಟಿದ್ದಾನೆ ಸೂಳೆ ಮಗ ಮೆಟ್ನಲ್ಲಿ ಹೊಡಿಬೇಕು' ಎನ್ನುವುದಿಲ್ಲವೇ? ಅಮಾಯಕ ದನ ಮಾಲೀಕನ ಅರಿವಿಗೆ ಬಾರದೆ ಒಂದೆರಡು ದಂಟು ತಿಂದಿದೆ. ಯಾವುದನ್ನು ತಿನ್ನಬೇಕು, ತಿನ್ನಬಾರದೆಂಬ ಪರಿಜ್ಞಾನವಿಲ್ಲದ ಪಶು ಅದು. ಮಾಲೀಕನಿಗಾದರೋ ಬೇರೆಯವರ ಹೊಲ ತಿನ್ನಲೆಂಬ ಉದ್ದೇಶ ಕೂಡಾ ಇಲ್ಲ. ಆದಾಗ್ಯೂ ಬಳಕೆ ಮಾಡುವ ಭಾಷೆ, ಶಬ್ದ ಹೇಗಿರುತ್ತದೆ ಹೇಳಿ?" ಎಂದರು.

ಮುಂದುವರೆದು "ನೋಡಿ ಮೇಷ್ಟ್ರೆ, ಲಕ್ಷಗಟ್ಟಲೆ ಲಂಚ ಹೊಡೆಯುವ ಅಧಿಕಾರಿಗಳು, ಕೋಟಿಗಟ್ಟಲೆ ಲಪಟಾಯಿಸುವ ರಾಜಕಾರಣಿಗಳಿಗೆ ಯಾವ ಶಬ್ದ ಬಳಕೆ ಮಾಡಬೇಕು? ದೇಶದ ಸಂಪತ್ತನ್ನು ಲೂಟಿ ಮಾಡುತ್ತಿರುವ ದರೋಡೆಕೋರರಿಗೆ, ಕಳ್ಳ ಖದೀಮರಿಗೆ ಯಾವ ಶಬ್ದ ಬಳಕೆ ಮಾಡಬೇಕು? ಯಾವುದರಿಂದ ಹೊಡೆಯಬೇಕು? ಮಡಿವಂತಿಕೆಯಂತೆ, ಭಾಷೆ ಒರಟಂತೆ..." ಎನ್ನುತ್ತಾ ಲಂಕೇಶರು ಹೊರಟೇಹೋದರು.

ನನಗಂತೂ ಆ ದೃಶ್ಯ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಅವರಂತೆ ಸಾಮಾಜಿಕ ಕಾಳಜಿ, ಬದ್ಧತೆ ಇರುವ ಸಂವೇದನಾಶೀಲ ಪತ್ರಿಕೋದ್ಯಮಿಗಳು ಖಂಡಿತವಾಗಿಯೂ ಸಮಾಜದ ಜೀವಂತ ಆಸ್ತಿಯಾಗಿರುತ್ತಾರೆ.

- ಪಿ. ಅಂಜಿನಪ್ಪ ಗುಂಡಗತ್ತಿ ದಾವಣಗೆರೆ



ಮತ್ತೆ ಕೆಡವಿ ಕಟ್ಟಬೇಕಿದೆ!

ಒಬ್ಬ ಒಳ್ಳೆಯ ಲೇಖಕನನ್ನು ಲಂಕೇಶರು "ಪುಕ್ಕಲು ಶೆಟ್ಟಿ" ಎಂದು ಕರೆಯುತ್ತಿದ್ದರು. ಶೆಟ್ಟಿಯ ವೀರಾವೇಶದ ಮಾತುಗಳನ್ನು ಕೇಳಿದ್ದ ನಾನು ಲಂಕೇಶರೇಕೆ ಇವನನ್ನು ಪುಕ್ಕಲ ಎನ್ನುತ್ತಾರೆ ಎಂದು ಅನುಮಾನಗೊಂಡಿದ್ದೆ. ಆದರೆ ಲಂಕೇಶರ ಎಕ್ಸ್‌ರೇ ಕಣ್ಣು ಸತ್ಯವನ್ನೇ ಶೋಧಿಸಿ ಹೇಳಿತ್ತು, ಆ ಪುಕ್ಕಲು ಶೆಟ್ಟಿ ಏನೆಲ್ಲಾ ಓದಿಕೊಂಡಿದ್ದರೂ ಅದನ್ನೆಲ್ಲ ಜೀರ್ಣಿಸಿಕೊಳ್ಳಲಾಗದೆ ಒಂದು ದಿನ ಇದ್ದಕ್ಕಿದ್ದಂತೆ ಒಂದು ದೊಗಲೆ ಜಾಕೆ ಚಿಣ್ಣಿ ಹೊಲಿಸಿಕೊಂಡು, ಮಾರುದ್ದ ಬಿದಿರು ದೊಣ್ಣೆ ತಂದು ಮನೆಯಲ್ಲಿ ಮಡಗಿಕೊಂಡ. ನನ್ನ ಜೀವನದಲ್ಲಿ ನೋಡಿದ ಅಚ್ಚರಿಯ ಘಟನೆ ಇದಾಗಿದೆ.

ಇನ್ನೊಂದು ಘಟನೆ ಇಷ್ಟೇ ಸ್ವಾರಸ್ಯಕರವಾಗಿದೆ. ಹೋಟೆಲಿನಲ್ಲಿ ನುಲಿದಾಡಿಕೊಂಡು ಸಪ್ಲೈ ಮಾಡುತ್ತ ಇದ್ದ ಹುಡುಗನೊಬ್ಬನಿಗೆ ಸಿಗರೇಟ್ ಪ್ಯಾಕ್ ತರಲು ಐನೂರರ ನೋಟು ಕೊಟ್ಟು ಕಳುಹಿಸಿದ ಹೋಟೆಲ್ ಮಾಲೀಕ. ಹುಡುಗ ಬರಲಿಲ್ಲ, ಮರುದಿನ ಲಂಗ ದಾವಣಿ ಧರಿಸಿ, ಕೈಗೆ ಬಳೆ ಕೊಟ್ಟು, ಬುಟ್ಟಿಯೊಂದರಲ್ಲಿ ಯಲ್ಲಮ್ಮನನ್ನು ಇಟ್ಟುಕೊಂಡು ಭಿಕ್ಷಕ್ಕೆ ಬಂದ ಆತ "ಅವ್ವ ತೆಗೆದುಕೊಂಡಳು" ಎಂದ. ಜನಗಳಿಗೆ ಅದೊಂದು ಕುಚೋದ್ಯದ ಸಂಗತಿಯಾಗಿ ಕಂಡು ಬಿದ್ದು ಬಿದ್ದು ನಕ್ಕರು. ಆದರೆ ನನಗೆ ತುಂಬಾ ಅಚ್ಚರಿಯಾಗಿತ್ತು, ಒಬ್ಬನ ಮೇಲೇನೋ ನಿಸರ್ಗವೇ ದಾಳಿ ಮಾಡಿ ಹೆಣ್ಣು ಮಾಡಿತ್ತು, ಆದರೆ ಎಲ್ಲವನ್ನೂ ಓದಿಕೊಂಡು ಉಪನ್ಯಾಸ ನೀಡುತ್ತಿದ್ದ ಪುಕ್ಕಲು ಶೆಟ್ಟಿಯ ಮನಪರಿವರ್ತನೆ ಕಾರಣಗಳು ಎಷ್ಟು ಯೋಚಿಸಿದರೂ ಹೊಳೆಯಲಿಲ್ಲ.

ಹೊಸದಾಗಿ ಮತಾಂತರಗೊಂಡವನು ಮೂಲ ನಿವಾಸಿಗಳನ್ನೂ ಮೀರಿಸುತ್ತಾನಂತೆ. ಶೆಟ್ಟಿಯ ಹಾವಳಿ ಮೂಲಭೂತವಾದಿಗಳಿಗೇ ಅಚ್ಚರಿಯಾಗುವಂತೆ ಜರುಗತೊಡಗಿತು. ಬರಹದಲ್ಲಿ, ಮಾತಿನಲ್ಲಿ ಚಿ.ಮೂ. ಎಂಬ ವಿದ್ವಾಂಸನನ್ನೇ ಹಿಂದೆ ಹಾಕಿದ. ಅವನ ಮಾತಿನ ವರಸೆ ಕೇಳಿದರೆ ಇನ್ನು ಕೆಲವೇ ದಿನಗಳಲ್ಲಿ ಸಾಬರು ದಂಗೆ ಎದ್ದು ಹಿಂದೂಗಳನ್ನು ಮುಗಿಸಿ ಹಾಕುತ್ತಾರೆ ಎನ್ನುವಂತಿತ್ತು, ದಲಿತರನ್ನು ಕಂಡರೆ ಇಂತಹ ಭೀತಿಯಿರಲಿಲ್ಲ, ಅಕಸ್ಮಾತ್ ಅವರೂ ಬಂದರೆ "ಅಣ್ಣಾ ತಪ್ಪಾಯ್ತು ಕಣಣ್ಣ" ಎಂದು ಕಾಲಿಗೆ ಬಿದ್ದಾದರೂ ಬಚಾವಾಗುವ ನರಿಯ ಮನಸ್ಥಿತಿಯೂ ಅವನಲ್ಲಿತ್ತು.

ಪುಕ್ಕಲು ಶೆಟ್ಟಿ ಅಗ್ಗವಾಗಿ ಕೊಂಡ ವಿಶಾಲವಾದ ಸೈಟಿನಲ್ಲಿ ತನ್ನ ಅಭಿರುಚಿಗೆ ತಕ್ಕಂತೆ ಮನೆ ಕಟ್ಟಿಕೊಂಡ. ಆ ಮನೆಯ ಗೃಹಪ್ರವೇಶಕ್ಕೆ ತನ್ನ ಆದರ್ಶ ಪುರುಷರನ್ನೆಲ್ಲಾ ಕರೆಸಿಕೊಂಡ. ಉಪನ್ಯಾಸ, ಭಜನೆ, ಹೋಮ, ಯಜ್ಞ... ಇಂತಹ ಎಲ್ಲಾ ಕರ್ಮಗಳೂ ಸಾಂಗವಾಗಿ ನಡೆದವು. ಸ್ವತಃ ಶೆಟ್ಟಿ ಮಿರಿ ಮಿರಿ ಮಿಂಚುವ ರೇಷ್ಮೆ ಉಡುಪು ತೊಟ್ಟು ಹಾವೇರಿಯ ಟಗರಿನಂತೆ ಕಂಗೊಳಿಸುತ್ತಿದ್ದ.

ಶೆಟ್ಟಿಯ ಕನಸು ನನಸಾಗುವ ಕಾಲ ಬಂದೇಬಿಟ್ಟಿತು. ಆತನ ಪಾರ್ಟಿ ಅಧಿಕಾರಕ್ಕೆ ಬಂತು. ಆದ್ದರಿಂದ "ಇನ್ನಿಲ್ಲಿರುವುದು ವ್ಯರ್ಥ, ನಾನು ಇನ್ನೇನಿದ್ದರೂ ರಾಜಧಾನಿಯಲ್ಲಿರಬೇಕು. ಅದೂ ರಾಜ್ಯವಾಳುವವರ ಹತ್ತಿರವಿದ್ದು ಯಾರ್‍ಯಾರನ್ನ ಈ ಸರಕಾರದಿಂದ ದೂರವಿಡಬೇಕು, ಯಾರ್‍ಯಾರಿಗೆ ಶಿಕ್ಷೆ ಕೊಡಿಸಬೇಕು, ಅದಕ್ಕೆ ಪೂರಕವಾದ ಸಾಹಿತ್ಯ ಕೃಷಿಗೆ ತೊಡಗಬೇಕು" ಎಂದುಕೊಂಡು ರಾಜಧಾನಿಗೆ ಹೊರಡಲು ತಯಾರಾದ.

ಆದರೆ ಪ್ರೀತಿಯಿಂದ ಕಟ್ಟಿಸಿರುವ ಮನೆ ಮಾರುವುದು ಹೇಗೆ ಎಂದುಕೊಂಡು ವಿಚಾರಿಸಿದ. ಕಟ್ಟಿದ ಮನೆಗೆ ಎರಡು ಪಟ್ಟು ಲಾಭ ಬರುವಂತೆ ಕಂಡಿತು. ವ್ಯವಹಾರ ಅವನ ಹುಟ್ಟಿನಿಂದಲೇ ಬಂದಿದ್ದರಿಂದ ನಂಬಿಕಸ್ಥ ವ್ಯಕ್ತಿಯೊಬ್ಬನಿಗೆ ಮನೆ ಮಾರಲು ತಯಾರಾದ. ಕೊಳ್ಳುವ ಆಸಾಮಿ ಮನೆ ನೋಡಲು ಬಂದ. ಆತನನ್ನು ಅತ್ಯಂತ ಪ್ರೀತಿಯಿಂದ ಮಾತನಾಡಿಸಿದ ಶೆಟ್ಟಿ "ನೋಡಿ ಸ್ವಾಮಿ, ನನ್ನ ಜೀವನದಲ್ಲಿ ನನ್ನ ಶ್ರೇಷ್ಠ ಅಭಿರುಚಿಗೆ ತಕ್ಕಂತೆ ಒಂದು ಮನೆ ಕಟ್ಟಿಸಬೇಕೆಂದು ಕನಸು ಕಂಡಿದ್ದೆ ಆ ಕನಸು ನನಸಾಗಿದೆ. ಆದರೇನು ಮಾಡುವುದು? ಮುಖ್ಯಮಂತ್ರಿಗೆ ಸಾಹಿತ್ಯದ ಸಲಹೆಗಾರನಾಗಿ ಬೆಂಗಳೂರಿಗೆ ಹೋಗಬೇಕಿದೆ. ಅದಕ್ಕಾಗಿ ಅನಿವಾರ್ಯವಾಗಿ ಈ ಮನೆ ಮಾರಬೇಕಾಗಿದೆ. ಬನ್ನಿ ಇಲ್ಲಿ ನೋಡಿ. ಈ ರೂಮಿನಲ್ಲಿ ನಮ್ಮ ಸೋದರ ಮಾವನಂತಿರುವ ಭೈರಪ್ಪ ಮಲಗಿದ್ದರು. ಆ ರೂಮಿನಲ್ಲಿ ನನ್ನ ಚಿಕ್ಕಪ್ಪನಂತಿದ್ದ ಕೃಷ್ಣಭಟ್ಟ ಬಂದಾಗಲೆಲ್ಲ ಮಲಗುತ್ತಿದ್ದರು. ಇನ್ನು ಆ ರೂಮಿನಲ್ಲಿ ಸಂತೋಷ್‌ಜಿ ಬಂದು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಇಂತಹ ಐತಿಹಾಸಿಕವಾದ ಘಟನೆಗಳಿಗೆ ಸಾಕ್ಷಿ ಆಗಿರುವ ಈ ಮನೆ ಮಾರುವುದಕ್ಕೆ ನನ್ನ ಮನಸ್ಸು ಒಪ್ಪುತ್ತಿಲ್ಲ" ಎಂದಾಗ, ಕೊಳ್ಳುವವನು "ಆಯ್ತು ಇನ್ನೊಂದು ಇಪ್ಪತ್ತೈದು ಸಾವಿರ ಜಾಸ್ತಿನೆ ತಗಂಬುಡಿ ಅತ್ಲಾಗೆ" ಎಂದ. ಶೆಟ್ಟಿ ಹೇಳ ಹೊರಟದ್ದು ಮನೆಯ ಹಿರಿಮೆಯನ್ನು, ಕೊಳ್ಳುವ ಬಕರಾ ಗ್ರಹಿಸಿದ್ದು ಹೆಚ್ಚು ಹಣ ಕೇಳುತ್ತಿದ್ದಾನೆ ಎಂದು. ಅಂತೂ ಮನೆ ಬಿಕರಿಯಾಯಿತು. ಎಂಟು ಲಕ್ಷಕ್ಕೆ ಕಟ್ಟಿದ ಮನೆ ಇಪ್ಪತ್ತೈದು ಲಕ್ಷಕ್ಕೆ ಮಾರಾಟವಾಯಿತು. ಶೆಟ್ಟಿ ಮತ್ತೊಮ್ಮೆ ಮನೆಯ ಮಹತ್ವವನ್ನು ವಿವರಿಸಿ ಬಂದಾಗೆಲ್ಲಾ ತಾನು ಇಲ್ಲೇ ಉಳಿದುಕೊಳ್ಳುತ್ತೇನೆ ಎಂದು ಹೇಳಿ ಬೆಂಗಳೂರಿಗೆ ಹೊರಟುಹೋದ.

ಮನೆಯನ್ನು ಕೊಂಡ ವ್ಯಕ್ತಿ ಒಂದು ದಿನ ಮನೆ ಎದುರು ನಿಂತು ನೋಡಿದ. ಯಾಕೊ ಆ ಮನೆ ಹೌಸಿಂಗ್ ಬೋರ್ಡ್ ಮನೆಯಂತೆ ಕಂಡಿತು. ದುಡ್ಡಿಗೇನೂ ಕೊರತೆಯಿರಲಿಲ್ಲ, ಆದ್ದರಿಂದ ಕಲಾತ್ಮಕವಾಗಿ ರೂಪಿಸಲು ಕೈ ಹಾಕಿದ. ಮೊದಲು ವಿಕಾರವಾಗಿದ್ದ ಕಾಂಪೌಂಡ್ ಕೆಡವಿ ಹಾಕಿದ. ನಂತರ ಶೆಟ್ಟಿ ಹೇಳಿದ್ದ ಪುಣ್ಯ ಪುರುಷರು ತಂಗಿದ್ದ ಕೊಠಡಿಗಳು ಧ್ವಂಸವಾದವು. ಕಿತ್ತು ಬಿಸಾಡಿದ ಕಿಟಕಿ ಬಾಗಿಲುಗಳನ್ನು ಬಡಬಗ್ಗರು ತೆಗೆದುಕೊಂಡು ಹೋದರು. ಟಾಯ್ಲೆಟ್, ಬಾತ್ ರೂಮಿನ ಬೇಸನ್‌ಗಳು ಕೂಡ ಮುಕ್ಕಾಗಿ ರಸ್ತೆಗೆ ಬಿದ್ದವು. ಕೆಡವುತ್ತಾ, ಕೆಡವುತ್ತಾ ಅಡಿಗೆ ಮನೆಯೊಂದನ್ನು ಬಿಟ್ಟು ಇನ್ನೆಲ್ಲ ನೆಲ ಸಮವಾದವು. ಆನಂತರ ಕೊಂಡವನ ಕನಸಿನ ಕುಟೀರ ವಿಳತೊಡಗಿತು. "ಅರೆ, ಈ ರಗಳೆಗಿಂತ ಹೊಸ ಸೈಟನ್ನೇ ತೆಗೆದುಕೊಂಡು ಕಟ್ಟಬಹುದಿತ್ತಲ್ಲಾ" ಎಂಬ ಮಾತನ್ನ ನಾನು ಮನೆಯ ಮಾಲೀಕನಿಗೆ ಹೇಳಿದಾಗ "ಜಾಗ ಚೆನ್ನಾಗಿದೆ. ಆದ್ರೆ ಮನೆ ಚೆನ್ನಾಗಿರಲಿಲ್ಲ, ಅದ್ಕೆ ಕೆಡವಿ ಹಾಕಿದೆ" ಎಂದ. ದುಡ್ಡಿದ್ದವರ ದಾಸತ್ತು ಎಂದುಕೊಂಡು ಸುಮ್ಮನಾದೆ.

ಒಂದು ದಿನ ಪುಕ್ಕಲು ಶೆಟ್ಟಿ ಬಂದು ನೋಡುತ್ತಾನೆ, ಆತನ ಮನೆಯೇ ಅಂತರ್ದಾನವಾಗಿ ಭವ್ಯಬಂಗಲೆ ಬಂದು ಕುಳಿತಿದೆ. ದಾರಿ ತಪ್ಪಿ ಬಂದೆನೋ ಏನೂ ಅನ್ನಿಸಿ ಶೆಟ್ಟಿ ಹೊರಟುಹೋದ. ಲಾಭ ನಷ್ಟದ ವ್ಯವಹಾರಸ್ಥರಿಗೆ ಭೂಮಿ ತಾಯಿಯ ಭಾವನೆಗಳು ಅಷ್ಟಾಗಿ ಕಾಡಿಸುವುದಿಲ್ಲ, ಅದರಿಂದ ಪಡೆದ ಆದಾಯದ ದ್ವಿಗುಣದ ಬಗ್ಗೆ ಯೋಚಿಸುತ್ತಾನೆ. ಪುಕ್ಕಲು ಶೆಟ್ಟಿ ಮಾರಿದ ಮನೆಯ ಹಣದಿಂದ ಬದುಕಿಹೋದ.

ಈಗ ಹೊಸದಾಗಿ ಬಂದಿರುವ ಸರಕಾರ ಶೆಟ್ಟಿ ಮನೆ ಕೆಡವಿ ಕಟ್ಟಿದ ಕೆಲಸ ಮಾಡಬೇಕಿದೆ. ಎಲ್ಲಾ ನಿಗಮ, ಮಂಡಳಿ, ಪ್ರಾಧಿಕಾರಗಳಲ್ಲಿ ಮನೆ ಮುರುಕರು ಬಂದು ಮಲಗಿ ಬಹಳ ಅನಾಹುತಗಳನ್ನೇ ಮಾಡಿಬಿಟ್ಟಿದ್ದಾರೆ. ಶಿಕ್ಷಣ, ಸಂಸ್ಕೃತಿ, ಭಾಷೆ, ಎಲ್ಲದರ ಮೇಲೂ ದಾಳಿ ಮಾಡಿ ವಿರೂಪಗೊಳಿಸಿದ್ದಾರೆ. ಇವರು ಹೆದರುವುದು ತಮಗಿಂತ ದೊಡ್ಡ ಶಕ್ತಿಗೇ ಹೊರತು ಇನ್ಯಾವ ವಿವೇಕಕ್ಕೂ ಜಗ್ಗುವುದಿಲ್ಲ, ಕಳೆದೈದು ವರ್ಷಗಳಿಂದ ಕರ್ನಾಟಕದ ಮೂರನೇ ಅತಿದೊಡ್ಡ ಶಕ್ತಿವಂತ ಜನಾಂಗವಾದ ಮುಸ್ಲಿಮರು ವಿಧಾನಸೌಧ ಯಾವ ಕಡೆಗಿದೆ ಎಂದು ತಿರುಗಿಯೂ ನೋಡಿರಲಿಲ್ಲ, ಆದರೆ ಈಗ ಅವರ ಸಂಖ್ಯೆ ದೊಡ್ಡದಾಗಿಯೇ ವಿಧಾನಸೌಧದ ಕಾರಿಡಾರಿನಲ್ಲಿ ತಿರುಗುತ್ತಿದೆ. ನಮ್ಮ ನಡುವಿನ ಶಕ್ತಿವಂತ ಜನಾಂಗವನ್ನು ದೇಶ ಕಟ್ಟಲು ಬಳಸಿಕೊಳ್ಳಬೇಕೆ ಹೊರತು ದೇಶ ಹಾಳು ಮಾಡಲಲ್ಲ, ಇಂತದ್ದೊಂದು ವಿವೇಕವೇ ಬಿ.ಜೆ.ಪಿ.ಗಳಿಗಿರಲಿಲ್ಲ, ಇನ್ನೂರ ಇಪ್ಪತ್ತನಾಲ್ಕು ಸ್ಥಾನಗಳ ಪೈಕಿ ಒಂದೇ ಒಂದು ಸೀಟನ್ನೂ ಮುಸ್ಲಿಮರಿಗೆ ಕೊಡಲಿಲ್ಲ ಎಂದರೆ ಅವರ ಜನಾಂಗ ದ್ವೇಷ ಎಷ್ಟಿರಬಹುದು ಅನ್ನಿಸುತ್ತದೆ. ಇನ್ನೊಂದು ವಿಶೇಷ, ವಿಧಾನಸೌಧದ ಕಾರಿಡಾರಿನಲ್ಲಿ ಗಡ್ಡದ ಸಾಬರನ್ನೇನಾದರೂ ಬಹು ಸಂಖ್ಯೆಯಲ್ಲಿ ಚಿ.ಮೂ. ಎಂಬ ಸಂಶೋಧಕ ನೋಡಿದ್ದಾದರೆ ವಿಧಾನಸೌಧಕ್ಕೆ ಭಯೋತ್ಪಾದಕರಿಂದ ಅಪಾಯವಿದೆ ಎಂದು ಹೇಳಲೂ ಹೇಸುವುದಿಲ್ಲ, ಇಂತ ಹೇಳಿಕೆಯನ್ನು ಬಿತ್ತರಿಸಲು ಭಟ್ಟ, ಶಾನುಭೋಗ, ಸಿಂಗ್ರಿಗಳೆಲ್ಲಾ ರೆಡಿಯಾಗಿ ಕೂತಿವೆ!

● ಬಿ. ಚಂ

ಬಸವ ಜಯಂತಿಯ ದಿನ ಕೊಂಡಣ್ಣನೊಂದಿಗೆ

ಕೊಂಡಣ್ಣ ನಮ್ಮೂರು ಬಳಿದಾಳೆಯ ಅತೀ ಹಿರಿಯ ಪ್ರಜೆಗಳಲ್ಲಿ ಒಬ್ಬ. ಗ್ರಾಮದ ಸಾಮಾಜಿಕ ಚೌಕಟ್ಟಿನ ಕೆಳಹಂತದಲ್ಲಿರುವ ಇರುಳಿಗರು ಅಥವಾ ಕಾಡು ಪೂಜಾರಿಗ ಸಮುದಾಯದ ಕೊಂಡಣ್ಣನಿಗೆ ಮೊನ್ನೆ ಬಸವ ಜಯಂತಿಯ ದಿನ ಸನ್ಮಾನವಾಯಿತು.

ಊರಿನ ಒಕ್ಕಲಿಗ-ಲಿಂಗಾಯತರ ಯಾವ ಮನೆಗಳಲ್ಲಿ ಕೊಂಡ ಜೀತ ಮಾಡಿಕೊಂಡು ಬಂದಿದ್ದನೊ, ಅವರ ಆಡು ದನಗಳನ್ನು ಕಾಡಿಗೊಯ್ದು ಮೇಯಿಸಿ ಸಲುಹಿದ್ದನೋ ಅದೇ ಮನೆಗಳ ಹೊಸ ಪೀಳಿಗೆಯ ತರುಣರು ಊರಿನಲ್ಲಿ ಹೊಸದಾಗಿ 'ಬಸವ ಸೇವಾ ಸಮಿತಿ' ಮಾಡಿಕೊಂಡಿದ್ದಾರೆ.

ಬಸವ ಜಯಂತಿ ಆಚರಿಸಲು ಹೊರಟ ಈ ಗೆಳೆಯರು ನನಗೆ ಫೋನ್ ಮಾಡಿ "ನೀನೂ ಫಂಕ್ಷನಗೆ ಬಾ" ಅಂದಾಗ "ನೀವೆಲ್ಲಾ ಸೇರಿ ಜಾತಿ ಸಂಘ ಮಾಡಿಕೊಂಡಂಗೆ ಕಾಣ್ತದೆ, ನಾನು ಬರನಾರೆ...." ಎಂದಿದ್ದೆ. ಕೊನೆಗೆ ಅದು ಹಾಗಲ್ಲ... ಹೀಗಲ್ಲ ಎಂದೆಲ್ಲಾ ಮಾತುಗಳಾಗಿ ಬಸವ ಜಯಂತಿಯ ದಿನ ಬೆಳಗ್ಗೆ ನಾನು ಬಳಿದಾಳೆಗೆ ಹೋದಾಗ ಊರ ಪಕ್ಕದ ಒಬ್ಬರ ಹೊಲದಲ್ಲಿ ಪುಟ್ಟ ವೇದಿಕೆ, ಶಾಮಿಯಾನ, ಕುರ್ಚಿಗಳಿಂದ ರೆಡಿಯಾಗಿದ್ದ ಸ್ಥಳದಲ್ಲಿ ಕಾರ್ಯಕ್ರಮ ಆರಂಭವಾಯಿತು. ನಮ್ಮೂರಿನಲ್ಲಿ ಹುಟ್ಟಿ ಬೆಳೆದು ಈಗ ಬೆಂಗಳೂರಿನಲ್ಲಿ ಆಫೀಸರ್‌ಗಳಾಗಿರುವವರು; ಗಣ್ಯರು ಹಾಗೂ ನೆರೆಯೂರು ನೇರಳೆ ಹಟ್ಟಿಯ ಮಠಾಧೀಶರ ಸಮ್ಮುಖದಲ್ಲಿ ಬಸವ ಜಯಂತಿ ನಡೆಯಿತು. ಶಿವಶರಣರ ವಚನಗಳನ್ನು 16ನೇ ಶತಮಾದಲ್ಲಿ ಸಂಗ್ರಹಿಸಿ, ದಾಖಲಿಸಿ ಈಗಿನವರ ಕೈಗೂ ತಲುಪುವ 'ಶೂನ್ಯ ಸಂಪಾದನೆ'ಯಂತಹ ದೊಡ್ಡ ಕೆಲಸ ಮಾಡಿದ ಸಿದ್ದಲಿಂಗ ಸ್ವಾಮಿಯವರು ಬಳಿದಾಳೆಯ ಸಮೀಪದಲ್ಲೇ ಇರುವ ಗುಮ್ಮಳಾಪುರ ಮಠದವರು. ಇದನ್ನು ನನ್ನ ಭಾಷಣದಲ್ಲಿ ಹೇಳಿದ ನಂತರ ಮುಂದಿನ ಸೊಗಸಿನ ಕಾರ್ಯಕ್ರಮ ನಡೆಯಿತು.

ಅದು ಗ್ರಾಮದ ಎಲ್ಲಾ ಜಾತಿಸಮುದಾಯಗಳಿಗೆ ಸೇರಿದ ಒಬ್ಬೊಬ್ಬ ಹಿರಿಯ ವ್ಯಕ್ತಿಗಳಿಗೆ ಸನ್ಮಾನ ಮಾಡುವ ಕಾರ್ಯಕ್ರಮ. ಈ ಕೊಂಡಣ್ಣ ಇರುಳಿಗರ ಹಿರಿಯ ಪ್ರಜೆಯಾಗಿ ವೇದಿಕೆ ಏರಿ ಪುಟ್ಟ ಸನ್ಮಾನ ಪಡೆದುಕೊಂಡ.



ಆಶ್ಚರ್ಯ ಮೂಡಿಸುವ ಈ ಘಟನೆ ಕೊಂಡಣ್ಣನಿಗೆ ಕೊಂಚ ದಿಗಿಲು ತಂದಿರಲಿಕ್ಕೂ ಸಾಕು!

ತೊಂಭತ್ತು ಪ್ಲಸ್ ವಯಸ್ಸಿನ ಕೊಂಡ ಸಾಮಾನ್ಯನಲ್ಲ, ಊರಿನ ಜನ ಹಾಗೂ ದನ ಎರಡಕ್ಕೂ ನಾಟಿ ವೈದ್ಯನವನು. ಮೈಯಲ್ಲಿ ಕಸುವಿದ್ದಾಗ ಬ್ಯಾಟೆಗೆ ಅಂತ ಕಾಡು ಬಿದ್ದರೆ ದಿನಗಟ್ಟಲೆ ಅವನು ಮನೆಗೇ ವಾಪಸ್ ಬರುತ್ತಿರಲಿಲ್ಲ, ಮೊಲ, ಉಡ, ಸಾರಗ, ಕಾಡುಕೋಳಿ, ಜೇನು ಬೇಟೆಗಳೆಂದರೆ ಅವನಿಗೆ ಪ್ರಾಣ.

ಸರಿಸುಮಾರು ಎಪ್ಪತ್ತು ವರ್ಷಗಳ ಕಾಲ ಜೀತ, ಕೂಲಿನಾಲಿ, ಬ್ಯಾಟೆಗಳ ಮೂಲಕ ಜೀವನ ನಿರ್ವಹಣೆ ಮಾಡಿಕೊಂಡ ಕೊಂಡನಿಗೆ ಒಂದು ಗೇಣೆನಷ್ಟೂ ಸ್ವಂತ ಕೃಷಿ ಭೂಮಿ ಇರಲಿಲ್ಲ, ಈಗ ಅವನ ಮಗ ಬಾಲಕೊಂಡ ಕಾಡಿನ ಭೋಂದ್ರಿ (ಬೌಂಡರಿ) ಹತ್ತಿರ ಅರ್ಧ ಎಕರೆಯಷ್ಟು ಕಾಡು ಕಡಿದು ರಾಗಿ ಬೆಳೆದುಕೊಳ್ಳುತ್ತಿದ್ದಾನೆ.

ಈ ಕಾಡು ಪೂಜಾರಿಗರಲ್ಲಿರುವ ನಾಟಿವೈದ್ಯದ ಜ್ಞಾನ ಹಾಗೂ ಆಚರಣೆ ಕುತೂಹಲ ಹುಟ್ಟಿಸುತ್ತದೆ. ನಾನೊಂದು ದಿನ ಬೆಳಗ್ಗೆ ಹೊಲದತ್ತ ಹೊರಟಿದ್ದಾಗ ಕೊಂಡನ ಗುಡ್ಡಿನ ಮುಂದೆ ಒಂದು ದೃಶ್ಯ ಕಂಡೆ. ಕೊಂಡ ಮತ್ತು ಲಿಂಗಾಯತರ ಹುಡುಗ ಮಾದೇಸ ಎದುರಾಬದುರಾ ನಿಂತಿದ್ದಾರೆ. ಕೇವಲ ಒಂದಡಿ ಅಂತರದಲ್ಲಿ ಎದುರುಬದುರು ನಿಂತಿದ್ದ ಅವರಿಬ್ಬರ ಸೊಂಟವನ್ನು ಬಿದಿರಿನ ದಬ್ಬೆಯಂತದ್ದೊಂದು ಸುತ್ತಾ ಬಳಸಿಕೊಂಡಿತ್ತು, ಹತ್ತಿರ ಹೋಗಿ ನೋಡಿದರೆ ಕೊಂಡ ಎಂಥದ್ದೊ ಮಂತ್ರ ಹೇಳುತ್ತಾ ತನ್ನೆರಡು ಕೈಗಳಿಂದ ಸೊಂಟದ ಬಳಿ ಆ ಹಸೀ ದಬ್ಬೆ ಹಿಡಿದಿದ್ದ, ಯುವಕ ರೋಗಿಯೂ ಹಾಗೇ ಶ್ರದ್ಧೆಯಿಂದ ದಬ್ಬೆ ಹಿಡಿದು ನಿಂತಿದ್ದ. ನೋಡನೋಡುತ್ತಿದ್ದಂತೆ ಆ ದಬ್ಬೆ ಅವರಿಬ್ಬರ ನಡುವಿನ ಗ್ಯಾಪ್ ಬಳಿ ಕಬ್ಬಿಣವನ್ನು ಮ್ಯಾಗ್ನೆಟ್ ಆಕರ್ಷಿಸುವಂತೆ ಹತ್ತಿರ ಸರಿಯುತ್ತಾ ಸರಿಯುತ್ತಾ ಜಾಯಿಂಟ್ ಆಯಿತು. ಆಮೇಲೆ ಕೊಂಡ ಆ ದಬ್ಬೆಯನ್ನು ಬಿಡಿಸಿ ಮುರಿದು ಬೇಲಿಯ ಮೇಲೆಸೆದು "ಎಲ್ಲಾ ಸರಿ ಓಯ್ತದೆ, ನೀನ್ ಓಗ್ ಬುದ್ದೀ..." ಅಂದ.

ಸೊಂಟ ಉಳುಕಿಸಿಕೊಂಡಿದ್ದ ಯುವಕ ಆಯಿತೆಂದು ಹೊರಟ. ಉಳುಕಿನ ಚಿಕಿತ್ಸೆಗೆ ಗ್ರಾಮವೈದ್ಯ ಕೊಂಡಣ್ಣ ಬಳಸಿದ ದಬ್ಬೆ ಸೂಲಿ ಕಡ್ಡಿಯದು. ಕೆರೆ ಬಯಲಲ್ಲಿ ಜವುಗು ಭೂಮಿಯ ದಂಡೆಗಳಲ್ಲಿ ಬೆಳೆಯುವ ಸೂಲಿ ಗಿಡಕ್ಕೆ ಔಷಧಿಯ ಗುಣವಿದೆ, ಕೆಲವರು ಹಲ್ಲುಜ್ಜಲು ಸೂಲಿ ಕಡ್ಡಿ ಬಳಸುತ್ತಾರೆ. ಇದರೊಂದಿಗೆ ಮಕ್ಕಳು ಹೆದರಿದರೆ ಅಂತ್ರ (ಯಂತ್ರ) ಕಟ್ಟಿ ಮಂತ್ರ ಹೇಳುವುದು, ದನಗಳ ಗೊರಸಿಗೆ ಹುಣ್ಣಾದರೆ, ರಾಸುಗಳು ಹೊಟ್ಟೆ ಉಬ್ಬರಿಸಿಕೊಂಡು ಉಜ್ಜೆಕೊಂಡರೂ ನಾಟಿ ಚಿಕಿತ್ಸೆ ನೀಡುವ ಡಾ. ಕೊಂಡಣ್ಣನದ್ದು ಸರಳ ಬದುಕು. ಒಂದು ಉದ್ದನೆಯ ಚೆಡ್ಡಿ, ಶರಟು, ಹೆಗಲ ಮೇಲೊಂದು ವಸ್ತ್ರ ಇವಿಷ್ಟೇ ಆತನ ವೇಷಭೂಷಣ. ಲಂಕೇಶರ 'ಸಂಕ್ರಾಂತಿ' ನಾಟಕದಲ್ಲಿ ಬರುವ ಉಜ್ಜನ ಪಾತ್ರದಂತೆ ಭಾಸವಾಗುವ ಬಳಿದಾಳೆಯ ಕೊಂಡ ತನ್ನೂರಿನ ಮಾಲೀಕರಂತಿರುವ ಮೇಲ್ಜಾತಿಗೆ ಸೇರಿದ ಹೊಸ ತಲೆಮಾರಿನ ಯುವಕರು ತನ್ನನ್ನು ವೇದಿಕೆಗೆ ಕರೆದು ಗೌರವಿಸಿದ್ದನ್ನು, ಬಸವಣ್ಣ ಅಲ್ಲಮಪ್ರಭು ಎಂತೆಲ್ಲಾ ಭಾಷಣ ಮಾಡಿದ್ದನ್ನು ಅದೆಷ್ಟು ಅರ್ಥ ಮಾಡಿಕೊಂಡನೋ ಗೊತ್ತಿಲ್ಲ. ಇನ್ನೊಬ್ಬ ಮನುಷ್ಯ ಜೀವಿಯ ಮೇಲೆ ತಾರತಮ್ಯ ಮಾಡುವ ಸಾಮಾಜಿಕ ಅಧಿಕಾರ ಇರದ ಕೊಂಡನಿಗೆ, ಆ ತರದ ತಾರತಮ್ಯ ಮಾಡಬಲ್ಲ ಶಕ್ತಿ ಇರುವವರು, ಬಹಳ ಹಿಂದಿನಿಂದಲೂ ಇದ್ದ ರೂಢಿಯನ್ನು ದಾಟಿ ಬಂದು ತನ ಬಗ್ಗೆ ಗೌರವದ, ಪ್ರೀತಿಯ ಮಾತುಗಳನ್ನಾಡಿದ್ದು ಕೇ ಏನನಿಸಿರಬಹುದು? ಊರಿನಿಂದ ಹೊರಡುವಾಗ ನಾನ "ಕೊಂಡಣ್ಣನಿಗೆ ರವಷ್ಟು ದಿಗಿಲಾಗಿರ್ತದೆ, ಏನಾದ್ರು ಹೇ ಸಮಾಧಾನ ಮಾಡ್ರಪ್ಪ" ಅಂತ ತಮಾಷೆಯಾಗಿ ಹೇ ಬಂದೆ.

● ಪಾರ್ವತೀಶ

ಉತ್ತರ ಕನ್ನಡ: ಎಂಪಿಗಿರಿಗಾಗಿ ಅವಸರ-ಅವಾಂತರ

ಉತ್ತರ ಕನ್ನಡದ ರಾಜಕೀಯ ಸಮರಾಂಗಣ ಮತ್ತೊಂದು ಯುದ್ಧಕ್ಕೆ ಸಿದ್ಧವಾಗುತ್ತಿದೆ! ಅಸೆಂಬ್ಲಿ ಎಲೆಕ್ಷನ್ ಹ್ಯಾಂಗೋವರ್ ಇಳಿವ ಮೊದಲೇ ಪಾರ್ಲಿಮೆಂಟ್ ಮುಂಬರಿಕೆಯ ತುರಿಕೆದಾರರು ಟಿಕೆಟ್ ಗುಂಗೇರಿಸಿಕೊಂಡು ಬಿಟ್ಟಿದ್ದಾರೆ. ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಸಹಜವಾಗೇ ತುರಿಕೆ-ತುರುಸು ಜಾಸ್ತಿ. ಆದರೆ ಹಾಲಿ ಸಂಸದನನ್ನು ಹೊಂದಿರುವ ಬಿಜೆಪಿ ಟಿಕೆಟ್ ಯಾರಿಗೂ ಬೇಡವಾಗಿದೆ. ಪೆದ್ದೆ ಬದುಕ- ಚಿಲ್ಲಿ ಸಂಸದ ಅನಂತ್ಮಾಣಿ ಆದ್ಯಾಕೋ ಒಳಗೊಳಗೇ ವೈರಾಗ್ಯದ ಮಾತನಾಡುತ್ತಿದ್ದಾನೆ. ಒಂದು ಕಾಲದಲ್ಲಿ ಹಿಂದೂ ಜಾಗರಣಾ ವೇದಿಕೆಯ ಹಿಂಸೆಯ ನಾಯಭಾರಿಯಾಗಿ ಹಳ್ಳಳ್ಳಿಯಲ್ಲಿ ಒಂದೊತ್ತಿನ ಬುತ್ತಿಗಾಗಿ ಪಡಪಡಿಸುತ್ತಿದ್ದ ಅನಂತ್ಮಾಣಿ ಈಗ ಮೂರು ಜನ್ಮಕ್ಕೆ ಆಗುವಷ್ಟು ಕಳ್ಳ ಕಾಸು ಕೂಡಿಟ್ಟಿದ್ದಾನೆ. ಆತನಿಗೆ ಮತ್ತೆ ಸಂಸದನಾಗುವುದಕ್ಕಿಂತ ಈ 'ನಿಧಿ' ಕಾಯುವುದೇ ದೊಡ್ಡ ಸಮಸ್ಯೆ' ಆಗಿದೆ.

ಕಾಂಗ್ರೆಸ್‌ನಲ್ಲಿ ಜಾತಿವಾರು ಲೆಕ್ಕಾಚಾರ, ಗಾಡ್‌ಫಾದರ್-ಗಾಡ್‌ಮದರ್ ಬಲದ ಸಾಧ್ಯಾಸಾಧ್ಯತೆಗಳು ತಟ್ಟಾಡುತ್ತಿದೆ. ದೀವರ (ಈಡಿಗ) ಮತ್ತು ಹೈಗರ (ಬ್ರಾಹ್ಮಣ) ಹಿರೇಮಣಿಗಳು ಉತ್ತರ ಕನ್ನಡ ರಾಜಕಾರಣದ ವಾರೀಸುದಾರರು ತಾವೆಂದು ಸಾರಾಡುತ್ತ ಟಿಕೆಟ್ ದಾವೆ ಮಂಡಿಸುತ್ತಿದ್ದಾರೆ. ಮತ್ತೊಂದೆಡೆ ಜಿಲ್ಲಾ ಕಾಂಗ್ರೆಸ್‌ಗೆ ಶನಿಯಂತೆ ಗಂಟುಬಿದ್ದು ಕಾಡುತ್ತಿರುವ ಮಂತ್ರಿ ಆರ್.ವಿ. ದೇಶಪಾಂಡೆ ಮತ್ತು ರಾಜಸ್ಥಾನ ರಾಜ್ಯಪಾಲೆ ಮಾರ್ಗರೆಟ್ ಆಳ್ವ ಎಂಬ ಹಾವು-ಮುಂಗುಸಿ ತಂತಮ್ಮ ವಂಶೋದ್ಧಾರಕರನ್ನೇ ಕಾಂಗ್ರೆಸ್ ಅಭ್ಯರ್ಥಿಯಾಗಿಸಲು ತಂತ್ರಗಾರಿಕೆ ಮಾಡುತ್ತಿದ್ದಾರೆ. ಜಿಲ್ಲಾ ಕಾಂಗ್ರೆಸ್‌ನಲ್ಲಿನ ಗುಂಪುಗಾರಿಕೆಯ ಲಾಭ ಗಿಟ್ಟಿಸಿ ಕ್ಯಾಂಡಿಡೇಟಾಗಲು ರವೀಂದ್ರನಾಥ್ ನಾಯಕ್ ಎಂಬ ನಾಜೂಕಾಗಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹರಿಪ್ರಸಾದ್ ಕಾರ್ಯಾಚರಣೆ ನಡೆಸಿದ್ದಾರೆ.

ಉತ್ತರ ಕನ್ನಡ ಸಂಸದ ಕ್ಷೇತ್ರದಲ್ಲಿ ಒಕ್ಕಲಿಗರು ಮತ್ತು ಮುಸ್ಲಿಮರು ಬಹು ಸಂಖ್ಯಾತರು. ಆದರೆ ರಾಜಕೀಯದ ಹಂಗಿನಾಟ ಆಡುವುದು ಬಲಾಢ್ಯ ದೀವರು ಹಾಗು ಹೈಗರು. ದೀವರಿಗೆ ಕಾಂಗ್ರೆಸ್ ಬಗ್ಗೆ ಅಷ್ಟು ಸಮಾಧಾನವಿಲ್ಲ. ಆದರಲ್ಲೂ ಮ್ಯಾಗಿಯ ಮಸಲತ್ತುಗಳಿಂದ ಈ ಸಮುದಾಯ ರೋಸತ್ತು ಹೋಗಿದೆ. ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಶಿರಸಿ ಕ್ಷೇತ್ರ ಟಿಕೆಟ್ ದೀವರಿಗೆ ತಪ್ಪಿಸಿದ್ದೇ ಮ್ಯಾಗಿ ಎಂಬ ಸಿಟ್ಟು ಆ ಜನಾಂಗದ ಘಟಾನುಘಟಿಗಳಲ್ಲಿ ಮಡುಗಟ್ಟಿದೆ. ಅದಕ್ಕೆ ಕಾರಣವೂ ಇದೆ. ಶಿರಸಿಯಲ್ಲಿ ದೀವರು ಬಹುಸಂಖ್ಯಾತರು. ಈ ಜಾತಿಯ ಕ್ರಿಯಾಶೀಲ ತರುಣರಾದ ಶಿವಿಸಾಯ್ಕ, ವಿ.ಎಸ್. ನಾಯ್ಕ್ ಅಥವಾ ಭೀಮಣ್ಣ ನಾಯ್ಕ್‌ಗೆ ಕಾಂಗ್ರೆಸ್ ಟಿಕೆಟ್ ಕೊಟ್ಟಿದ್ದರೆ ನಿರಾಯಾಸವಾಗಿ ಗೆಲ್ಲುತ್ತಿದ್ದರು.

ಆದರೆ ಮ್ಯಾಗಿ ಹಠ ಹಿಡಿದು ದೀವರಿಗೆ ಟಿಕೆಟ್ ವಂಚಿಸಿದರು. ತನ್ನನ್ನು ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಸೋಲಿಸಿದ್ದೇ ಈ ದೀವರೆಂಬ ದ್ವೇಷ ಮ್ಯಾಗಿಗೆ. ಆದ್ದರಿಂದ ತನ್ನ ಲಗೇಜ್ ಹೊರುವ ದಾಸಾನುದಾಸ ದೀಪಕ್ ಹೊನ್ನಾವರ ಎಂಬ ರೌಡಿ ಶೀಟರ್‌ಗೆ ಅವಕಾಶ ಕೊಡಿಸಿದರು. ಈತ ಅತೀ ಸಣ್ಣ ಜಾತಿ (ಶೇರುಗಾರ)ಯವನು. ಅಷ್ಟೇ ಅಲ್ಲ, ಪುಂಡ-ಪೋಕರಿ ಎಂದು ಗುರುತಿಸಿಕೊಂಡವನು. ಆದರೂ ಕಾಂಗ್ರೆಸ್ ಗಾಳಿಯಲ್ಲಿ ಈತ ದೊಡ್ಡ ಪ್ರಮಾಣದ ಓಟು ಪಡೆದುಕೊಂಡ. ಕಾಗೇರಿ ಎದುರು ಬರೀ ಮೂರೇ ಮೂರು ಸಾವಿರ ಮತದಂತರದಿಂದ ಸೋತ. ಇದರರ್ಥ ಇಷ್ಟೇ; ದೀವರಿಗೆ ಕಾಂಗ್ರೆಸ್ ಟಿಕೆಟ್ ಕೊಟ್ಟಿದ್ದರೆ ಅಥವಾ ದೀವರ ಲೀಡರ್‌ಗಳು ದೀಪಕ್ ಪರ ಕೆಲಸ ಮಾಡಿದ್ದರೆ ಆ ಪಕ್ಷ ನಿರಾಯಾಸವಾಗಿ ಗೆಲ್ಲುತ್ತಿತ್ತು, ಮ್ಯಾಗಿಯ ಮನೆ ಮುರುಕುತನದಿಂದಾಗಿಯೇ ಶಿರಸಿಯಲ್ಲಿ ಕಾಂಗ್ರೆಸ್ ಸಣ್ಣ ಅಂತರದಲ್ಲಿ ಸೋಲಬೇಕಾಯ್ತು.

ಶಿರಸಿ ಕ್ಷೇತ್ರದಲ್ಲಿ ದೀವರಿಗಾದ ಮುಖಭಂಗವನ್ನೇ ಅಸ್ತ್ರವಾಗಿಸಿಕೊಂಡು ದೇಶಪಾಂಡೆ ಈಗ ಆ ಜಾತಿಯವರನ್ನು ಮ್ಯಾಗಿ ವಿರುದ್ಧ ಎತ್ತಿ ಕಟ್ಟುತ್ತಿದ್ದಾರೆ. ದೀವರಿಗೆ ಸಂಸದ ಟಿಕೆಟ್ ಕಾಂಗ್ರೆಸ್ ಕೊಡಬೇಕಾದ್ದು ನ್ಯಾಯೋಚಿತ ಎಂದು ಸಣ್ಣಗೆ ಪಿಸುಗುಡುತ್ತಿದ್ದಾರೆ. ಇದಕ್ಕೆ ಮ್ಯಾಗಿ ಮತ್ತೆ ಅಡ್ಡಗಾಲು ಹಾಕುತ್ತಾರೆಂಬುದು ದೇಶಪಾಂಡೆಗೆ ಖಾತ್ರಿಯಾಗಿ ಗೊತ್ತು. ಮ್ಯಾಗಿ ತನ್ನ ಪೆದ್ದು ಪುತ್ರರತ್ನ ನಿವೇದಿತ್ ಆಳ್ವಗೆ ಈ ಸಲ ಉತ್ತರ ಕನ್ನಡದಿಂದ ಪಾರ್ಲಿಮೆಂಟ್‌ಗೆ ಸ್ಪರ್ಧಿಸುವ ಅವಕಾಶ ಕಾಂಗ್ರೆಸ್‌ನಿಂದ ಕೊಡಿಸಲು ತುಂಬ ಹಿಂದಿಂದಲೇ ಪ್ರಯತ್ನ ಆರಂಭಿಸಿದ್ದಾರೆ. ಉತ್ತರ ಕನ್ನಡ ಉದ್ದಗಲ, ಸ್ಥಳೀಯರ ಸಂತೋಷ-ಸಂಕಟ ಒಂದೂ ಅರ್ಥವಾಗದ ಹೈ-ಫೈ ಪೋರ ನಿವೇದಿತ್. ಈತ ಅಪ್ಪ ಜೋಕಿಂ ಆಳ್ವ, ತಾಯಿ ಮ್ಯಾಗಿಯಂತೆ ಎಂಪಿ ಆಗುವ ಆತುರದಿಂದ ಉ.ಕನ್ನಡಕ್ಕೆ ವಲಸೆ ಬಂದಿದ್ದಾನಷ್ಟೇ!

ಮ್ಯಾಗಿ ತಾನು ಉತ್ತರ ಕನ್ನಡ ಸೊಸೆ ಎನ್ನುತ್ತ ಜಿಲ್ಲೆಗೆ ವಕ್ಕರಿಸಿ ಇಲ್ಲಿಯ ರಾಜಕಾರಣ ಕುಲಗೆಡಿಸಿದ್ದರು. ಅನಂತ್ಮಾಣಿ ಎಂಬ ಬಿಜೆಪಿಯ ಬೆಂಕಿ ನವಾಬ ಮತ್ತೆ-ಮತ್ತೆ ಪಾರ್ಲಿಮೆಂಟ್‌ಗೆ ಆಯ್ಕೆಯಾಗಲು ಮ್ಯಾಗಿಯ ದರಿದ್ರ ರಾಜಕಾರಣದ ಕೊಡುಗೆ ಅಪಾರ. ದಿಲ್ಲಿ ಕಾಂಗ್ರೆಸ್ ದರ್ಬಾರಿನಲ್ಲಿರುವ ಪ್ರಭಾವ ಬಳಸಿ ಹಿಂಬಾಗಿಲ ರಾಜಕಾರಣ ಮಾಡುವ ಮ್ಯಾಗಿಗೆ ಜಿಲ್ಲೆಯೊಂದಿಗೆ ಸ್ಪಂದಿಸುವ ಮನಸ್ಥಿತಿಯೇ ಇಲ್ಲ, ಈಗ ಮಗನನ್ನು ಉತ್ತರ ಕನ್ನಡಕ್ಕೆ ಕಳಿಸಿರುವ ಈಕೆ ಆತನಿಗೊಂದು ಮನೆ ಶಿರಸಿಯಲ್ಲಿ ಕೊಡಿಸಿದ್ದಾರೆ. ತನ್ನ ಅನಾಹುತಕಾರಿ ಚೇಲ ದೀಪಕ್ ಹೊನ್ನಾವರನಿಂದ ಹಳೆಯ ಶಿವಾನಿ ಹೊಟೇಲ್‌ನ ಕಾಟೇಜ್ ಅನ್ನು ಲೀಸ್ ಮೇಲೆ ನಿವೇದಿತ್ ಪಡೆದುಕೊಂಡು 'ಹಂಗಾಮಿ' ರಾಜಕಾರಣಿ ಶುರು ಹಚ್ಚಿಕೊಂಡಿದ್ದಾನೆ.

ಮ್ಯಾಗಿಯ ಮಗ ಮಮತೆಗೆ ಸಮಾನಾಂತರವಾಗಿ ದೇಶಪಾಂಡೆಯ ಪುತ್ರ ವ್ಯಾಮೋಹದ 'ಪಾಲಿಟಿಕ್ಸ್' ರಹಸ್ಯವಾಗಿ ನಡೆಯುತ್ತಿದೆ. ದೀವರಿಗೆ ಪಾರ್ಲಿಮೆಂಟ್ ಟಿಕೆಟ್ ಕೊಡಬೇಕೆನ್ನುತ್ತಲೇ ಈ ಬೆಳ್ಳಿ ಕೂದಲ ಕರಾಮತ್ತುಗಾರ ತನ್ನ ಮಗ ಪ್ರಶಾಂತ್ ದೇಶಪಾಂಡೆಯನ್ನು ಅಭ್ಯರ್ಥಿ ಮಾಡಲು ಅಷ್ಟು ಅಸ್ತ್ರ ಪ್ರಯೋಗಿಸುತ್ತಿದ್ದಾರೆ. ಕಳೆದ ಬಾರಿಯೇ ಪ್ರಶಾಂತನನ್ನು ಕಾಂಗ್ರೆಸ್‌ನ ಪಾರ್ಲಿಮೆಂಟ್ ಹುರಿಯಾಳಾಗಿಸಲು ಶತಪ್ರಯತ್ನ ದೇಶಪಾಂಡೆಜೀ ನಡೆಸಿ ವಿಫಲರಾಗಿದ್ದರು. ಸಾಕ್ಷಾತ್ ರಾಹುಲ್ ಗಾಂಧಿಯೇ ತನ್ನನ್ನು ಎತ್ತಿ ಆಡಿಸಿದ ಮ್ಯಾಗಿ ಅಜ್ಜಿಗೆ ಕೊನೆಯ ಅವಕಾಶ ಕೊಡಲು ನಿರ್ಧರಿಸಿದ್ದರಿಂದ ದೇಶಪಾಂಡೆ ಮತ್ತವರ ಬೀಗ ಎನ್‌ಸಿಪಿ ಮಂತ್ರಿ ಪ್ರಫುಲ್ ಪಟೇಲರ ಒತ್ತಡ ವರ್ಕ್‌ಔಟ್ ಆಗಿರಲಿಲ್ಲ. ಈ ಸಲ ಪ್ರಫುಲ್ ಪಟೇಲ್ ಅಳಿಯ ಪ್ರಶಾಂತ್ ದೇಶಪಾಂಡೆಗೆ ಟಿಕೆಟ್ ಕೊಡಿಸಲು ವ್ಯವಸ್ಥಿತ 'ಆಟ' ಕಾಂಗ್ರೆಸ್ ಪಡಸಾಲೆಯಲ್ಲಿ ಮುಂಚಿತವಾಗಿ ಪ್ರಾರಂಭಿಸಿದ್ದಾರೆ.

ಉ. ಕನ್ನಡ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಶಾಸಕರಲ್ಲಿ ಕಾರವಾರದ ಸೈಲ್ (ಪಕ್ಷೇತರ), ಭಟ್ಕಳದ ಮಂಕಾಳು ವೈದ್ಯ (ಪಕ್ಷೇತರ), ಕಿತ್ತೂರಿನ ಬಿ.ಡಿ.ಇನಾಮ್‌ದಾರ್ ಮತ್ತು ಸ್ವತಃ ದೇಶಪಾಂಡೆ (ಹಳಿಯಾಳ) ಪ್ರಶಾಂತ ದೇಶಪಾಂಡೆ ಪರವಿದ್ದರೆ, ಯಲ್ಲಾಪುರದ ಹೆಬ್ಬಾರ್, ಕುಮಟಾದ ಶಾರದಾ ಶೆಟ್ಟಿ ನಿವೇದಿತ್ ಆಳ್ವನನ್ನು ಬೆಂಬಲಿಸುತ್ತಿದ್ದಾರೆ. ಶಿರಸಿ ಮತ್ತು ಖಾನಾಪುರದಲ್ಲಿ ಕಾಂಗ್ರೆಸ್ ಶಾಸಕರಿಲ್ಲ, ಈ ಟಿಕೆಟ್ ಟ್ಯಾಕ್ಟೀಸ್ ನೋಡಿದರೆ ಇಬ್ಬರ ಜಗಳದಲ್ಲಿ ಮೂರನೆಯವನಿಗೆ ಲಾಭ ಆಗುವ ಸಾಧ್ಯತೆ ಈಗಲೇ ಕಾಣಿಸುತ್ತದೆ. ಮ್ಯಾಗಿಯ ಮಾಜಿ ಶಿಷ್ಯ ರವಿ ನಾಯ್ಕ್ ಎಂಬ 'ಹಾರಾಟದ ಹುಡುಗ' ಎಐಸಿಸಿಯಲ್ಲಿರುವ ಹರಿಪ್ರಸಾದ್‌ರಂಥ ಸ್ವ-ಜಾತಿ ಬಾಂಧವರ ಮೂಲಕ ಮೀಸೆ ತೂರಿಸುವ ಪ್ರಯತ್ನದಲ್ಲಿದ್ದಾರೆ. ಸ್ಥಳೀಯ ಟಿಕೆಟ್ ಆಕಾಂಕ್ಷಿಗಳಲ್ಲಿ ಈ ರವಿ ನಾಯ್ಕನೇ ಬೆಟರ್ ಕ್ಯಾಂಡಿಡೇಟ್ ಆಗಬಲ್ಲ, ಆದರೆ ಆತ ಹೋರಾಟಗಳನ್ನು ರೂಪಿಸಿದಷ್ಟೇ ಬಾಲಿಶನಾಗಿ ಫೋಟೋಕ್ಕೆ ಪೋಸು ಕೊಡುವ ತೆವಲು ಬಿಡಬೇಕಷ್ಟೇ.

ರವಿಗೆ ಅಷ್ಟು ಸುಲಭದಲ್ಲಿ ಟಿಕೆಟ್ ಪಡೆಯಲು ದೇಶಪಾಂಡೆ ಬಿಡಲಾರರು. ಜನ ಬಳಕೆಯ-ಕ್ರಿಯಾಶೀಲ ತರುಣರು ತನಗೆ ಸಮಾನಾಂತರವಾಗಿ ಬೆಳೆಯುವುದು ದೇಶಪಾಂಡೆ ಎಂದೆಂದೂ ಸಹಿಸುವುದಿಲ್ಲ, ಆತ ಯಾವ ಪಕ್ಷದಲ್ಲೇ ಇರಲಿ; ಅಲ್ಲೆಲ್ಲ ಎರಡನೇ ಸಾಲಿನ ಮುಂದಾಳುಗಳನ್ನು ಹೊಸಕಿ ಹಾಕಿದ್ದೇ ಹೆಚ್ಚು, ದೇಶಪಾಂಡೆ ಮತ್ತು ಮ್ಯಾಗಿಯ 'ವಂಶೋದ್ಧಾರ'ದ ಚಟುವಟಿಕೆ ಸೂಕ್ಷ್ಮವಾಗಿ ಗಮನಿಸುತ್ತಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಬಿ.ಕೆ. ಹರಿಪ್ರಸಾದ್ ತಾನೇ ಏಕೆ ಉತ್ತರ ಕನ್ನಡದಿಂದ ಲೋಕಸಭೆಗೆ ಕಾಂಗ್ರೆಸ್‌ನಿಂದ ಸ್ಪರ್ಧಿಸಬಾರದು? ಆ ಕ್ಷೇತ್ರ ಹದಗೊಳಿಸಿಕೊಳ್ಳಲು ಸಾಧ್ಯವಾ? ಸ್ವಜಾತಿ ಈಡಿಗರು ಮತ್ತು ಇತರ ಹಿಂದುಳಿದವರು ತನ್ನನ್ನು ನಂಬಿ ಸ್ವಾಗತಿಸಬಹುದಾ? ಮ್ಯಾಗಿ-ದೇಶಪಾಂಡೆಗಳನ್ನ ಹೇಗೆ ಒಲಿಸಿ ಕೊಳ್ಳಬಹುದು?

ಎಂಬಿತ್ಯಾದಿ ಸಾಧ್ಯತೆ- ಸೌಕರ್ಯಗಳ ತಲಾಶ್‌ಗೆ ಇಳಿದಿದ್ದಾರೆ.


ಈ ಮಧ್ಯೆ ಅಂಕೋಲೆಯ ಮಾಜಿ ಶಾಸಕ- ಬೆಂಗಳೂರು ನಿವಾಸಿ- ವೈಭೋಗದ ಜೀವನಶೈಲಿಯ ಪರಮ ಆಲಸಿ ಉಮೇಶ್ ಭಟ್ಟ ಎಂಬ ಹೈಗರ 'ಹಿರಿಯ' ತಾನೂ ಕಾಂಗ್ರೆಸ್‌ನ ಎಂಪಿಗಿರಿ ಟಿಕೆಟ್ ಕ್ಷೇಮುದಾರ ಎನ್ನುತ್ತಿದ್ದಾರೆ. ಟಿಕೆಟ್ ಮೇಲಾಟದಲ್ಲಿ ತನಗೇನಾದರೂ ಛಾನ್ಸ್ ಸಿಗಬಹುದಾ ಎಂದು ಡಿಸಿಸಿ ಅಧ್ಯಕ್ಷ ಭೀಮಣ್ಣ ನಾಯ್ಕ್ ಆಸೆಗಣ್ಣು ಆಚೀಚೆ ತೇಲಿಸುತ್ತಿದ್ದಾರೆ. 'ನಿಂಗೆ ಎಮ್ಮೆಲ್ಸಿ ಮಾಡಿಸ್ತೇನಿ... ನನ್ನ ಮಗನಿಗೆ ಸಪೋರ್ಟ್ ಮಾಡು ಮಾರಾಯಾ' ಎಂದು ಭೀಮಣ್ಣನನ್ನು ರಮಿಸುತ್ತಿದ್ದಾರೆ ದೇಶಪಾಂಡೆ.


ಇದು ಕಾಂಗ್ರೆಸ್ ಕಥೆಯಾದರೆ, ಎದುರಾಳಿ ಬಿಜೆಪಿಯಲ್ಲಿ ಗೊಂದಲವೋ ಗೊಂದಲ. ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಬಿದ್ದ ಭರ್ಜರಿ ಹೊಡೆತದಿಂದ ಆ ಪಕ್ಷದ ಅತಿರಥ ಮಹಾರಥರು ಪಾರ್ಲಿಮೆಂಟ್ ಎಲೆಕ್ಷನ್ ಹೊತ್ತಿಗೂ ಚೇತರಿಸಿಕೊಳ್ಳುವಂತೆ ಕಾಣಿಸುತ್ತಿಲ್ಲ, ಒಬ್ಬರ ಕಂಡರೆ ಮತ್ತೊಬ್ಬನಿಗಾಗದ ಬಿಜೆಪಿ ಹರಿದು ಹಂಚಿಹೋಗಿದೆ. ಅನಂತ್ಮಾಣಿಗೆ ಮತ್ತೆ ತಾನು ಬಣ್ಣಗೆಟ್ಟ ಬಿಜೆಪಿಯಿಂದ ಗೆಲ್ಲುತ್ತೇನೆಂಬ ಧೈರ್ಯವಿಲ್ಲ, ಕಳೆದ ಬಾರಿಯೇ ಕೂದಲೆಳೆ ಅಂತರದಿಂದ ಗೆದ್ದಿದ್ದ ಈ ಮಾಣಿ. ಅದೂ ಕಾಂಗ್ರೆಸ್‌ನ ದೇಶಪಾಂಡೆ, ಈಗಿನ ಕೆಜೆಪಿ ಕಿಂಗ್ ಯಡ್ಡಿ ಜಾತಿಯ ಲಿಂಗಾಯತ ಮತದಿಂದ ಮಾಣಿ ದಿಲ್ಲಿ ಟ್ರೇನ್ ಏರಿದ್ದ, ವೈಯಕ್ತಿಕ ಪ್ರಭಾವವೆಂಬುದು ಏನೇನೂ ಇಲ್ಲದ ನಾಲಾಯಕ್ ಅನಂತ ಮಾಣಿ ಸಂಸದನಾಗಿ ಸಂಪೂರ್ಣ ವಿಫಲ. ಜನರ ಕೈಗೆ ಸಿಗದೆ ಸ್ವದೇಶೋದ್ಧಾರದಲ್ಲಿ ಸದಾ ಬಿಜಿಯಾಗಿರುವ ಅನಂತನ ಮುಸುಡಿ ಕಂಡರೆ ಜಿಲ್ಲೆಯ ಜನ ಲಟಿಕೆ ಮುರಿದು ಶಾಪ ಹಾಕುತ್ತಿದ್ದಾರೆ.


ಅನಂತ್ಮಾಣಿಗೆ ತನ್ನ 'ಯೋಗ್ಯತೆ' ಅರ್ಥವಾಗೇ ಇರಬೇಕು. ಆತ ಆಖಾಡದಿಂದ ತಣ್ಣಗೆ ಪಲಾಯನ ಮಾಡುತ್ತಿದ್ದಾನೆ. ತಾನು ಪಾರ್ಲಿಮೆಂಟಿಗೆ ಸ್ಪರ್ಧಿಸಿದರೆ ಸ್ವ-ಪಕ್ಷ (ಬಿಜೆಪಿ)ದ ಕಾಗೇರಿ, ವಿ.ಎಸ್. ಪಾಟೀಲ್ ಮತ್ತು ಅಸಲೀ ಚೆಡ್ಡಿ-ಕೇಸರಿ ಪಡೆ ಹಠಕ್ಕೆ ಬಿದ್ದು ಸೋಲಿಸುತ್ತಾರೆಂಬುದೂ ಆತನಿಗೆ ಖಾತ್ರಿಯಾಗಿದೆ. ಏಕೆಂದರೆ ಕಾಗೇರಿ-ಪಾಟೀಲ್ ಮತ್ತಿತರ ಬಿಜೆಪಿ ಅಭ್ಯರ್ಥಿಗಳ ವಿರುದ್ಧ ಮಾಣಿ ವಿಧಾನಸಭಾ ಎಲೆಕ್ಷನ್ ಹೊತ್ತಲ್ಲಿ ಕಿತಾಪತಿ ಮಾಡಿದ್ದ, ಅತ್ತ ಜೆಡಿಎಸ್‌ನಲ್ಲಿ ಬಹುಸಂಖ್ಯಾತ ಒಕ್ಕಲಿಗ ಅಥವಾ ನಾಮಧಾರಿ (ಈಡಿಗ) ಕ್ಯಾಂಡಿಡೇಟ್‌ಗಾಗಿ ಹುಡುಕಾಟ ನಡೆದಿದೆ.

ಒಟ್ಟಿನಲ್ಲಿ ಪಾರ್ಲಿಮೆಂಟ್ ಟಿಕೆಟ್ ತಂತ್ರಗಾರಿಕೆ ದಿನಕ್ಕೊಂದು ಕುತೂಹಲಕರ ಆಯಾಮ ಪಡೆಯುತ್ತಿದೆ. ಮ್ಯಾಗಿ ಮಗ ನಿವೇದಿತ್ ಮತ್ತು ದೇಶಪಾಂಡೆ ಮಗ ಪ್ರಶಾಂತ್ ತಂತಮ್ಮ ಹೆತ್ತವರ ಒಣ ಪ್ರತಿಷ್ಠೆಯ ರಾಜಕಾರಣ-ರಗಳೆಗಳ 'ಸಂಕೇತ' ಆಗುತ್ತಿದ್ದಾರೆ, ಪಾಪ!!

● ನಹುಷ


ಆರ್.ವಿ. ದೇಶಪಾಂಡೆ


ರವೀಂದ್ರನಾಥ್ ನಾಯಕ್


ಬಿ.ಕೆ. ಹರಿಪ್ರಸಾದ್


ಮಾರ್ಗರೇಟ್ ಆಳ್ವ


ಭೀಮಣ್ಣ ನಾಯ್ಕ್


ಪ್ರಶಾಂತ್ ದೇಶಪಾಂಡೆ


ನಿವೇದಿತ್ ಆಳ್ವ

ಮೀನು ಮಂತ್ರಿ ಅಭಯರ ಅಧಿಕ ಪ್ರಸಂಗ!

ಅಲ್ಪನಿಗೆ ಐಶ್ವರ್ಯ ಬಂದರೆ ಏನಾಗುತ್ತದೆ? ಮೀನುಗಾರಿಕಾ ಮಂತ್ರಿ ಅಭಯಚಂದ್ರ ಜೈನ್‌ಗೆ ಆದಂತೆ ಅಧಿಕಪ್ರಸಂಗ-ಅಹಂಕಾರ ಅಡರಿಕೊಳ್ಳುತ್ತದೆ, ಅಷ್ಟೇ! ಜೈನ ಪಾಳೇಗಾರಿಕೆಯ ಪಳಿಯುಳಿಕೆಯಂತಿರುವ ಅಭಯ ಮಂತ್ರಿ ಪದದ ಹೊಸದರಲ್ಲೇ 'ಎಡವಟ್ಟು' ಮಾಡಿಕೊಂಡಿದ್ದಾರೆ.


"ನಾನು ಜೈನ್ ಧರ್ಮದವನು... ಮೀನುಗಾರಿಕೆ ಖಾತೆ ನನಗೆ ತರವಲ್ಲ, ಜೈನ ಮುನಿ-ಸಂತರೂ ನಾನು ಈ ಖಾತೆ ಪಡೆದಿರುವುದು ಸರಿಯಲ್ಲ ಎಂದಿದ್ದಾರೆ. ಸಿಎಂ ಬಳಿ ದೂರು ಕೊಟ್ಟರೆ, ಅವರು 'ನೀನು ಕರಾವಳಿಯವನು. ಖಾತೆಯಲ್ಲಿ ಒಳ್ಳೆಯ ಕೆಲಸ ಮಾಡು. ಬದಲಾವಣೆ ಸಾಧ್ಯವಿಲ್ಲ' ಎಂದರು..." ಎಂದೆಲ್ಲ ಅಭಯ ಹಲುಬಿದ್ದಾರೆ. ಮೀನುಗಾರಿಕಾ ಮಂತ್ರಿಯೆಂದರೆ ಮೀನು ತಿನ್ನೋದಾ... ಮೀನು ಬೇಟೆ ಆಡುವುದಾ...? ಎಂದರೆ ಉತ್ತರ ಅಭಯರಲ್ಲಿ ಇಲ್ಲ.

ಹಾವು ಪರಮ ಅಹಿಂಸಾವಾದಿಯಂತೆ, ಜೈನ ಮುನಿಶ್ರೇಷ್ಠರ ಆಜ್ಞಾನುಧಾರಿಯಂತೆ ನಟಿಸುತ್ತಿರುವ ಅಭಯ ಅವರ ಜೀವನಶೈಲಿ, ರಾಜಕೀಯ ಟ್ರ್ಯಾಕ್ ರೆಕಾರ್ಡ್ ಪ್ರಶ್ನಾರ್ಹವಾಗಿದೆ. ತನ್ನನ್ನು ಶಾಸಕನಾಗಿ ಮಾಡಿದ್ದು ಮೀನು ತಿನ್ನುವ, ಮೀನು ಹಿಡಿಯುವ ಬಹುಸಂಖ್ಯಾತರೆಂಬ ಅರಿವೂ ಇಲ್ಲದಂತೆ ಅಭಯ ಮಾತನಾಡಿದ್ದಾರೆ. ವಾಸ್ತವವಾಗಿ ಮೂಡಬಿದರೆ-ಮುಲ್ಕಿ ಅಸೆಂಬ್ಲಿ ಕ್ಷೇತ್ರದಲ್ಲಿ ಅಭಯ ಜಾತಿಯ ಮತವಿರುವುದು 2-3 ಸಾವಿರವಷ್ಟೇ. ಅದನ್ನು ಆಧರಿಸಿಯೇ ಅವರು ಸತತ ನಾಲ್ಕು ಸಾರಿ ಗೆದ್ದುಬಂದಿಲ್ಲ ಎಂಬುದು ಸ್ಪಷ್ಟ. ಆದ್ದರಿಂದ "ಅವರು 'ಫಿಶ್‌ಟೇರಿಯನ್'ಗಳಿಂದ ಸಿಕ್ಕಿರುವ ಶಾಸಕಗಿರಿಗೆ ರಾಜೀನಾಮೆ ಬಿಸಾಕಿ ಜೈನಧರ್ಮ ಪ್ರಸಾರಕನಾಗಲು ರೆಡಿಯಿದ್ದಾರಾ?" ಎಂಬ ಚರ್ಚೆ ಈಗ ಕರಾವಳಿಯಲ್ಲಿ ನಡೆಯುತ್ತಿದೆ.

ಇಡೀ ದಕ್ಷಿಣ ಕರಾವಳಿಯಲ್ಲಿ ಒಮ್ಮೆಯೂ ಧರ್ಮಾಂಧ ಬಿಜೆಪಿ ಗೆಲ್ಲದ ಕ್ಷೇತ್ರವೆಂದರೆ ಮೂಡಬಿದರೆ. ಇಲ್ಲಿ ಅತೀ ಸಣ್ಣ ಜಾತಿಯ ಅಭಯರನ್ನು ಜನ ಸತತ ನಾಲ್ಕನೇ ಬಾರಿ ಗೆಲ್ಲಿಸಿದ್ದಾರೆ. ಬಹುಸಂಖ್ಯಾತ ಬಿಲ್ಲವರೂ ತಮ್ಮ ಜಾತಿಯವ ನಿಂತರೂ 'ಜಾತೀಯತೆ' ಮಾಡದೆ ಅಲ್ಪಸಂಖ್ಯಾತ ಅಭಯ ರನ್ನು ಗೆಲ್ಲಿಸಿದ್ದಾರೆ. ಅಂದರೆ, ಮೂಡಬಿದರೆಯ ಜನ ಜಾತ್ಯತೀತರು-ಧರ್ಮಾತೀತರು. ಆದರೆ ಅವರ ಬೆಂಬಲದಿಂದ ಗೆದ್ದಿರುವ ಅಭಯರಿಗೆ ಈಗ ಕ್ಷೇತ್ರದ ಜನರಿಗಿಂತ ತಮ್ಮ ಧರ್ಮದ ಜೈನ ಲಾಬಿ ಬಗ್ಗೆ ಭಯ-ಭಕ್ತಿ ಜಾಸ್ತಿ

ಅದಿರಲಿ, ಅಭಯ ಅವರು ಈ ಹಿಂದೆ ಜೈನ ಧರ್ಮದ ಮೂಲಭೂತ ಧ್ಯೇಯೋದ್ದೇಶಗಳನ್ನು ಚಾಚೂತಪ್ಪದೆ ಅನುಸರಿಸಿದ್ದು ವಿರಳ. ಜೈನ ಧರ್ಮೀಯರಿಗೆ ಭೂಷಣವಲ್ಲದ ಹಿಂಸಾತ್ಮಕ ಜೋಡು ಕೆರೆ ಕಂಬಳವನ್ನು ಈತ ಪ್ರತಿ ವರ್ಷ ತನ್ನ ರಾಜಕಾರಣದ ಉದ್ದೀಪನಕ್ಕಾಗಿ ನಡೆಸುತ್ತ ಬಂದಿದ್ದಾರೆ. ಕೋಣಗಳಿಗೆ ಹೊಡೆದು ಬಡಿದು ಸ್ಪರ್ಧೆ ನಡೆಸುವ ಈ ಹಿಂಸಾತ್ಮಕ ಕಂಬಳ ತಪ್ಪು ಎಂದು ಎಂದಾದರೂ ಅವರಿಗೆ ಜೈನಮುನಿಗಳು ಹೇಳಿದ್ದಾರಾ? ಮೀನುಗಾರಿಕಾ ಖಾತೆ ಬಿಡು ಎಂದು ಸಲಹೆ ಕೊಟ್ಟಿರುವವರಿಗೆ ಅಭಯ ಬರ್ಬರ ಕೋಣ ಕಂಬಳವನ್ನು ಸಂಭ್ರಮದಿಂದ ನಡೆಸುವುದು ಕಾಣಿಸಲಿಲ್ಲವಾ?

ಇನ್ನು ಮುಂದಾದರೂ ಅಭಯ ತಮ್ಮ ತವರು ಜಿಲ್ಲೆಯ ಮೀನುಗಾರರ ಸಮಸ್ಯೆಗಳಿಗೆ ಸ್ಪಂದಿಸಿ ಒಂದೆರಡಾದರೂ ಪರಿಹರಿಸಿದರೆ ಸಾಕು!! ಸಮುದ್ರ ಕೊರೆತ, ಅಳಿವೆ ಹೂಳು ಸಮಸ್ಯೆ, ಮತ್ಸ್ಯಾಶ್ರಯ ಮನೆ ಯೋಜನೆ, ಡೀಸೆಲ್-ಕೆರೋಸಿನ್ ಸಬ್ಸಿಡಿ ಸಮಸ್ಯೆ, ಶೈತ್ಯಾಗಾರದ ಅಗತ್ಯ, ಸಾಲ ಬಾಧೆ, ಮಧ್ಯವರ್ತಿಗಳ ಶೋಷಣೆ... ಹೀಗೆ ಹಲವು ಸಂಕಷ್ಟದಲ್ಲಿರುವ ಮೀನುಗಾರರಿಗೆ ಅಭಯ ನೀಡಿದರೆ



ಮಂತ್ರಿ ಜೈನ 'ದೋಷ ಮುಕ್ತ'ರಾಗಬಹುದು.

ಇನ್ನಾದರೂ ಅಭಯ ರಾಜಕೀಯದ ಇತಿಮಿತಿಗಳನ್ನು ಅರಿತು ಮಾತಾಡಲಿ; ಕರಾವಳಿಗರ ಮಾನ ಕಳೆಯದಿರಲಿ. ಬೇರೆ ಏನಿಲ್ಲದಿದ್ದರೂ ಅಭಯರಿಗೆ ಜೈನಮುನಿಗಳು ಮೌನ ಕಲಿಸಲಿ!

● ಸುಯೋಧನ

ಆಗಿಯಿದೆ ಎಡವಿದರೆ ಅದು ಕ್ಷಮಾರ್ಹ. ಗೊತ್ತಿದ್ದೂ ಹಾಳು ಬಾವಿಗೆ ಬಿದ್ದರೆ ಅದು ಸ್ವಯಂಕೃತಾಪರಾಧ. ನಟಿ ಶೃತಿ ಮಾಡಿಕೊಂಡ ಘಜೀತಿಯನ್ನು ಈ ಪೈಕಿ ಯಾವ ಲೆಕ್ಕಕ್ಕೆ ಸೇರಿಸುವುದು?

ಚಂದ್ರಚೂಡನೆಂಬ ಲಫಂಗನ ಜೊತೆ ಕದ್ದೂ ಮುಚ್ಚಿ ಮದುವೆಯಾಗಲು ಹೋಗಿ ಹೊಸನಗರದ ಬಾಣಿಗ ಎಂಬ ಗ್ರಾಮದ ಜನರಿಂದ ಅಟ್ಟಾಡಿಸಿಕೊಂಡು ಅವಮಾನಕ್ಕೀಡಾಗುವಂತ ದುರ್ಗತಿಯಂತೂ ಖಂಡಿತ ಆಕೆಗಿರಲಿಲ್ಲ. ಮಿನುಗುತಾರೆ ಕಲ್ಪನಾರ ನಂತರ ಕನ್ನಡ ಚಿತ್ರರಂಗ ಕಂಡ ಓರ್ವ ಪ್ರತಿಭಾವಂತ ನಟೀಮಣಿಯ ಬದುಕು ಕೂಡ ಕಲ್ಪನಾ ಬದುಕಿನ ದುರಂತವನ್ನೇ ಸಮೀಪಿಸುತ್ತಿರುವುದಕ್ಕೆ ಇದು ಮುನ್ಸೂಚನೆಯೇ?

ಇಂಥದೊಂದು ಅನುಮಾನ ಹುಟ್ಟಿಕೊಳ್ಳಲು ಇರುವ ಅತೀ ದೊಡ್ಡ ಕಾರಣವೇ ಚಂದ್ರಚಾರಿ ಅಲಿಯಾಸ್ ಚಂದ್ರಶೇಖರ್ ಉರ್ಫ್ ಚಂದ್ರಚೂಡ್ ಯಾನೇ ಚಕ್ರವರ್ತಿ

ಗೋಡೆಗೆ ಚಚ್ಚಿ ಪೀಸ್‌ಪೀಸ್ ಮಾಡಿದ್ದಾನೆ. ಡೈನಿಂಗ್ ಟೇಬಲ್ಲಿನ ಕುರ್ಚಿ ಎತ್ಕೊಂಡಿದ್ದೇ ಟೀವಿಗೆ ಹೊಡೆದು ಅದನ್ನೂ ಚಿಂದಿ ಮಾಡಿದ್ದಾನೆ... ಏನಣ್ಣಾ ಕರ್ಮ ನಂದು...?' ಎಂದು ಕಣ್ಣೀರಿಟ್ಟ ಬಗ್ಗೆ ಸಿನಿಮಾ ಪತ್ರಕರ್ತರ ವಲಯದಲ್ಲಿ ಗುಸುಪಿಸು ಹೊಗೆಯಾಡಿತ್ತು.

ಸೆಕ್ಸ್ ಸಿಡಿ ಬ್ಲಾಕ್‌ಮೇಲ್?

ಇದಕ್ಕೂ ವರ್ಷದ ಹಿಂದೆಯೇ ಮತ್ತೊಬ್ಬ ಸಿನಿಮಾ ಪತ್ರಕರ್ತರಿಗೆ ಶೃತಿ ಫೋನಾಯಿಸಿ ಚಂದ್ರಚೂಡ್ ರೌಡಿಗಳನ್ನು ಬಿಟ್ಟು ತನ್ನ ಮನೆಗೆ ಕಲ್ಲು ಹೊಡೆಸುತ್ತಿದ್ದಾನೆಂದೂ, ರೌಡಿಗಳ ಮೂಲಕ ಬೆದರಿಕೆ ಹಾಕುತ್ತಿದ್ದಾನೆಂದೂ ಅತ್ತೂ ಕರೆದಿದ್ದರು. ತೀರ ಇತ್ತೀಚೆಗೆ ಅಂದರೆ ಇಲ್ಲಿಗೆ



ಸಂಬಂಧವೇ ಎಕ್ಕುಟ್ಟಿದೆಯೆಂದೂ ಅಲ್ಲಲ್ಲಿ ಕೇಳಿ ಬರುತ್ತಿದ್ದದ್ದೂ ಸರ್ವೇಸಾಧಾರಣವಾಗಿತ್ತು.

ಇಂಥ ವದಂತಿ, ಸಾಧ್ಯತೆಗಳೆಲ್ಲವನ್ನೂ ತಲೆಕೆಳಕಾಗಿಸುವಂತೆ ಈಗ ಶೃತಿ-ಚಂದ್ರಚೂಡ್ ಮದುವೆ ನಡೆದಿದೆ. ಅದೂ ಆತುರಾತುರದ, ಅಯೋಜಿತ, ಅಪವೇಳೆಯ, ಅಪಸವ್ಯದ ಮದುವೆ. ಈ ಬಗ್ಗೆ ಟೀವಿ ಚಾನಲ್‌ಗಳಿಗೆ ತನ್ನ ಮೊಬೈಲ್ ಫೋನ್ ಸಂದರ್ಶನವನ್ನೂ ಕೊಟ್ಟ ಶೃತಿಯ ಮಾತುಗಳೇ ಇದೊಂದು ಒಲ್ಲದ, ಯಾವುದೋ ಒತ್ತಡದ, ಅರೆಮನಸ್ಸಿನ ಮದುವೆ ಎಂಬುದನ್ನು ಸ್ಪಷ್ಟ ಪಡಿಸುತ್ತವೆ.

ಅರೆ ಮನಸ್ಸಿನಿಂದ....?

ಶೃತಿಯೇ ಹೇಳಿಕೊಂಡಂತೆ ಹಿಂಧಿನ ರಾತ್ರಿಯಷ್ಟೇ ಆಕೆ ತಮಿಳುನಾಡಿನ ಚೆನ್ನೈನಿಂದ ಇದ್ದ ಶೂಟಿಂಗನ್ನೂ ಮುಂದೂಡಿ ಶಿವಮೊಗ್ಗದ ಹೊಸನಗರಕ್ಕೆ ತನ್ನ ಮದುವೆಗೆಂದು ಧಾವಿಸಿದ್ದಂತೆ. ಮಾರನೇ ದಿನ ಅಂದರೆ ಜೂನ್ 6 ಮಗಳು ಗೌರಿಯ ಹುಟ್ಟು ಹಬ್ಬವಿದ್ದುದರಿಂದ ಅವತ್ತೇ ಮದುವೆಯ ಮುಹೂರ್ತವೂ ಕೂಡಿಬಂತಂತೆ. "ಮಗಳು ಗೌರಿಗೆ ಚಂದ್ರಚೂಡ್ ಒಳ್ಳೇ ಫ್ರೆಂಡ್ ಥರ, ತನ್ನ ಮದುವೆಗಿಂತಲೂ ಮಗಳ ಬರ್ತ್‌ಡೇಯೇ ತನಗೆ ಇಂಪಾರ್ಟೆಂಟು ಆದರೂ ಜ್ಯೋತಿಷಿಯೊಬ್ಬ ಏಕಾಏಕಿ ಫೋನ್ ಮಾಡಿ ಅವತ್ತೇ ಮದುವೆಗೆ ಮುಹೂರ್ತ ನಿಗದಿ ಮಾಡಿದ್ದರಿಂದ ಮಗಳ ಬರ್ತಡೇ ದಿನವೇ ಅನಿವಾರ್ಯವಾಗಿ ಮದುವೆ ಮಾಡಿಕೊಳ್ಳಬೇಕಾಯ್ತು, ಮದುವೆಗೆ ಮನೆಯವರ ಒಪ್ಪಿಗೆ ಇರಲಿಲ್ಲ, ಅವರೆಲ್ಲ ಒಪ್ಪಲಿ ಅಂತಲೇ ಇಷ್ಟು ದಿನ ಕಾದಿದ್ದು, ಏನು ಮಾಡೋದು; ಎಲ್ಲಾ ನನ್ನ ಹಣೆಬರಹ! ನಾವೇನೇ ಬಯಸಿದರೂ ಆ ದೇವರು ಬರೆದ ಹಣೆಬರಹವನ್ನು ತಪ್ಪಿಸೋದಕ್ಕಾಗುತ್ತಾ?"

ಇದು ಜೂನ್ 6 ರ ಬೆಳಗ್ಗೆ ಕೊಲ್ಲೂರು ಮೂಕಾಂಬಿಕೆ ಸನ್ನಿಧಿಯಲ್ಲಿ ತನ್ನ ಎರಡನೇ ಮದುವೆ ಮುಗಿಸಿಕೊಂಡು

ಶೃತಿ ಮದುವೆ: ಲಫಂಗ, ಪತಂಗ

ಅರ್ಥಾತ್ ಚಂದ್ರಕಾಂತ್ ಎಂಬ ಲೋಕಲ್ಕ್ ಅರೆಕಾಲಿಕ ಪತ್ರಕರ್ತ, ಚಿತ್ರ ನಿರ್ದೇಶಕ, ನೀರಾವರಿ ತಜ್ಞ, ಮಾಜಿ ರೈತ ಹೋರಾಟಗಾರ, ಪಾರ್ಟ್ ಟೈಮ್ ವಂಚಕ ಮತ್ತು ಫುಲ್‌ಟೈಮ್ ಕಾಮುಕನ ಜನ್ಮಜಾತಕ!

ಕೇವಲ ಎರಡು ತಿಂಗಳ ಹಿಂದಷ್ಟೇ ಶೃತಿ ತಂದೆ ಚಂದ್ರಚೂಡನ ಕಾಟ ತಾಳಲಾರದೆ ಆತ್ಮಹತ್ಯೆಗೆ ಯತ್ನಿಸಿದರೆಂಬ ಮತ್ತೊಂದು ದುರ್ವಾರ್ತೆಯೂ ಬಸವೇಶ್ವರನಗರದ ಶೃತಿ ಮನೆಯಿಂದ ಹೊರಬಿದ್ದಿತ್ತು.

ಗೊತ್ತಾ? ಎಂದು ಬ್ಲಾಕ್‌ಮೇಲ್ ಮಾಡುತ್ತಿದ್ದದ್ದು, ಶೃತಿ ತಮ್ಮ ಶರಣ್ ರೌಡಿ ಗ್ಯಾಂಗ್ ಕಟ್ಟಿಕೊಂಡು ಹೊಡೆದಾಡಿದ್ದು ಕಂಡಕಂಡವರ ಬಳಿ ಚಂದ್ರಚೂಡ್ ತನ್ನನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದಾನೆಂದು ಶೃತಿ ಗೋಳಾಡುತ್ತಿದ್ದದ್ದು, ಶೃತಿ ಹೆಸರಲ್ಲಿ



ಮೊದಲನೆ ಪತಿ ಮಹೇಂದ್ರರ್ ಜೊತೆ



ಮಗಳು ಗೌರಿಯೊಂದಿಗೆ



ಶೃತಿ ಬದುಕಿಗೆ ಚೂಡ್ ಎಂಟ್ರಿ ಕೊಟ್ಟಾಗ

ಇಲ್ಲಿಗೆ ಮೂರು ತಿಂಗಳ ಹಿಂದಷ್ಟೇ ತನಗೆ ಆತ್ಮೀಯರಾದ ಪತ್ರಕರ್ತರೊಬ್ಬರಿಗೆ ಹೊತ್ತಲ್ಲದ ಹೊತ್ತಲ್ಲಿ ಶೃತಿ ಫೋನ್ ಮಾಡಿ 'ನೋಡಣ್ಣಾ... ಚಂದ್ರಚೂಡ ನನ್ನ ಕೈಗೆ ಬಾಸುಂಡೆ ಬರುವಂತೆ ಹೊಡೆದಿದ್ದಾನೆ. ಕಪಾಳ ಸಿಕ್ಕಾಪಟ್ಟೆ ಊದಿಕೊಂಡಿದೆ. ಮನೇಲಿದ್ದ ಲ್ಯಾಪ್‌ಟಾಪನ್ನು ನೆಲಕ್ಕೆ ಕುಕ್ಕಿದ್ದೇ ಪುಡಿಪುಡಿ ಮಾಡವ್ನೆ. ನನ್ನ ಮೊಬೈಲನ್ನೂ

ಶೃತಿ ತಂದೆ-ತಾಯಂದಿರಿಬ್ಬರನ್ನೂ ಆಕೆಯ ಬಸವೇಶ್ವರನಗರದ ಮನೆಯಿಂದ ಚಂದ್ರಚೂಡ್ ಬೀದಿಗೆ ದಬ್ಬಿದ್ದು, ಶೃತಿಗೆ ಸಂಬಂಧಪಟ್ಟಂತೆ ತನ್ನ ಬಳಿ ಅದೆಂಥದೋ ಸಿಡಿಯೊಂದು ಇದೆಯೆಂದು ಅವರಿವರ ಬಳಿ ಚಂದ್ರಚೂಡ್ ಹೇಳಿಕೊಂಡಿದ್ದು, ಆಗಾಗ ಶೃತಿಗೆ ಫೋನ್ ಮಾಡಿ ಮೀಡಿಯಾಗಳಿಗೆ ನಿನ್ನ ಸಿಡಿ ಕೊಟ್ಟರೆ ನಿನ್ನ ಗತಿ ಏನಾಗುತ್ತೆ

ಸಿಕ್ಕಸಿಕ್ಕವರ ಬಳಿಯೆಲ್ಲ ಚಂದ್ರಚೂಡ್ ರೋಲ್‌ಕಾಲ್ ನಡೆಸುತ್ತಿದ್ದದ್ದು, ಹೀಗೆ ಶೃತಿ ಕುರಿತಂತೆ ಕೇಳಿಬರುತ್ತಿದ್ದದ್ದೆಲ್ಲವೂ ಕೆಡುಕು ಅಪಶಕುನ, ಅವಮಾನ ಇತ್ಯಾದಿ ಅನಾಚಾರದ ಅಪಸ್ಮೃತಿಗಳಿಂದಲೇ ತುಳುಕಾಡುತ್ತಿತ್ತು.

ಇಲ್ಲಿಗೆ ವರ್ಷದ ಹಿಂದೆಯೇ ಚಂದ್ರಚೂಡನನ್ನು ತನ್ನ ಮನೆಯಿಂದ ಶೃತಿ ಹೊರಗಟ್ಟಿದ್ದಾಳೆಂದೂ, ಅವರಿಬ್ಬರ

ಶೃತಿ ನ್ಯೂಸ್ ಚಾನಲ್ಲುಗಳಿಗೆಂದು ಕೊಟ್ಟ ದೂರವಾಣಿ ಸಂದರ್ಶನದ ಕೆಲ ತುಣುಕುಗಳು. ಇದರರ್ಥ ಜೂನ್ 6ರ ಗುರುವಾರದಂದು ಶೃತಿ ಪಾಲಿಗೆ ಮಗಳ ಬರ್ತ್‌ಡೇ ಆಚರಣೆಯೇ ಮದುವೆಗಿಂತಲೂ ಮುಖ್ಯವಾಗಿತ್ತು. ಅದೂ ಚೆನ್ನೈನಲ್ಲಿ ನಡೆಯುತ್ತಿದ್ದ ತಮಿಳು ಚಿತ್ರದ ಶೂಟಿಂಗನ್ನೇ

ನೀರಾವರಿ ಹೋರಾಟ, ಹಸಿರು ಟವೆಲ್ ಚೀರಾಟ, ಅಕಟಕಟಾ...!

ಚಂದ್ರಾಚಾರಿ, ಚಂದ್ರಶೇಖರ್, ಚಂದ್ರಚೂಡ್, ಚಕ್ರವರ್ತಿ, ಚಂದ್ರಕಾಂತ್ -ಹೀಗೆ ಅವರವರ ಭಾವಕ್ಕೆ ಪರಿಸ್ಥಿತಿ, ಸ್ಥಳ, ಕುತಂತ್ರಗಳಿಗನುಗುಣವಾಗಿ ಪದೇಪದೇ ತನ್ನ ಹೆಸರನ್ನು ಬದಲಾಯಿಸುವುದು ಚೂಡನ ಚಾಳಿ. ಈತನ ಹುಟ್ಟುಗುಣ ಬಲ್ಲವರ್‍ಯಾರೂ ಈತನನ್ನು ತಮ್ಮ ಮನೆಯೊಳಕ್ಕೆ ಬಿಟ್ಟುಕೊಳ್ಳುವುದಿಲ್ಲ. ಈತ ಹೊಕ್ಕ ಯಾವ ಮನೆಯೂ ಉದ್ಧಾರವಾದ ಉದಾಹರಣೆಯಿಲ್ಲ, ಬಹುಶಃ ಮನುಷ್ಯನಾಗಲು, ಓರ್ವ ಪ್ರಜ್ಞಾವಂತನಾಗಲು ಈತನಿಗೆ ಸಿಕ್ಕಷ್ಟು ಅವಕಾಶ ಮತ್ತು ಪ್ರೋತ್ಸಾಹ ಬೇರೆ ಯಾರಿಗೆ ಸಿಕ್ಕಿದ್ದರೂ ಈ ಹೊತ್ತಿಗಾತ ಸಂತನೆನಿಸಿಕೊಳ್ಳುತ್ತಿದ್ದ!



ಶುರುವಿನಲ್ಲಿ ಕಮ್ಯುನಿಸ್ಟ್ ಪಕ್ಷದ ಯುವ ಘಟಕವಾದ ಡಿವೈಎಫ್‌ಐ ಸಂಘಟನೆಯ ಹಾಸನ ಘಟಕಕ್ಕೆ ಚೂಡ್ ಕಾರ್ಯದರ್ಶಿಯಾಗಿದ್ದ, ಕಮ್ಯುನಿಸ್ಟ್ ಸಿದ್ಧಾಂತ ಮತ್ತು ಸಮಾಜವಾದಿ ಆದರ್ಶ ಅದೆಷ್ಟು ಮೈಗೂಡಿತ್ತೋ ಗೊತ್ತಿಲ್ಲ, ಚೂಡನ ಮಾತುಗಾರಿಕೆ ಮತ್ತು ವರಸೆಗೆ ಮನಸೋತ ಡಿವೈಎಫ್‌ಐ ಕಾರ್ಯಕರ್ತರೆಲ್ಲ ಮನೆಮನೆಯಿಂದ ತಲಾ ಒಂದು ರೂಪಾಯಿಯಂತೆ ಚಂದಾ ಎತ್ತಿ ಹತ್ತು ಸಾವಿರ ರೂಪಾಯಿಯಷ್ಟು ಒಟ್ಟುಗೂಡಿಸಿ ಅದನ್ನು ಚೂಡನ ಕೈಗಿತ್ತರು.

ಆ ಹೊತ್ತಿಗೆ ರಾಜಸ್ಥಾನ್ ಮತ್ತು ಗುಜರಾತ್‌ನಲ್ಲಿ ರಾಜೇಂದ್ರಕುಮಾರ್ ಎಂಬ ಜಲತಜ್ಞರೊಬ್ಬರು ಜಲಕ್ರಾಂತಿಯೆಬ್ಬಿಸಿದ್ದರು. ಎಂದೋ ಬತ್ತಿ ಹೋಗಿದ್ದ ಮೂರು ನದಿಗಳಿಗೆ ಮರುಜೀವ ಕೊಟ್ಟ ಮಹಾನ್ ಸಾಧನೆಯ ಬಗ್ಗೆ ಅಧ್ಯಯನ ನಡೆಸಿ ಅದನ್ನು ಹಾಸನದಲ್ಲಿ ಜಾರಿಗೆ ತಂದು ನೀರಾವರಿ ಹೋರಾಟ ಸಂಘಟಿಸುವ ಹೊಣೆಯನ್ನು ಈತನಿಗೊಪ್ಪಿಸಿ ಸಂಗ್ರಹಿಸಿದ 10 ಸಾವಿರ ಪೂರ್ತಿ ಈತನಿಗೊಪ್ಪಿಸಿದ ಡಿವೈಎಫ್‌ಐ ಕಾರ್ಯಕರ್ತರು ಚೂಡನನ್ನು ರಾಜಸ್ಥಾನದ ರೈಲು ಹತ್ತಿಸಿದರು. ಆರು ತಿಂಗಳ ಕಾಲ ಚೂಡ್ ರಾಜಸ್ಥಾನ್‌ದಲ್ಲಿ ರಾಜೇಂದ್ರಕುಮಾರ್ ಜೊತೆಗೇ ಓಡಾಡಿದ. ಅಲ್ಲಿಗೆ ಅಣ್ಣಾ ಹಜಾರೆ ಕೂಡ ಬರುತ್ತಿದ್ದರು. ಅವರನ್ನೂ ಪರಿಚಯಿಸಿಕೊಂಡ. ಅಣ್ಣಾ ವ್ಯಕ್ತಿತ್ವಕ್ಕೆ ಮನಸೋತು ಮಹಾರಾಷ್ಟ್ರದ ರಾಲೇಗಾಂವ್ ಸಿದ್ಧಿಗೂ ಬಂದ. ಕೆಲಕಾಲ ಅಣ್ಣಾ ಹಜಾರೆಯ ಹೋರಾಟದಲ್ಲೂ ಓಡಾಡಿದ.

ಇಷ್ಟೆಲ್ಲ ಮಹಾತ್ಮರ ಸಾಂಗತ್ಯ, ಹೋರಾಟಗಳನ್ನು ಕಣ್ಣಾರೆ ಕಂಡುಂಡು ಬಂದ ಚೂಡ್ ತಾನು ಕೂಡ ಹಾಸನದಲ್ಲಿ ನೀರಾವರಿ ಕ್ರಾಂತಿ ಮಾಡುತ್ತೇನೆಂದು, ರಾಜೇಂದ್ರಕುಮಾರ್‌ರನ್ನು ಹಾಸನಕ್ಕೆ ಕರೆಸಿ ಯಾವುದೋ ಬತ್ತ ಕೆರೆಯಲ್ಲಿ ನಿಲ್ಲಿಸಿ ಜಲ ಹೋರಾಟದ ಟೇಪು ಕತ್ತರಿಸಿದ್ದ, ರಾಜೇಂದ್ರ ಕುಮಾರ್‌ರ ಜಲ ಹೋರಾಟ ಕುರಿತಂತೆ ತನಗೆ ತೋಚಿದಂತೆ ಬರೆದ ಪುಸ್ತಕವನ್ನೂ ಬಿಡುಗಡೆ ಮಾಡಿಸಿದ.

ಅದೇ ಕೊನೆ, ಆನಂತರ ಚಂದ್ರಚಾರಿ ರೈತ ನಾಯಕ ನಂಜುಂಡಸ್ವಾಮಿಯವರ ಛೇಲಾಗಿರಿಗಿಳಿದು ಹೆಗಲ ಮೇಲೆ ಹಸಿರು ಟವೆಲ್ ಹೊತ್ತು ಹಾಸನದ ತುಂಬಾ ಪೋಜು ಕೊಟ್ಟ. ನೀರಾವರಿ, ಜಲ ಹೋರಾಟ, ಕಮ್ಯುನಿಸ್ಟ್ ಸಿದ್ಧಾಂತದ ಫಲವೇ ಚೂಡ್ ರೈತ ಸಂಘದತ್ತ ಆಕರ್ಷಿತನಾದನೆಂದು ಜನ ಭಾವಿಸಿದ್ದರು. ಅದೇನಾಯಿತೋ ರೈತಸಂಘದಲ್ಲಿದ್ದಂತೆ ಚೂಡ್ ಕರುನಾಡಸೇನೆಯ ಹಾಸನ ಘಟಕಕ್ಕೂ ಅಧ್ಯಕ್ಷನಾದ. ಕೆಲದಿನಕ್ಕೇ ಪತ್ರಕರ್ತನ ಗೆಟಪ್ಪು ಧರಿಸಿ ತಾನು ಲಂಕೇಶ್ ಅಭಿಮಾನಿ, ಲಂಕೇಶರ ವಿಚಾರಧಾರೆಗಳಿಂದ ತನ್ನ ವ್ಯಕ್ತಿತ್ವವೇ ಬದಲಾಯಿತೆಂಬಂತೆ ಪೋಜು ಕೊಟ್ಟ. ತದನಂತರ ತಾನೀಗ ನಕ್ಸಲ್ ಸಿದ್ಧಾಂತಗಳ ಅನುಯಾಯಿ, ಸೌಹಾರ್ದ ವೇದಿಕೆಯ ಸದಸ್ಯ ಎಂದೂ ಓಡಾಡಿದ.

ತಮಾಷೆಯೆಂದರೆ ಲಂಕೇಶ್ ವೈಚಾರಿಕತೆ, ನಂಜುಂಡಸ್ವಾಮಿ ರೈತ ಸಿದ್ಧಾಂತ, ಹಸಿರು ಟವೆಲ್, ಕಮ್ಯುನಿಸ್ಟ್ ಬಾವುಟ, ಅಣ್ಣಾ ಹಜಾರೆ, ನೀರಾವರಿ ಹೋರಾಟ ಇತ್ಯಾದಿ ಶಬ್ದಗಳೆಲ್ಲವನ್ನೂ ಚೂಡ್ ಬಳಕೆ ಮಾಡಿಕೊಳ್ಳುತ್ತಿದ್ದದ್ದು ಹುಡುಗಿಯರನ್ನು ಪಟಾಯಿಸಲು ಮತ್ತು ಮುಗ್ಧರ ಹಣ ಲಪಟಾಯಿಸಲು!

ಹಾಸನದುದ್ದಕ್ಕೂ ಅನೇಕರಿಗೆ ಚೆಕ್ ಕೊಟ್ಟು ಸಾಲ ಪಡೆದು ವಂಚಿಸಿದ್ದ ಚೂಡ್ ಅನೇಕ ನಿರುದ್ಯೋಗಿಗಳಿಗೆ ಕೆಲಸ ಕೊಡಿಸುತ್ತೇನೆಂದೂ ಉಂಡೆ ನಾಮ ತಿಕ್ಕಿದ್ದ. ವಂಚನೆಗೊಳಗಾದವರಲ್ಲಿ ಕೆಲವರು ಪೊಲೀಸರಿಗೆ ದೂರು ಕೊಟ್ಟು ಚೂಡನನ್ನು ಅಟ್ಟಾಡಿಸಿ ಬಡಿದರು. ಆವತ್ತು ಹಾಸನ ಬಿಟ್ಟ ಚೂಡ್ ಆ ಹೊತ್ತಿಗಾಗಲೇ ಎಎಸ್‌ಐಯೊಬ್ಬರ ಮಗಳ ಜೊತೆ ಪರಾರಿಯಾಗಿದ್ದ. ಅರಸೀಕೆರೆಯ ಕುಲೀನರ ಮಗಳನ್ನು ಚೆನ್ನೈಗೆ ಕರೆದೊಯ್ದು ಮುಕ್ಕಿದ್ದ. ಆದರೆ ಮಂಜುಳಾ ಎಂಬ ಟಿಸಿಎಚ್ ವಿದ್ಯಾರ್ಥಿನಿ ಮಾತ್ರ ಪಟ್ಟು ಹಿಡಿದು ಮದುವೆಯಾದಳು. ಆಕೆಯೊಂದಿಗಿನ ಲವ್ ಮ್ಯಾರೇಜಿಗಾದರೂ ನಿಷ್ಠನಾಗಿರಬೇಕಲ್ಲವೆ?

ನಾಳೆ ಶೃತಿಗಿಂತ ವರ್ಚಸ್ವಿ ನಟಿಯೋ, ರೊಕ್ಕಸ್ಥಳೋ ಸಿಕ್ಕಳೆಂದರೆ ಶೃತಿಗೆ ಕೈಕೊಡಲಾರ ಎಂಬುದಕ್ಕೆ ಗ್ಯಾರಂಟಿಯೇನು? ಎಂತೆಂಥದೋ ಆದರ್ಶಗಳು ವಿಚಾರಧಾರೆ, ಹೋರಾಟಗಾರರು, ದಾರ್ಶನಿಕರೆಲ್ಲರ ಸಹವಾಸ, ಸಾಹಚರ್ಯ ಈತನಂತೆ ಬೇರೆ ಯಾರಿಗಾದರೂ ಸಿಕ್ಕಿದ್ದರೆ ಅವರೊಬ್ಬ 'ಸಂತ' ಎನಿಸಿಕೊಳ್ಳುತ್ತಿದ್ದರೇನೊ.

ಆದರೆ ಈತ ಆಗಿದ್ದು ಹರಾಮಿ ಚಂದ್ರಚೂಡ!

...ಬರ್ಥ್ ಮುಗಿಸಿ ಹೊಸೂರಿಗೆ ಬರಬೇಕಾಯ್ತು, ...ಗೆ ತನ್ನ ಮಗಳ ಹುಟ್ಟುಹಬ್ಬವೇ ಮುಖ್ಯವಾಗಿದ್ದರೆ ...ತ್ರೀ ಚಂದ್ರಚೂಡನಂಥ ಲಫಂಗನ ಜೊತೆ ...ಮದುವೆಯಾಗಬೇಕಾದ ತುರ್ತಾಗಲಿ, ಅವಸರವಾಗಲಿ ...ಲ್ಲ. ಮಗಳ ಹುಟ್ಟುಹಬ್ಬವನ್ನೂ ಬದಿಗೊತ್ತಿ ...ಂಡು ಗಾಬರಿಗಾಬರಿಯಿಂದ ...ಮದುವೆಯಾಗುತ್ತಿರಲಿಲ್ಲ.

...ಸಾಮಾನ್ಯವಾಗಿ ಯಾರೇ ನಟನಟಿಯರು ಈ ರೀತಿ ...ಮುಚ್ಚಿ ಆತುರಾತುರವಾಗಿ ಮದುವೆಯಾಗುವುದಿಲ್ಲ. ...ತುರ್ತ ಅವತ್ತೇ ಕೂಡಿಬಂದಿದ್ದರೆ ಶೂಟಿಂಗನ್ನು ...ಮುಂದೂಡುವಂತೆ ಮೊದಲೇ ವ್ಯವಸ್ಥೆ ಮಾಡಿಕೊಳ್ಳುವ ...ಲ್ಲ ಅವಕಾಶಗಳಿದ್ದವು. ಮಗಳ ಬರ್ತಡೇ ಮುಗಿಸಿ ...ದೆ ಮುಹೂರ್ತಗಳೂ ಸಾಕಷ್ಟಿದ್ದವು. ಮಹೇಂದರ್ ...ತೆ ವಿಚ್ಛೇದನ ಪಡೆದು ವರ್ಷಗಳೇ ಕಳೆದಿತ್ತಾದ್ದರಿಂದ ...ನೆಂಟ-ಮಿತ್ರರನ್ನು ಒಪ್ಪಿಸಲು ಸಾಕಷ್ಟು ಸಮಯಾವಕಾಶವೂ ..., ದೇವಸ್ಥಾನದಲ್ಲೇ ಮದುವೆಯಾಗಬೇಕು ಎಂದಿದ್ದರೂ ...ಕ್ಕೆ ಪರಮಾಪ್ತರನ್ನಾದರೂ ಕರೆಯಬಹುದಿತ್ತು.

...ಶೃತಿ ಮಾತುಗಳನ್ನೇ ಆಧರಿಸಿ ಹೇಳುವುದಾದರೆ ಇದು ...ಮನಸ್ಸಿನ ಹೇಳಿಕೊಳ್ಳಲಾಗದ ಒತ್ತಡದ ಮದುವೆ!



ಚಂದ್ರಾಚಾರಿಯ ಟೆಕ್ನಿಕ್!

...ಶೃತಿ-ಮಹೇಂದರ್ ದಾಂಪತ್ಯಕ್ಕೆ ಹುಳಿ ಹಿಂಡಿದಂತೆ ...ಮೀ ಚಂದ್ರಚೂಡನ ಪ್ರವೇಶವಾಗಿದ್ದು 2007ರಲ್ಲಿ ...ನೊಬ್ಬ ಸಿನಿಮಾ ಪತ್ರಕರ್ತನೆಂದೂ, ಭವಿಷ್ಯದಲ್ಲಿ ...ು ಕೂಡ ಸಿನಿಮಾ ಡೈರೆಕ್ಟರ್ ಆಗಬೇಕೆಂದು ಕನಸು ...ದ್ದೇನೆಂದೂ, ತನಗೆ "ಡೈರೆಕ್ಷನ್ ಮತ್ತು ಸ್ಕ್ರಿಪ್ಟ್ ...ಮಾಡುವುದನ್ನು ಗುರುಗಳಾದ ನೀವೇ ಕಲಿಸಿಕೊಡಬೇಕು. ...ವೇ ನನಗೆ ತಂದೆ-ತಾಯಿ ಎಲ್ಲವೂ" ಎಂದು ...ಹೇಂದರ್ ರಾಶಿಗೆ ಪ್ರವೇಶಿಸಿದ ಚಂದ್ರಚೂಡ್ ...ಕ್ರಮೇಣ ಗುರು ಪತ್ನಿಯ ಮೇಲೇ ಕಣ್ಣಿಟ್ಟ. ಗುರುವನ್ನೇ



ಬಸವೇಶ್ವರ ನಗರದ ಶೃತಿ ಸೊತ್ತು

...ಮನೆಯಿಂದ ಹೊರದಬ್ಬಿ ತಾನೇ ಗುರು ಪತ್ನಿಗೆ ...ನಾಗಿದ್ದು ಹಳೇ ಕತೆ.

...ಆ ಹೊತ್ತಿಗಾಗಲೇ ಚಂದ್ರಚೂಡನ ಲಫಂಗ ಚೇಷ್ಟೆಗಳು ..., ಮೋಚಕ ಬುದ್ಧಿ ಕಂಡ ಹಾಸನದ ಜನ ಆತನನ್ನು ... ಹೊಡೆದೋಡಿಸಿದ್ದರು. ಕಂಡಕಂಡವರಿಗೆಲ್ಲ ...ಟ್ಟು ಊಟ್ಟ ಬಟ್ಟೆಯಲ್ಲೇ ಹಾಸನದಿಂದ ...ಗಾಗಿ ಬಂದ ಚಂದ್ರಾಚಾರಿಗೆ ಮರುಪಿನಲ್ಲಿ ಪುದಿ ...ಕೊಟ್ಟು ಆಸರೆ ಕೊಟ್ಟರೆ ಆತನ ಪತ್ನಿಗೇ 'ಧವ'

>>>12

ಜನಾರ್ದನ ರೆಡ್ಡಿ ಸಾಲದ ಸುಳಿಯಲ್ಲಿ



ಸಮಯ ಸರಿದು ಹೋದದ್ದೇ ಗೊತ್ತಾಗಲಿಲ್ಲ.

ಐದು ನೂರು ದಿನಗಳು ಮುಗಿದೇಹೋಗಿದೆ ಮಾಜಿ ಗಣಿ ಧಣಿ ಜನಾರ್ದನ ರೆಡ್ಡಿ ಜೈಲು ಸೇರಿ. ತೀರಾ ಇತ್ತೀಚಿನವರೆಗೂ ಗಣಿ ಧಣಿ, ಕುಬೇರ, ಬಲಿಷ್ಠ ಉದ್ಯಮಿ, ಸರ್ಕಾರಗಳನ್ನೇ ನಿಯಂತ್ರಿಸುತ್ತಿದ್ದ ರಾಜಕಾರಣಿ, ದೈವಭಕ್ತ ಎಲ್ಲವೂ ಆಗಿದ್ದ ರೆಡ್ಡಿಯ ಪಾಲಿಗೆ ಈಗ ಏನೂ ಉಳಿದಿಲ್ಲ. ಜನಾರ್ದನ ರೆಡ್ಡಿಯೀಗ ಮಾಜಿ ಗಣಿ ಧಣಿ, ಮಾಜಿ ಕುಬೇರ, ಮಾಜಿ ರಾಜಕಾರಣಿ etc... etc.. ದೈವಭಕ್ತಿ ಈಗಲೂ ಇದೆಯೇನೊ. ಆದರೆ ಆ ತಿರುಪತಿ ತಿಮ್ಮಪ್ಪನೂ ಇವತ್ತು ರೆಡ್ಡಿಯ ಪಾಲಿಗಿಲ್ಲ. ಸಿಕ್ಕಿರುವುದು ಅಲ್ಲಿನ ನಾಮ ಒಂದೇ ಎಂದು ಕಾಣುತ್ತದೆ.

2012ರ ನವೆಂಬರ್ ಐದನೇ ತಾರೀಖು ಜನಾರ್ದನ ರೆಡ್ಡಿಯು ಅರೆಸ್ಟ್ ಆದ ದಿನ. ಅದು ಶಿಕ್ಷಕರ ದಿನಾಚರಣೆಯ ದಿನವೂ ಹೌದು. ರೆಡ್ಡಿಯ ಪಾಲಿಗೆ ಸಿಬಿಐ ತನಿಖೆ, ಕೋರ್ಟ್ ವಿಚಾರಣೆಗಳೆಲ್ಲಾ ಪುಂಡ ವಿದ್ಯಾರ್ಥಿಯೆದುರು ಕೈಲಿ ಬೆತ್ತ ಹಿಡಿದು ನಿಂತ ಶಿಕ್ಷಕರಂತೆಯೂ, ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸುವ ದಿನವಾಗಿಯೂ ಪರಿಣಮಿಸಿದೆ.

ಹಿಮಪರ್ವತವೊಂದರಿಂದ ಜಾರಿದ ಬಂಡೆ ಉರುಳುತ್ತಾ ಉರುಳುತ್ತಾ ದೊಡ್ಡದಾಗುವಂತೆ ಈಗ್ಗೆ ಐನೂರು ದಿನಗಳ ಹಿಂದೆ ಅರೆಸ್ಟಾದ ರೆಡ್ಡಿ ಮತ್ತಾತನ ಬಳಗದ ಸಮಸ್ಯೆಗಳು ಪ್ರತಿದಿನವೂ ಹೊಸ ಬಿಕ್ಕಟ್ಟಿನ ರೂಪ ತಳೆಯುತ್ತಿವೆ.


ಬಳ್ಳಾರಿಯ ಈಗಿನ ಲೇಟೆಸ್ಟ್ ಸುದ್ದಿ ಏನೆಂದರೆ... ರೆಡ್ಡಿ ಬಳಗ ಈಗ ಆಂಧ್ರದ ಶ್ರೀಮಂತ ಉದ್ಯಮಿಯೊಬ್ಬನಿಂದ ಮೂವತ್ತು ಕೋಟಿ ರೂಪಾಯಿ ಕೈಸಾಲ ಮಾಡಿದೆ ಎನ್ನುವುದು..!

ಇವರ ಕೆಟ್ಟ ಕೆಲಸಗಳೆಲ್ಲಾ ಸುಗಮವಾಗಿ ನಡೆಯುತ್ತಿದ್ದಾಗ ಒಂದು ದಿನದಲ್ಲಿ ಮುಲಾಜಿಲ್ಲದೆ ರೆಡ್ಡಿಗಳು ಖರ್ಚು ಮಾಡಬಹುದಾಗಿದ್ದ ಮೊತ್ತವಿದಾಗಿತ್ತು.

ಆದರೆ ಕಾಲ ಬದಲಾಯಿತಲ್ಲ...?

ಕೈಲಿ ಕಾಸ್ ಇಲ್ಲ

ರೆಡ್ಡಿ ಬಳಗದ ಕೈಲಿ ಈಗ ದೊಡ್ಡ ಮೊತ್ತದ ನಗದು ಓಡಾಡುತ್ತಿಲ್ಲ. ಗಾಡ್‌ಫಾದರ್‌ಗಳಿಲ್ಲ, ಮಾತು ಕೇಳುವ ಸರ್ಕಾರವೂ ಇಲ್ಲ, ಅಧಿಕಾರಿಗಳಿಲ್ಲ. ಇವೆಲ್ಲಾ ಕಾಯಂ ಆಗಿ ತಮ್ಮಲ್ಲಿ ಇರುತ್ತದೆಂಬ ಭ್ರಮೆ ಅವರಿಗಿತ್ತು. ಆದರೆ ಅದೆಲ್ಲಾ ಈಗ ಕರಗಿಹೋಗಿದೆ... ಕೂಡಿಟ್ಟಿದ್ದ ರಾಶಿರಾಶಿ ದುಡ್ಡಿನೊಂದಿಗೆ. ಸಿಬಿಐ ಹಾಕಿರುವ ಚಾರ್ಜ್‌ಶೀಟ್‌ನಲ್ಲಿ ಡಿಸಿಎಫ್ ಮುತ್ತಯ್ಯ ಹಾಗೂ ಗಣಿ ಇಲಾಖೆ ಅಧಿಕಾರಿ ಐಎಎಸ್ ಶುಕ್ಲಾ ಹೆಚ್ಚುಕಡಿಮೆ ಅಪ್ರೂವರ್‌ಗಳ ರೀತಿ ಬದಲಾಗಿದ್ದಾರೆ. ರೆಡ್ಡಿಯ ಅಕ್ರಮ ಗಣಿಗಾರಿಕೆಯ ಇಂಚಿಂಚ ವಿವರಗಳನ್ನು ಸಿಬಿಐಗೆ ನೀಡುತ್ತಿರುವ ಮುತ್ತಯ್ಯನಿಂದಾಗಿ ಸಿಬಿಐ ತನಿಖೆಯು ಇನ್ನಷ್ಟು ಪಖಡಬಂದಿಯಾಗಿ ಮುಂದುವರೆಯುತ್ತಿದೆ. ಒಂದು ಕಡೆ ಸಿಬಿಐನ ತನಿಖೆ ಹಾಗೂ ಹೊಸ ಹೊಸ ಚಾರ್ಜ್‌ಶೀಟ್‌ಗಳು ಬೀಳುತ್ತಿವೆ. ಮತ್ತೊಂದೆಡೆ ಈ ತನಿಖೆಯನ್ನಾಧರಿಸಿ ಆರ್ಥಿಕ ಅಪರಾಧಗಳ ತನಿಖಾ ಸಂಸ್ಥೆ (Enforcement Directorate - ED) ಯವರು ರೆಡ್ಡಿ ಬಳಗದ ಬ್ಯಾಂಕ್ ಅಕೌಂಟ್‌ಗಳನ್ನು, ಲಾಕರ್‌ಗಳನ್ನು, ಕಂಪನಿಗಳನ್ನು, ಕೈಗೆ ಸಿಕ್ಕಷ್ಟು ಕ್ಯಾಶ್ ಹಾಗೂ ಚಿನ್ನವನ್ನೆಲ್ಲಾ ಸೀಜ್ ಮಾಡುತ್ತಿದ್ದಾರೆ.



ದಿನೇಶ್ ಗುಂಡೂರಾವ್ | ಅನಿಲ್ ಲಾಡ್ | ರಾಮುಲು

ಪರಿಸ್ಥಿತಿ ಇಷ್ಟು ಕೆಟ್ಟ ಮೇಲೆ ರೆಡ್ಡಿ ಗ್ಯಾಂಗ್‌ಗೆ ಸಾಲ ಮಾಡದೆ ಬೇರೇನೂ ಮಾಡಲು ಸಾಧ್ಯವಿರಲಿಲ್ಲ.

ಅಕ್ರಮ ಗಣಿಗಾರಿಕೆಯಲ್ಲಿ ರೆಡ್ಡಿ ಸಾವಿರಾರು ಕೋಟಿ ರೂಪಾಯಿ ದುಡಿದಿದ್ದನಾದರೂ ಅವೆಲ್ಲಾ ಅವನ ಕೈಯಳತೆಯಲ್ಲಿಲ್ಲ. ವಿದೇಶಿ ಬ್ಯಾಂಕ್‌ಗಳಲ್ಲಿ ಹಣ ಇಟ್ಟಿದ್ದಾನಾದರೂ ರೆಡ್ಡಿ ಜೈಲಿಂದ ಹೊರಬರದೆ ಅವನ್ನೆಲ್ಲಾ ಆಪರೇಟ್ ಮಾಡಲು ಆಗುವುದಿಲ್ಲ. ಹಾಗೊಮ್ಮೆ ಈಗಲೇ ರೆಡ್ಡಿಯ ಆಪ್ತರ್‍ಯಾರಾದರೂ ಆ ಹಣದತ್ತ ಕೈಚಾಚಿದರೆ ED ಅಥವಾ ಸಿಬಿಐನವರು ಕಿತ್ತುಕೊಳ್ಳುವ ಭೀತಿಯೂ ಇದೆ.

ಹಣಕಾಸಿನ ಪರಿಸ್ಥಿತಿ ಇಷ್ಟು ಕೆಟ್ಟದ್ದಾಗಲೂ ರೆಡ್ಡಿ ಗ್ಯಾಂಗ್‌ನ ಸಿಟ್ಟು ಸೆಡವು ಕೊಂಚ ಹಾಗೆಯೇ ಇರುವಂತಿದೆ.

ಬೆಂಗಳೂರಿನ ರೌಡಿ ಕಂ ರಾಜಕಾರಣಿ ಬಾಂಬ್ ನಾಗನೊಂದಿಗಿನ ಇವರ ಹೊಸ ಜಗಳವೇ ಇದಕ್ಕೆ ಸಾಕ್ಷಿಯಾಗಿದೆ.

ಮೊನ್ನಿನ ಎಲೆಕ್ಷನ್‌ನಲ್ಲಿ ಗಾಂಧಿನಗರದ ಕಾಂಗ್ರೆಸ್ ಅಭ್ಯರ್ಥಿ ದಿನೇಶ್ ಗುಂಡೂರಾವ್‌ರನ್ನು ಸೋಲಿಸಲು ಯತ್ನಿಸಿದ್ದ ರೆಡ್ಡಿ ಗ್ಯಾಂಗ್ ಪ್ರತಿಸ್ಪರ್ಧಿ ಬಾಂಬ್ ನಾಗನಿಗೊಂದು ಸಂದೇಶ ಕಳುಹಿಸಿ 'ದಿನೇಶ್ ಸೋಲಿಸಲು ನಾವು ಐದು ಕೋಟಿ ಕೊಡ್ತೀವಿ. ನೀನು ಕೆಲಸ ಮಾಡು ದುಡ್ಡು ಆಮೇಲೆ ಕೊಡ್ತೀವಿ' ಅಂದಿದ್ದರಂತೆ. ಇವರ ಮಾತು ನಂಬಿದ ನಾಗ ದುಡ್ಡು ಖರ್ಚು ಮಾಡಿದನಾದರೂ ಎಲೆಕ್ಷನ್ ಸೋತ. ನಂತರ ನಾಗ ಹಣ ಕೇಳಿದಾಗ ಕೊಡಲ್ಲ ಅಂದವರು ಕೊನೆಗೆ ಒಂದೂವರೆ ಕೋಟಿಗೆ ಒಪ್ಪಿದ್ದಾರಂತೆ. ಆದರೆ ಬಾಂಬ್ ನಾಗನಿಗೆ ಈಗಲೂ ಹಣ ಸಿಗದ ಕಾರಣ ಜಗಳ ನಡೆದಿದೆಯಂತೆ.

ಕಾಂಗ್ರೆಸ್ ನಾಯಕರು ನಡೆಸಿದ ಬಳ್ಳಾರಿ ಪಾದಯಾತ್ರೆಗೆ ದಿನೇಶ್ ಗುಂಡೂರಾವ್ ಮುಖ್ಯ ಕಾರಣ ಎಂಬ ಸಿಟ್ಟಿಗೆ ರೆಡ್ಡಿ ಗ್ಯಾಂಗ್ ಬಾಂಬ್ ನಾಗನಿಗೆ ಬೆಂಬಲ ನೀಡಿತ್ತಂತೆ. ಜನಾರ್ದನ ರೆಡ್ಡಿಯ ಜಾಮೀನಿಗಾಗಿ ಕುದುರಿಸಿದ್ದ ಇಪ್ಪತ್ತು ಕೋಟಿ ರೂಪಾಯಿಯ ಡೀಲ್‌ನಲ್ಲಿ ರೆಡ್ಡಿ ಬಳಗವು ಮನೆಯಲ್ಲಿದ್ದ ಚಿನ್ನ ಮಾರಿ ದುಡ್ಡು ಹೊಂದಿಸಿತ್ತೆಂದು ಈಗ ಸಿಬಿಐ ನಿರೂಪಿಸಿದೆ.

ಕಷ್ಟ ಬಂದಾಗ ಕೈಲಿರುವ ಹಣವೂ ನಿಖಾಲಿಯಾದಾಗಲೇ ತಾನೆ ಯಾರಾದರೂ ಚಿನ್ನ ಮಾರುವುದು?

ರಾಮುಲು- ರೆಡ್ಡಿ ಮುರಿದ ನಂಟು

ಹಣಕಾಸಿನ ಸಮಸ್ಯೆ ಜನಾರ್ದನ ರೆಡ್ಡಿ ಬಳಗಕ್ಕೆ ಮಾತ್ರವಲ್ಲ, ಶ್ರೀರಾಮುಲುನನ್ನೂ ಕಾಡುತ್ತಿದೆ. ಇತ್ತೀಚೆಗೆ ಬಿಎಸ್‌ಆರ್ ಕಾಂಗ್ರೆಸ್ ಪಕ್ಷದ ವಿವಿಧ ಘಟಕಗಳನ್ನೆಲ್ಲಾ ಒಂದೇ ಸಾರಿ ವಿಸರ್ಜಿಸಿರುವ ರಾಮುಲು ಬೆಂಗಳೂರಿನಲ್ಲಿರುವ ಪಾರ್ಟಿ ಆಫೀಸಿನ ಆರು ತಿಂಗಳ ಬಾಡಿಗೆಯನ್ನೂ ಕಟ್ಟಿಲ್ಲ ಎಂಬ ಸುದ್ದಿಗಳಿವೆ.

ತಿಂಗಳಿಗೆ ಏಳೂವರೆ ಲಕ್ಷ ಬಾಡಿಗೆಯ ಈ ಕಟ್ಟಡದಿಂದ ರಾಮುಲು ಪಕ್ಷದ ಬೋರ್ಡ್ ಮಾಯವಾಗುವ ದಿನವೂ ಹತ್ತಿರದಲ್ಲಿರುವಂತಿದೆ.

ರೆಡ್ಡಿಯನ್ನು ಜೈಲಿನಿಂದ ಹೊರತರಲು ರಾಮುಲು ಹಾಗೂ ಶಾಸಕ ಸುರೇಶ್ ಬಾಬು ಶ್ರದ್ಧೆಯಿಂದ ಪ್ರಯತ್ನಿಸುತ್ತಿಲ್ಲ ಎಂದು ಅನುಮಾನ ಪಡುತ್ತಿರುವ ರೆಡ್ಡಿ ಬಳಗವು ಈಗ ರಾಮುಲುನನ್ನು ದೂರವಿಟ್ಟಿದೆ. ರೆಡ್ಡಿಯ 'ಕುಟೀರ' ಬಂಗಲೆಗೆ ರಾಮುಲು ಪ್ರವೇಶಕ್ಕೆ ನಿಷೇಧಾಜ್ಞೆ ಜಾರಿಯಲ್ಲಿದೆ. ಈ ನಡುವೆ ಬಳ್ಳಾರಿಯ ತಿಲಕ್ ನಗರ ಏರಿಯಾದ ಸೈಟ್‌ಗಳ ಕಬಳಿಕೆ ಹಗರಣವೊಂದರಲ್ಲಿ ರಾಮುಲು ಸಿಕ್ಕಿಬಿದ್ದು ಕೋರ್ಟ್ ಮೆಟ್ಟಿಲೇರಿವೆ.

ಮೊನ್ನಿನ ಎಲೆಕ್ಷನ್‌ನಲ್ಲಿ ಸೋಮಶೇಖರ್ ರೆಡ್ಡಿ ಸ್ಪರ್ಧಿಸದೆ ಸುಮ್ಮನಾಗಲು ರಾಮುಲು ಮೇಲಿದ್ದ ಅಪನಂಬಿಕೆಯೇ ಮುಖ್ಯ ಕಾರಣ ಎಂಬ ಮಾತುಗಳಿವೆ. ರಾಮುಲು ಬೆಂಬಲಿಗರು ಸೋಮಶೇಖರ್ ರೆಡ್ಡಿಯನ್ನು ಸೋಲಿಸಲು ಯತ್ನಿಸಲಿದ್ದಾರೆಂಬ ಭೀತಿಯಿಂದ ಆತ ಎಲೆಕ್ಷನ್‌ಗೆ ನಿಲ್ಲಲಿಲ್ಲವಂತೆ.

ರೆಡ್ಡಿ ಜೈಲಿಗೆ ಹೋದ ಒಂದೂವರೆ ವರ್ಷದ ಅವಧಿಯಲ್ಲಿ ಅವರ ಸೋದರ ಬಳಗವೆಲ್ಲ ಮತ್ತೆ ಒಂದಾಗಿದ್ದಾರೆ. ರಾಮುಲುನನ್ನು ಹೊರ ತಳ್ಳಿದ್ದಾರೆ. ಹಾಗಾಗಿಯೇ ರಾಮುಲು ಇತ್ತೀಚೆಗೆ ಜೈಲಿಗೆ ಹೋಗಿ ಜನಾರ್ದನ ರೆಡ್ಡಿಯನ್ನು ಭೇಟಿಯಾಗೂ ಇಲ್ಲ.

ಇದರ ನಡುವೆ ಜನಾರ್ದನ ರೆಡ್ಡಿಗೆ ಜಾಮೀನು ಸಿಗುವ ಸಾಧ್ಯತೆಗಳು ದಿನೇ ದಿನೇ ಕಡಿಮೆಯಾಗುತ್ತಲೇ ಇದೆ. ಸಿಬಿಐ ಪೂರ್ತಿ ಚಾರ್ಜ್‌ಶೀಟ್ ಹಾಕಿ ಮುಗಿಸುವವರೆಗೂ ರೆಡ್ಡಿಗೆ ಬೇಲ್ ಸಿಗಲ್ಲ. ಈಗ ಸಿಬಿಐನವರು ಹೊಸ ಹೊಸ ಕೇಸ್‌ಗಳನ್ನು ದಾಖಲಿಸುತ್ತಿದ್ದಾರೆ. ಅವುಗಳ ಚಾರ್ಜ್‌ಶೀಟ್ ಹಾಕಲು ಇನ್ನಷ್ಟು ಸಮಯ ಬೇಕಾಗುತ್ತದೆ.

2013ರ ನವೆಂಬರ್ ದಾಟಿದರೂ ರೆಡ್ಡಿ ಜೈಲು ವಾಸವು 3ನೇ ವರ್ಷಕ್ಕೆ ಕಾಲಿಡುವ ದಿನ ಅದು.

● ಮಾರ್ಟಿನ್

ಕೊಲೆಯಾದನೆ ಡ್ರೈವರ್ ರಾಘವೇಂದ್ರ

ಬಳ್ಳಾರಿಯಲ್ಲೀಗ ಎಲ್ಲಿ ಏನೇ ಘಟನೆ ನಡೆದರೂ ಅದಕ್ಕೆ ರಾಜಕೀಯ ಬಣ್ಣ ಕೊಡುವ ಕೆಟ್ಟ ಚಾಳಿ ಶುರುವಾಗಿದೆ. ಕಾರ್ ಡ್ರೈವರ್ ರಾಘವೇಂದ್ರ ಎಂಬುವನ ನಾಪತ್ತೆ ಪ್ರಕರಣವೇ ಇದಕ್ಕೆ ಸಾಕ್ಷಿ. ಈ ಕುರಿತು ಬಳ್ಳಾರಿ ರೂರಲ್ ಠಾಣೆಯಲ್ಲಿ ಮಿಸ್ಸಿಂಗ್ ಕಂಪ್ಲೆಂಟ್ ಒಂದು ದಾಖಲಾಗಿದ್ದು ಅನಿಲ್ ಲಾಡ್ ಹಾಗೂ ದಿವಾಕರ ಬಾಬು ಬಣಗಳ ಕದನಕ್ಕೂ ಇದು ಬಳಕೆಯಾಗುತ್ತಿದೆ. ಶಾಸಕ ಅನಿಲ್ ಲಾಡ್‌ರ ಹಿಂಬಾಲಕ ದಾದಾಪೀರ್ ಎಂಬುವನಿದ್ದಾನೆ. ಈತನ ತಂದೆ ಹುಸೇನ್ ಸಾಬ್ ಮತ್ತವರ ಅಳಿಯ ಆರ್‌ಟಿಐ ಅಧಿಕಾರಿ ನೂರ್ ಮಹಮದ್ ಬಳಿ ಕಾರ್ ಚಾಲಕನಾಗಿದ್ದ ರಾಘವೇಂದ್ರ ಮೇ ತಿಂಗಳ 13ನೇ ತಾರೀಖಿನಿಂದ ಸಡನ್ನಾಗಿ ನಾಪತ್ತೆಯಾಗಿರುವುದು ಈಗ ಅನೇಕ ಅನುಮಾನಗಳಿಗೆ ಕಾರಣವಾಗಿದೆ.

ಕಳೆದ ಮೇ 6 ರಂದು ಮರ ತರಲು ಹುಸೇನ್ ಸಾಬ್‌ರೊಂದಿಗೆ ಧಾರವಾಡಕ್ಕೆ ಹೋಗಿದ್ದ ರಾಘವೇಂದ್ರ ಹಿಂತಿರುಗಿ ಬರುವಾಗ ಡಾಬಾ ಒಂದರಲ್ಲಿ ಕುಡಿದು ಮಾಲೀಕ ಹುಸೇನರೊಂದಿಗೆ ಜಗಳವಾಡಿ, ಚಪ್ಪಲಿಯಲ್ಲಿ ಹೊಡೆದು ಬಂದಿದ್ದ. ಈ ಘಟನೆ ನಡೆದ ಒಂದೇ ವಾರದಲ್ಲಿ ರಾಘವೇಂದ್ರ ಕಾಣೆಯಾಗಿರುವುದರಿಂದ ಸಹಜವಾಗಿಯೇ ಅನುಮಾನಗಳು ಹುಸೇನ್ ಸಾಬ್ ಮತ್ತವರ ಮಗ ದಾದಾ ಪೀರ್ ಸುತ್ತ ಸುತ್ತುತ್ತಿವೆ. ಈ ದಾದಾ ಪೀರ್ ಅನಿಲ್ ಲಾಡ್‌ರ ಹಿಂಬಾಲಕನಾದ್ದರಿಂದ ಲಾಡ್ ಹೆಸರನ್ನೂ ಈ ಕೇಸಿನಲ್ಲಿ ಸಿಲುಕಿಸುವ ಯತ್ನ ನಡೆದಿದೆ.


ಚಾಲಕ ರಾಘವೇಂದ್ರನ ಹತ್ತಿರ ಮಾಲೀಕರೇ ನೀಡಿದ್ದ ಟಿವಿಎಸ್ ಕೆಎ 999 ಸಂಖ್ಯೆಯ ಬೈಕಿತ್ತು. ಮೇ 13-14ರ ಸಂಜೆ ರಾಘವೇಂದ್ರನ ಮನೆಗೆ ಬಂದ ಒಬ್ಬ ವ್ಯಕ್ತಿ ಬೈಕ್‌ನಲ್ಲಿ ಕರೆದುಕೊಂಡು ಹೋದ ಎನ್ನಲಾಗಿದೆ. ಆ ವ್ಯಕ್ತಿ ಮೋಹನ್ ಎಂದು ಈಗ ಪೊಲೀಸರು ಪತ್ತೆ ಹಚ್ಚಿದ್ದಾರೆ. ಮೋಹನ್ ಸಹ "ನಾನು ರಾಘವೇಂದ್ರನನ್ನು ಕರೆದುಕೊಂಡು ಹೋಗಿದ್ದು ನಿಜ. ಆ ನಂತರ ಅವನು ಕುಡಿಯಲು ಹೋದ. ಆಮೇಲೇನಾಯಿತೋ ನನಗೆ ಗೊತ್ತಿಲ್ಲ" ಅನ್ನುತ್ತಿದ್ದಾನೆ.

ಆದರೆ ರಾಘವೇಂದ್ರನ ತಾಯಿ ಮನೆಗೆ ಬಂದು ಮಗನನ್ನು ಕರೆದೊಯ್ದದ್ದು ಮೋಹನ್ ಅಲ್ಲ ಎನ್ನುತ್ತಾ ಪೊಲೀಸರಿಗೆ ಪೇಚು ಉಂಟುಮಾಡುತ್ತಿದ್ದಾರೆ.

ಸಬ್ ಇನ್ಸ್‌ಪೆಕ್ಟರ್ ಸೋಮಶೇಖರ್ ಯಾರ ಒತ್ತಡಕ್ಕೂ ತಲೆಬಾಗದೆ ಈ ಕೇಸಿನ ಬೆನ್ನು ಹತ್ತಿದ್ದಾರೆ. ಕುಡಿತದ ಚಟವಿರುವ ರಾಘವೇಂದ್ರ ಊರು ಬಿಟ್ಟು ಬೇರೆಲ್ಲೋ ಅಲೆಯುತ್ತಿರಬಹುದೆಂಬ ಅನುಮಾನ ಪೊಲೀಸರಿಗಿದೆ.

ರಾಘವೇಂದ್ರ ಹತ್ಯೆಯಾದರೆ ಒಂದು ಕತೆ, ನಾಪತ್ತೆಯೇ ನಿಜವಾಗಿ ಬಟ್ಟರೆ ಇನ್ನೊಂದು ಕತೆ ಶುರುವಾಗುವುದಂತೂ ಖಚಿತ. ಒಟ್ಟಿನಲ್ಲಿ ಬಳ್ಳಾರಿ ಪೊಲೀಸರಿಗಂತೂ ನೆಮ್ಮದಿಯಿಲ್ಲ ಅಷ್ಟೆ.

ದಲಿತ ಹುಡುಗನ ದೃಷ್ಟಿ ಕಸಿದುಕೊಂಡ ಸಚಿವ ತಂಗಡಗಿಯ ಗೆಲುವ
ರಾಜಕಾರಣಿಗಳಲ್ಲಿ ಮನುಷ್ಯತ್ವ ಮಾಸಿ ಹೋಗಿದೆಯಾ?





ಈ ಬಡ ಹುಡುಗನ ಗೋಳು ನೋಡಿದ ಎಂತವರಿಗೇ ಆದರೂ ಇಂತಹದ್ದೊಂದು ಪ್ರಶ್ನೆ ಕಾಡುತ್ತದೆ. ಯಾರದೋ ತಪ್ಪಿಗೆ ಕಣ್ಣು ಕಳೆದುಕೊಂಡ ಹುಡುಗ ಚಿಕಿತ್ಸೆಗೆ ಹಣವಿಲ್ಲದೆ ಮನೆಯಂತಹ ಶೆಡ್ ಮುಂದೆ ಮಲಗಿರುವ ಮತ್ತು ಅವನ ಪಕ್ಕ ಅಸಹಾಯಕರಾಗಿ ನಿಂತ ಹೆತ್ತವರ ದೃಶ್ಯ ನಿಜಕ್ಕೂ ಕರುಳು ಹಿಂಡುವಂತದ್ದು. ಹುಡುಗನ ಈ ದುರಾದೃಷ್ಟಕ್ಕೆ ಪರೋಕ್ಷವಾಗಿ ಕಾರಣವಾಗಿರೋದು ಅವರೇ ಮತ ಕೊಟ್ಟು ಗೆಲ್ಲಿಸಿದ ಶಾಸಕ, ಈಗ ಮಂತ್ರಿಗಿರಿಯನ್ನೂ ಗಿಟ್ಟಿಸಿಕೊಂಡಿರುವ ಶಿವರಾಜ್ ತಂಗಡಗಿ!

ಇದಿಷ್ಟೂ ನಡೆದದ್ದು ಕನಕಗಿರಿ ವಿಧಾನಸಭಾ ಕ್ಷೇತ್ರದ ಹೊಸ ಜೂರಟಗಿ ಗ್ರಾಮದಲ್ಲಿ, ಆರನೇ ತರಗತಿ ಓದುತ್ತಿರುವ ಸೋಮನಾಥನೇ ಆ ನತದೃಷ್ಟ ದಲಿತ ಹುಡುಗ. ಅಷ್ಟಕ್ಕೂ ಅವತ್ತು ನಡೆದದ್ದು ಇಷ್ಟೇ.

ಮೇ 8 ಇಡೀ ರಾಜ್ಯವೇ ಚುನಾವಣಾ ಫಲಿತಾಂಶ ನಿರೀಕ್ಷೆಯಲ್ಲಿದ್ದ ದಿನ. ಅವತ್ತು ಹೊಸ ಜೂರಟಗಿ ಗ್ರಾಮದ ರಾಮಣ್ಣನೆಂಬಾತ ತನ್ನ ಮಗ ಸೋಮನಾಥನ ಜೊತೆ ದನಕರುಗಳ ಸಮೇತ ಹೊಲಕ್ಕೆ ಹೋಗಿ ವಾಪಸ್ಸಾಗುತ್ತಿದ್ದ. ಅದೇ ವೇಳೆಗೆ ಕನಕಗಿರಿ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶಿವರಾಜ್ ತಂಗಡಗಿ ಗೆದ್ದ ಸುದ್ದಿಯೂ ಹೊರ ಬಿದ್ದಿತ್ತು, ರಣೋತ್ಸಾಹ ತುಂಬಿಕೊಂಡ ತಂಗಡಗಿಯ ಅಭಿಮಾನಿಗಳು ಮೋಟಾರ್ ಬೈಕ್‌ನ ಸೈಲೆನ್ಸರ್ ಕಿತ್ತುಕೊಂಡು ಕೇಕೆ ಹಾಕುತ್ತಾ ರಸ್ತೆಯಲ್ಲಿ ಮನಬಂದಂತೆ ಬೈಕ್ ರ್‍ಯಾಲಿ ಹೊರಟಿದ್ದರು.

ಇತ್ತ ತಂಗಡಗಿ ವಿಜಯೋತ್ಸವದ ಗುಂಪು ಸಮೀಪಿಸುತ್ತಿದ್ದಂತೆ ಅವರ ವಿಕಾರ ಅರಚಾಟ ಕಂಡು ಬೆದರಿದ ದನಗಳು ಚೆಲ್ಲಾಪಿಲ್ಲಿಯಾಗಿ ಓಡಲು ಶುರುಮಾಡಿದ್ದವು. ಅಂತಹುದೇ ಒಂದು ಬೆದರಿದ ದನ ಸೋಮನಾಥನ ಎಡಗಣ್ಣಿಗೆ ಕೋಡಿನಿಂದ ಬಲವಾಗಿ ತಿವಿದು ಓಟ ಕಿತ್ತಿತ್ತು, ಕ್ಷಣಮಾತ್ರದಲ್ಲೆ ಆ ಹುಡುಗನ ಮುಖ ರಕ್ತದಿಂದ ತೊಯ್ದು ಹೋಗಿತ್ತು, ನಿತ್ರಾಣಗೊಂಡ ಹುಡುಗ ಸ್ಥಳದಲ್ಲೇ ಕುಸಿದು ಬಿದ್ದಿದ್ದ.

ತುತ್ತು ಕೂಳಿಗೂ ಪರಿತಪಿಸಬೇಕಾದ ಬಡತನದಲ್ಲಿರುವ ಆ ಹುಡುಗನ ತಂದೆ ರಾಮಣ್ಣ ಸಾಲ ಮಾಡಿ ಮಗನನ್ನು ಬಳ್ಳಾರಿ ವಿಮ್ಸ್ ಆಸ್ಪತ್ರೆಗೆ ಸೇರಿಸಿದ್ದ. ಪರೀಕ್ಷಿಸಿದ ವೈದ್ಯರು ಕಣ್ಣುಗುಡ್ಡೆಗೆ ಬಲವಾದ ಏಟಾಗಿರುವುದರಿಂದ ದೃಷ್ಟಿ ವಾಪಸ್ಸಾಗುವ ಸಾಧ್ಯತೆಯೇ ಕಷ್ಟವೆಂದು ಕೈಚೆಲ್ಲಿದ್ದಾರೆ. ಗಾಯ ಸಂಪೂರ್ಣವಾಗಿ ವಾಸಿಯಾಗುವವರೆಗೆ ವಾರದಲ್ಲಿ ಎರಡು ಬಾರಿ ಆಸ್ಪತ್ರೆಗೆ ಬಂದು ಡ್ರೆಸ್ಸಿಂಗ್ ಮಾಡಿಸುವಂತೆ ವೈದ್ಯರು ಹೇಳಿದ್ದಾರೆ. ಅವರಿವರ ಬಳಿ ಸಾಲ ಮಾಡಿರುವ ರಾಮಣ್ಣ ಈಗಾಗಲೇ ಮಗನ ಚಿಕಿತ್ಸೆಗೆಂದು ಮೂವತ್ತು ಸಾವಿರ ರೂಪಾಯಿ ಖರ್ಚು ಮಾಡಿ, ಮಗನ ದುಸ್ಥಿತಿಗಾಗಿ ಮರುಗುತ್ತಾ ಕೂತಿದ್ದಾನೆ. ಹೆಚ್ಚಿನ ಚಿಕಿತ್ಸೆ ಲಭಿಸಿದರೆ ದೃಷ್ಟಿ ಸುಧಾರಿಸಬಹುದೆನ್ನುವ ಭರವಸೆ ಇದೆಯಾದರೂ ರಾಮಣ್ಣ ಅಸಹಾಯಕ....

ದುರಾದೃಷ್ಟ ಅಂತಂದರೆ, ಇಷ್ಟಕ್ಕೆಲ್ಲ ಪರೋಕ್ಷವಾಗಿ ಕಾರಣನಾದ ಸಚಿವ ಶಿವರಾಜ್ ತಂಗಡಗಿ ಮಿನಿಮಮ್ ಮನುಷ್ಯತ್ವವೂ ಇಲ್ಲದಂತೆ ನಿರ್ಲಕ್ಷಿಸುತ್ತಿದ್ದಾರೆ. ಕಡೇ ಪಕ್ಷ ಆ ಬಡ ಕುಟುಂಬಕ್ಕೆ ಸಾಂತ್ವನ ಹೇಳುವ ಕಾಳಜಿಯನ್ನೂ ಅವರು ತೋರಿಸಿಲ್ಲ, ಮೈಮೇಲೆ ಬಿದ್ದು ಕೇಳಿದರೆ ಅಧಿಕಾರಸ್ಥ ಹೊಣೆಗೇಡಿ ಧಾಟಿಯಲ್ಲಿ 'ಇದುವರೆಗೂ ಈ ವಿಷಯ ನನ್ನ ಗಮನಕ್ಕೆ ಬಂದಿಲ್ಲ, ಅವರ ಪಾಲಕರನ್ನು ಕರೆಯಿಸಿ ಮಾತನಾಡುತ್ತೇನೆ. ಸರಕಾರದಿಂದ ಪರಿಹಾರ ಒದಗಿಸಲು ಪ್ರಯತ್ನಿಸುತ್ತೇನೆ' ಎಂಬ ಉತ್ತರ ನೀಡಿ ಸುಮ್ಮನಾಗಿದ್ದಾರೆ.

ಹೆಸರಾಂತ ರಾಜಕಾರಣಿಯೊಬ್ಬರ ಕಾರು ಚಾಲಕನಾ
ಬದುಕು ಸವೆಸಿ ಬಂದಿರುವ ಶಿವರಾಜ್ ತಂಗಡ
ಸಚಿವನಾದ ಮಾತ್ರಕ್ಕೇ 'ಕರೆಸಿ ಮಾತಾಡುತ್ತೇ
ಪ್ರಯತ್ನಿಸುತ್ತೇನೆ' ಎಂಬಿತ್ಯಾದಿ ಬಿಷ ಮಾತುಗಳಲ್ಲೆ ತ
ಮುಚ್ಚಿಕೊಳ್ಳಲು ಹವಣಿಸುತ್ತಿರೋದ ದೊಡ್ಡ ದುರಂತ

ತಗಡಿನ ಶೆಡ್‌ನಲ್ಲಿ ಜೀವನ ನಡೆಸುತ್ತಿರುವ ದಲ
ಕುಟುಂಬಕ್ಕೆ ಕೂಲಿಯೇ ಜೀವನಾಧಾರ. ಕಷ್ಟದ
ಕೈತೊಳೆಯುತ್ತಿರುವ ಪಾಲಕರಿಗೆ ಮಗನ ಕಣ್ಣು ಹೋದು
ಬರಸಿಡಿಲಿನಂತೆ ಎರಗಿದೆ. ಏನೊಂದು ತಿಳಿಯ
ಕುಟುಂಬದಲ್ಲೀಗ ಆತಂಕ ಮಡುಗಟ್ಟಿದೆ.

• ಗಿರೀಶ್ ತಾಳಿಕಟ

10<<< ಶೃತಿ ಮದುವೆ..

ಹಾಕಲು ಹೋಗಿ ಒದೆ ತಿಂದಿದ್ದ. ಕ್ರಮೇಣ ಸಿನಿಮಾ ರಿಪೋರ್ಟರ್ ಎಂದು ಪೋಜು ಕೊಡುತ್ತಲೇ ಸವಕಲು ಟೀವಿ ನಟಿಯರು, ಹೀರೋಯಿನ್ ಆಕಾಂಕ್ಷಿ ಯುವತಿಯರನ್ನು ಪಾರ್ಟಿ (!) ಕೊಡಿಸುವಂತೆ ಪೀಡಿಸುತ್ತಿದ್ದ. ಯಾರೋ ಗಾಯಕನೊಬ್ಬನ ಪತ್ನಿ, ಇನ್ನಾರೋ ಕಲಾವಿದೆ, ಹೀಗೆ ಗಾಂಧಿನಗರದ ತುಂಬ ಚಂದ್ರಚೂಡನ ಮದನಾಂತಕ ಸಾಹಸಗಳದ್ದೇ ರಸವತ್ತು ಕತೆಗಳಿದ್ದವು.

ವಿಚಿತ್ರವೆಂದರೆ ಈ ಹೊತ್ತಿಗಾಗಲೇ ಚಂದ್ರಚೂಡ್‌ಗೆ ಮದುವೆಯಾಗಿತ್ತು.

ಹಾಸನದಲ್ಲಿ ಟಿಸಿಎಚ್ ಮಾಡುತ್ತಿದ್ದ ಮಂಜುಳಾ ಎಂಬ ಯುವತಿಯನ್ನು 'ಲವ್' ನಾಟಕವಾಡಿ ಮದುವೆಯಾಗಿದ್ದ ಚಂದ್ರಾಚಾರಿಗೆ ತನಗೊಬ್ಬಳು ಮಗಳಿದ್ದಾಳೆ ಎಂಬುದು ಕೂಡ ನೆನಪಾಗದಂಥ ಹೆಣ್ಣು ಬಾಕ ಪಿತ್ತ ನೆತ್ತಿಗೇರಿತ್ತು, ಅದಕ್ಕೆ ಬಲಿಯಾದವಳು ಅಮಾಯಕ ನಟಿ ಶೃತಿ. ಗಂಡಹೆಂಡಿರ ಮಧ್ಯೆ ಮನಸ್ತಾಪ ಎಲ್ಲಿರುವುದಿಲ್ಲ? ಆದರೆ ಪ್ರಳಯಾಂತಕ ಚಂದ್ರಾಚಾರಿಗೆ ಅದೆಂಥಾ ಅನ್ಯೋನ್ಯ ಸಂಸಾರಕ್ಕೂ ಹುಳಿ ಹಿಂಡುವುದು ಕಷ್ಟವೇನಲ್ಲ, ಅದೆಷ್ಟೇ ಆತ್ಮೀಯ ಸ್ನೇಹಿತರಿದ್ದರೂ ಚಿಟಿಕೆ ಹೊಡೆಯುವುದರೊಳಗಾಗಿ ಅವರ ನಡುವೆ ಅಪನಂಬಿಕೆ, ಅನುಮಾನ ಸೃಷ್ಟಿಸಿ ವಂಚಿಸುವುದು ಆತನ ಹುಟ್ಟುಗುಣ.

ಬಿಜೆಪಿ ಅಧಿಕಾರಕ್ಕೆ ಬಂದು ಶೃತಿ ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷೆಯಾಗಿದ್ದೇ ತಡ ಆಕೆಯ ಪರ್ಸನಲ್ ಸೆಕ್ರೆಟರಿಯೆಂದು ಓಡಾಡಿಕೊಂಡಿದ್ದ ಚಂದ್ರಾಚಾರಿ ಗಂಡಹೆಂಡಿರ ಮಧ್ಯೆ ತಂದಿಡಲು ವಿಲಕ್ಷಣ ಟೆಕ್ನಿಕ್ ಬಳಸಿದ್ದ. ಅದು ಮಹೇಂದರ್‌ಗೆ ಬೆಳಗಾವಿಯಲ್ಲಿ ಯಾರೋ ಪ್ರೇಯಸಿಯಿದ್ದಾಳೆ ಎಂಬ ಕಟ್ಟುಕತೆ. ತಾನೇ ಓಡಾಡಿಸಿದ್ದ ಹೆಂಗಸೊಬ್ಬಳನ್ನು ಮಹೇಂದರ್‌ನ ಪ್ರೇಯಸಿ ಎಂಬಂತೆ ಚೂಡ್ ಸೃಷ್ಟಿಸಿದ್ದ!

೪೦ ಲಕ್ಷದ ಫಜೀತಿ!

ಹೀಗೆ ಶೃತಿಯಿಂದ ಮಹೇಂದರ್‌ನನ್ನು ಬೇರ್ಪಡಿಸಿದ ಚಂದ್ರಾಚಾರಿ ಮಾಡಿದ ಮತ್ತೊಂದು ಅನಾಚಾರವೆಂದರೆ ಕಾನೂನುಬದ್ಧವಾಗಿ ಡೈವೋರ್ಸ್ ಪಡೆಯದೆಯೇ 2009 ರಲ್ಲಿ ಶೃತಿಯನ್ನು ತಿರುಪತಿಗೊಯ್ದು ತಿಮ್ಮಪ್ಪನ ಸನ್ನಿಧಿಯಲ್ಲೇ ಶಾಸ್ತ್ರೋಕ್ತವಾಗಿ ಮದುವೆಯಾಗಿದ್ದು. ಚೂಡ್ ಆ ಹೊತ್ತಿಗೆ ಅರ್ಧ ಕಪ್ ಕಾಫಿಗೂ ಭಿಕ್ಷೆ ಎತ್ತುತ್ತಿದ್ದ ಉಂಡಾಡಿ. ಅವತ್ತು ತಿರುಪತಿಯಲ್ಲಿದ್ದ ಕನ್ನಡ ಚಿತ್ರರಂಗದ ಅನೇಕ ಹಿರಿಕಿರಿ ಕಲಾವಿದರಿಗೆಲ್ಲ ಇದು ಅಚ್ಚರಿಯ ಆಘಾತವಾಗಿತ್ತು, ನಟ ಉಮಾಶ್ರೀಯಂತೂ 'ಯಾಕಮ್ಮಾ ಈ ರೀತಿ ಫಜೀತಿ ಮಾಡ್ಕೊಂಡೆ...?' ಅಂತಲೇ ರೇಗಿ ತಲೆ ಚಚ್ಚಿಕೊಂಡಿದ್ದರು.

ಅದೇ ಹುಮ್ಮಸ್ಸಿನಲ್ಲಿ ಬೆಂಗಳೂರಿಗೆ ಬಂದು ಕಂಡಕಂಡ ಟೀವಿಗಳಿಗೆಲ್ಲ ಶೃತಿ ಪಕ್ಕ ಕೂತು ವೀರಾವೇಶದ ಇಂಟರ್‌ವ್ಯೂ ಕೊಟ್ಟ ಚಂದ್ರಾಚಾರಿ ಎಂಥಾ ಫಜೀತಿ ತಂದಿಟ್ಟಿದ್ದನೆಂದರೆ; ಟೀವಿಗಳಲ್ಲಿ ಬರುತ್ತಿದ್ದ ಜೋಡಿ ಪ್ರಲಾಪಗಳನ್ನು ಕಂಡ ಶೃತಿಯ ವಕೀಲರೇ 'ಏನಮ್ಮಾ ಜೈಲಿಗೆ ಹೋಗ್ಬೇಕು ಅಂತಿದ್ದೀಯಾ? ಡೈವೋರ್ಸ್ ಕೊಡದೇ ಮದುವೆಯಾಗೋದು ಅಪರಾಧ ಅನ್ನೋದು ಗೊತ್ತಿಲ್ವಾ?' ಎಂದು ಹಣೆ ಚಚ್ಚಿಕೊಂಡಿದ್ದರು. ಅಂತಿಮವಾಗಿ ಇದೇ ಶೃತಿ ಪಾಲಿಗೆ ಮುಳುವಾಯಿತು. ಡೈವೋರ್ಸ್ ಕೊಡದೇ ಕಾನೂನುಬಾಹಿರವಾಗಿ ತಿರುಪತಿಯಲ್ಲಿ ಮದುವೆಯಾದ ಪತ್ರಿಕಾ ವರದಿಗಳು, ಟೀವಿ ತುಣುಕುಗಳನ್ನೇ ಶೃತಿ-ಚೂಡ್ ಅನೈತಿಕ ಸಂಬಂಧದ ಸಾಕ್ಷ್ಯಾಧಾರವಾಗಿ ಮಹೇಂದರ್ ಕೇಸು ದಾಖಲಿಸಿದ್ದರು.

ಇನ್ನೇನು ವಿವಾಹಬಾಹಿರ ಸಂಬಂಧ ಕೋರ್ಟಿನಲ್ಲಿ ಸಾಬೀತಾಯಿತು ಎನ್ನುವ ಪರಿಸ್ಥಿತಿಯಲ್ಲಿ ಫಜೀತಿಗೆ ಬಿದ್ದ ಶೃತಿ ತನ್ನ ಬಸವೇಶ್ವರ ನಗರದ ಮನೆಯ ಮಾರುಕಟ್ಟೆ ಮೌಲ್ಯದ ಅರ್ಧ ಭಾಗವೆಂದು ಮಹೇಂದರ್‌ಗೆ 40 ಲಕ್ಷ ಪರಿಹಾರ ತೆತ್ತು ಬಚಾವಾಗಬೇಕಾಯ್ತು, ಇಲ್ಲದಿದ್ದರೆ ಚಂದ್ರಾಚಾರಿ ಜೊತೆ ಶೃತಿ ಕೂಡ ಜೈಲು ಪಾಲಾಗಬೇಕಿತ್ತು, ಏಕೆಂದರೆ ಚಂದ್ರಾಚಾರಿ ಕೂಡ ತನ್ನ ಪತ್ನಿಗೆ ಡೈವೋರ್ಸ್ ನೀಡದೆಯೇ ಶೃತಿ ಜೊತೆ ಮದುವೆಗಿಳಿದಿದ್ದ ಮತ್ತು ಅದನ್ನು ಟೀವಿಗಳಲ್ಲಿ ಕೊಚ್ಚಿಕೊಂಡೂ ಇದ್ದ.

ವಿವಾಹಬಾಹಿರ ಅನೈತಿಕ ಮತ್ತು ಅಕ್ರಮ ಸಂಬಂಧದ ಕುಣಿಕೆಯಿಂದ ಬಚಾವಾಗಲು 40 ಲಕ್ಷ ಕೈ ಬಿಡುವಂಥ ಫಜೀತಿಯನ್ನು ಖದೀಮ ಚಂದ್ರಾಚಾರಿ ತಂದಿಟ್ಟಿದ್ದ. ಅದ್ಯಾವ ವಿಷ ಗಳಿಗೆಯಲ್ಲಿ ಶೃತಿ ಬದುಕಿಗೆ ಲಫಂಗ ಚೂಡನ ಆಗಮನವಾಯಿತೋ ಆಕೆಯ ಅದೃಷ್ಟದ ಅಕೌಂಟೇ ಖಾಲಿಯಾಗಿತ್ತು, ಹೋದಲ್ಲೆಲ್ಲ ಅವಮಾನ. ಅಪನಿಂದೆ. ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷಗಿರಿಯಿಂದಲೇ ಪದಚ್ಯುತಿಗೊಳಿಸಲಾಯ್ತು. ಬಿಜೆಪಿಯಿಂದ ಉಚ್ಚಾಟಿಸಲಾಯ್ತು, ಇದ್ದಬಿದ್ದ ಸಿನಿಮಾ ಅವಕಾಶಗಳೂ ಕೈಬಿಟ್ಟವು. ಒಂದೆರಡು ಟೀವಿ ಸೀರಿಯಲ್ಲುಗಳಿಗೆಂದು ಕೊಟ್ಟ ಅಡ್ವಾನ್ಸನ್ನೂ ಬಿಡದೇ ಪ್ರೊಡ್ಯೂಸರುಗಳು ಕಿತ್ಕೊಯ್ದರು. ಶೃತಿ ಬಗ್ಗೆಯೇ ಸಾಮೂಹಿಕ ಬೇಸರ ಶುರುವಾಗಿತ್ತು.

ಚಂದ್ರಾಚಾರಿ ರೊಕ್ಕಸ್ಥನೂ ಅಲ್ಲ, ಶ್ರೀಮಂತನೂ ಅಲ್ಲ, ಹುಟ್ಟಾ ವಂಚಕ ಮತ್ತು ಹೆಣ್ಣುಬಾಕ. ಹೋಗಲಿ ಸ್ಫುರದ್ರೂಪಿಯಾ? ಕುಳ್ಳಗೆ, ಸದಾಕಾಲ ಕುಡುಕನಂತೆ-ನಿದ್ದೆಗೆಟ್ಟಂತೆ ಕಣ್ಣು ಕೆಂಪಗೆ ಮಾಡಿಕೊಂಡು, ಬಳೆಸದ್ದಿಗೆ ಜೊಲ್ಲು ಸುರಿಸುವ ಧೇಟು ವಿಕೃತಕಾಮಿ ಉಮೇಶ್ ರೆಡ್ಡಿಯ ಅಣ್ಣನೋ ತಮ್ಮನೋ ಎನ್ನುವಂತಿದ್ದಾನೆ.

ಶೃತಿ ಹೆಸರಿನಲ್ಲಿ ರೋಲ್‌ಕಾಲ್

ಇದಕ್ಕಾಗಿ ತನ್ನ ವರ್ಚಸ್ಸು, ಸ್ಟಾರ್ ಇಮೇಜ್, ರಕ್ತ ಸಂಬಂಧ, ಸಾಮಾಜಿಕ ಬದುಕು, ಕ್ಯಾರೆಕ್ಟರ್ ಮತ್ತು ಜನರಿಟ್ಟ ಅಭಿಮಾನಗಳೆಲ್ಲವನ್ನೂ ಒಂದು ತಕ್ಕಡಿಯಲ್ಲಿಟ್ಟು ಮತ್ತೊಂದು ತಕ್ಕಡಿಯಲ್ಲಿ ಚಂದ್ರಾಚಾರಿಯನ್ನಿಟ್ಟು ತೂಗುವಷ್ಟು ಯೋಗ್ಯನಾಗಲಿ, ಸಭ್ಯನಾಗಲಿ ಆತನಾಗಿರಲೇ ಇಲ್ಲ. ತಿದ್ದಿಕೊಳ್ಳಲು ಶೃತಿಗೆ ಸಾಕಷ್ಟು ಅವಕಾಶಗಳಿದ್ದವು. ಪ್ರಪಂಚ ವಿಶಾಲವಾಗಿತ್ತು, ಕಾಲ ಅನಂತವಾಗಿತ್ತು. ಕಣ್ಣೆದುರೇ ಬೇಕಾಬಿಟ್ಟಿ ಆಯ್ಕೆಗಳಿದ್ದವು. ಚಂದ್ರಾಚಾರಿಗಿಂತಲೂ ಸಜ್ಜನರು, ಸದ್ಗುಣಿಗಳು, ರೂಪಸ್ಥರು, ರಸಿಕರು, ಸುಸಂಸ್ಕೃತರಿದ್ದರು. ಆದರೆ ಕೇಡುಗಾಲಕ್ಕೆ ಬುದ್ಧಿ ಮಟ್ಟ-

ಬಹುಶಃ ಆಕೆಯ ಅಸಹಾಯಕತೆಯಿರಬೇಕು. ಚೂಡ್ ತನ್ನದೊಂದು ಸೀಡಿ ಮಾಡಿಟ್ಟುಕೊಂಡಿದ್ದೇನೆಂದು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾನೆ, ತನಗೆ ಮನೆ ಖರ್ಚಿಗೆ ದುಡ್ಡಿಲ್ಲ ಎಂದು ಕಂಡಕಂಡವರಿಂದ ದುಡ್ಡೆತ್ತುತ್ತಿದ್ದಾನೆಂದು ಮಹಿಳಾ ಪತ್ರಕರ್ತೆಯೊಬ್ಬರ ಬಳಿ ಪದೇಪದೇ ಗೋಳಾಡುತ್ತಿದ್ದರು. ಅದಕ್ಕೆ ತಕ್ಕಂತೆ ಚಂದ್ರಾಚಾರಿ ಶೃತಿಯವರ ಖಾಸಗಿ ಬಳಕೆಯ ಕಾರನ್ನು ಪ್ರಮುಖ ಚಿತ್ರೋದ್ಯಮಿಗಳು ಮತ್ತು ಪುಢಾರಿಗಳ ಮನೆಯೆದುರು ನಿಲ್ಲಿಸಿ 'ಶೃತಿಯವರು ಗಾಡಿಯಲ್ಲಿದ್ದಾರೆ, ಪಾಪ ಜನ ಏನೆಂದುಕೊಳ್ತಾರೋ ಅಂತ ಭಯ ನೋಡಿ, ಒಂದಿಪ್ಪತ್ತು ಸಾವಿರ ಇದ್ರೆ ಕೊಟ್ಟಿರಿ... ಅವರು ಸಾಯಿಬಾಬಾ ದರ್ಶನಕ್ಕೆ ಶಿರಡಿಗೆ ಹೋಗಬೇಕು ಅಂತ ತುಂಬಾ ಆಶೆ ಪಡ್ತಿದ್ದಾರೆ. ನಿಮ್ಹತ್ರ ಸಾಲ ಕೇಳಿ ಅಂತ ಅವರೇ ಹೇಳಿದ್ರು....!' ಎಂದು ವಸೂಲಿಗಿಳಿದಿದ್ದ.

ಇದು ಗೊತ್ತಾಗಿದ್ದೇ ಶೃತಿ ತಂದೆ ಕೃಷ್ಣ ಆತನನ್ನು ಮನೆಗೆ ಸೇರಿಸದಂತೆ ಪದೇಪದೇ ಮಗಳಿಗೆ ಎಚ್ಚರಿಸಿದ್ದರು. ಚಂದ್ರಾಚಾರಿಯನ್ನು ಮನೆಯೊಳಕ್ಕೆ ಬಿಡದಂತೆ ಕೆಲಸಗಾರರನ್ನು ಬೈದಿದ್ದರು. ಒಂದು ಹಂತದಲ್ಲಿ ಶೃತಿ ಕೂಡ ರೋಸತ್ತು ಮನೆಗೇ ಬರಬೇಡ ಎಂದು ಹೊರದಬ್ಬಿದ್ದೂ ಆಗಿತ್ತು, ಹಾಗಂತ ಚಂದ್ರಾಚಾರಿ ಬಿಡಬೇಕಲ್ಲ, ತನ್ನ ತಮ್ಮ ಭರತ್ ಎಂಬಾತನ ಜೊತೆ ಒಂದಷ್ಟು ಪುಡಿ ರೌಡಿಗಳನ್ನು ಜೊತೆ ಮಾಡಿ ಶೃತಿ ಮನೆ ಮೇಲೆ ಕಲ್ಲು ತೂರಿಸಿದ್ದ. ಪದೇಪದೇ ಫೋನ್ ಮಾಡಿ ನಿನ್ನ ಹೆಸರು ಬರೆದಿಟ್ಟು ಆತ್ಮಹತ್ಯೆ ಮಾಡಿಕೊಳ್ತೀನಿ ಅನ್ನುತ್ತಿದ್ದ. ಚಂದ್ರಚೂಡನ ಕೆಲ ಸಹಚರರೇ ಹೇಳುವಂತೆ ಶೃತಿ ಜೊತೆ ಮದುವೆಯಾಗಿದ್ದೀನಿ, ಶೃತಿ ತನ್ನ ಪತ್ನಿ ಎಂದು ಹೇಳಿಕೊಳ್ಳುತ್ತಲೇ ಚಂದ್ರಾಲೇಔಟಿನಲ್ಲಿದ್ದ ತನ್ನ ರೂಮಿಗೆ ಯಾರ್‍ಯಾರೋ ಹೆಂಗಸರನ್ನು ಕರೆಸಿಕೊಳ್ಳುತ್ತಿದ್ದ. ಆತನ ಸಹವಾಸದಿಂದ ದೂರವಿರುವಂತೆ ಒತ್ತಾಯಿಸಿ ತಂದೆ ಮಗಳ ಮಧ್ಯೆ ಪದೇಪದೇ ಜಗಳವಾಗುತ್ತಿತ್ತು, ಅದೊಮ್ಮೆ ವಿಕೋಪಕ್ಕೆ ಹೋಗಿ ತನ್ನ ಕಾರೆತ್ತಿಕೊಂಡು ನಾಪತ್ತೆಯಾದ ತಂದೆ ಕೃಷ್ಣ ರಾತ್ರಿಯಿಡೀ ನೆಲಮಂಗಲ ರಸ್ತೆಯಲ್ಲೇ ಕಾಲ ಕಳೆದು ಕೊನೆಗೆ ಶೃತಿ ತಮ್ಮ ಶರಣ್ ಹುಡುಕಾಡಿ ಕರೆತರಬೇಕಾಯಿತು.

ಒದೆ ತಿಂದು ಚೂಡ್ ಪರಾರಿ

ಇಲ್ಲಿಗೆ ಎರಡು ತಿಂಗಳ ಹಿಂದೆ ಚಂದ್ರಾಚಾರಿ
ಜೊತೆ ಶೃತಿ ತನ್ನ ಮೊಬೈಲಿನಲ್ಲಿ ಮಾತಾಡಿದಳೆಂ
ಗೊತ್ತಾಗಿದ್ದೇ ತಂದೆ ಕೃಷ್ಣ ಮುಷ್ಕಿ ತುಂಬ ನಿದ್ರೆ ಮ
ಕೈಗೆತ್ತಿಕೊಂಡಿದ್ದೇ ರೂಮೊಂದನ್ನು ಹೊಕ್ಕಿ ಬೋ
ಹಾಕಿಕೊಂಡು ಪ್ರಜ್ಞೆ ತಪ್ಪಿ ಬಿದ್ದಿದ್ದರು. ಕೊನೆಗೆ ಶ
ಮತ್ತಾತನ ಗೆಳೆಯರು ಬಂದು ಬಾಗಿಲು ಒಡ
ತಂದೆಯನ್ನೊಯ್ದು ಆಸ್ಪತ್ರೆಗೆ ಸೇರಿಸಬೇಕಾಯ್ತು.

ಇಷ್ಟೆಲ್ಲ ತರಲೆ, ತಾಪತ್ರಯಗಳ ನಡುವೆಯೂ ಹ
ಚೂಡನನ್ನು ಶೃತಿ ಮದುವೆಯಾಗುತ್ತಾರೆಂದರೆ
ಆಕೆಯ ಅಸಹಾಯಕತೆಯಲ್ಲದೆ ಮತ್ತೇನು?

ಮದುವೆಗೆಂದು ಚೂಡ್ ಆಯ್ಕೆ ಮಾಡಿಕೊ
ಜಾಗವಾದರೂ ಎಂಥಾದ್ದು? ಯಾರೂ ಓಡಾಡದ ಶಿವ
ಜಿಲ್ಲೆ ಹೊಸನಗರದ ಕಾಡಿನಂಚಿನ ಬಾಣಿಗ ಎಂಬ ಗ್ರಾ
ನಿರ್ಜನ ದೇವಸ್ಥಾನವನ್ನು. ಈಗಾಗಲೇ ತಿರುಪತಿಯಲ್ಲೂ
ಶಾಸ್ತ್ರೋಕ್ತವಾಗೇ ಮದುವೆಯಾಗಿದೆ. ಹಾಗಿದ್ದೂ ಮತ್ತೊ
ಮದುವೆಯಾಗಬೇಕಾದ ಯಾವುದೇ ಕಾರಣಗಳಿಲ್ಲ. ಬಾ
ಗ್ರಾಮದ ಆಂಜನೇಯಸ್ವಾಮಿ ದೇವಸ್ಥಾನದ ಪಾವಿತ್ರ್ಯ ವ
ಮಹತ್ವ ಗೊತ್ತಿದ್ದ ಗ್ರಾಮಸ್ಥರು ಶೃತಿ ಚಂದ್ರಚೂಡನ
ದುಷ್ಟನನ್ನು ಕದ್ದುಮುಚ್ಚಿ ಮದುವೆಯಾಗುತ್ತಿದ್ದಾಳೆಂಬ
ತಿಳಿದದ್ದೇ ರೊಚ್ಚಿಗೆದ್ದಿದ್ದಾರೆ.

'ಇದು ಪವಿತ್ರ ಸ್ಥಳ. ಇಲ್ಲಿ ಕದ್ದೂವ
ಮದುವೆಯಾಗುವುದೇ ಅಪರಾಧ. ಹೋಗಿಹೋಗಿ
ಲೋಫರ್ ನನ್ ಮಗನ್ನ ಕಟ್ಟಿಕೊಳ್ಳೋಕೆ ನಮ್ಮೂ
ದೇವಸ್ಥಾನದ ಹೆಸರೇಕೆ ಹಾಳು ಮಾಡ್ತಿಯಮ್ಮಾ?
ದಿನ ಇವನು ಆಸ್ತಿಗೋಸ್ಕರ ನಿನ್ನನ್ನ ಕೊಲೆ ಮಾ
ಅನ್ನೋದಕ್ಕೆ ಏನು ಗ್ಯಾರಂಟಿ?' ಎಂದು ಬಾಣಿಗದ
ಶೃತಿ ಮೇಲೆ ಏರಿಹೋಗಿದ್ದಾರೆ. ಅಡ್ಡ ಬಂದು ಏನೇ
ಸಮಜಾಯಿಷಿ ಕೊಡಲೆತ್ನಿಸಿದ ಚೂಡ್‌ನನ್ನು ಗ್ರಾಮ
ಅಟ್ಟಾಡಿಸಿ ಹೊಡೆದಿದ್ದಾರೆ. ಒದೆ ತಾಳಲಾರದೆ ಎ
ಬಿದ್ದು ಓಡಿಬಂದ ಚೂಡ್ ಹೋದ ಕಾರ
ಪರಾರಿಯಾಗಿದ್ದಾನೆ. ಹಾಗಂತ ಇಟ್ಟ ಮುಹೂ
ಎಕ್ಕುಡಬಾರದಲ್ಲ; ಕೊಲ್ಲೂರಿನ ಅರ್ಚಕನೊಬ್ಬ
ರಾತ್ರೋರಾತ್ರಿ ಮದುವೆ ಏರ್ಪಾಟು ಮಾಡುವಂತೆ
ಏಜೆಂಟ್ ಮಿತ್ರನೊಬ್ಬನ ಮೂಲಕ ಚೂಡ್ ಸ
ಮಾಡಿದ್ದಾನೆ. ಒಟ್ನಾರೆ ಮದುವೆಯಂತೂ ಮುಗಿದಿ

ಶೃತಿಯ ಸ್ವಯಂಕೃತಾಪರಾಧಕ್ಕೆ ಮರುಕ ಪಡುವುದ
ಬೇರೆ ತಾನೇ ಯಾರೇನು ಮಾಡಲು ಸಾಧ್ಯ?

• ರಾ. ಸೋಮನಾ

ಮಹೇಂದ್ರ ಕರ್ಮ- ಕೊಲೆಪಾತಕಿಗೆ ಹುತಾತ್ಮ ಪಟ್ಟ

ಮೇ 25ರಂದು ಛತ್ತೀಸ್‌ಗಢ ರಾಜ್ಯದ ಸುಕ್ಮಾ ...ಯಲ್ಲಿ ಮಾವೋವಾದಿ ಗೆರಿಲ್ಲಾಗಳು ಮತ್ತೊಂದು ...ನಕ ದಾಳಿ ನಡೆಸಿದ್ದಾರೆ. ಈ ಘಟನೆಯಲ್ಲಿ ಕಾಂಗ್ರೆಸ್ ... ಧುರೀಣ, ಮಾಜಿ ಕೈಗಾರಿಕಾ ಮಂತ್ರಿ ಮಹೇಂದ್ರ ..., ಕಾಂಗ್ರೆಸ್‌ನ ರಾಜ್ಯಾಧ್ಯಕ್ಷ ನಂದಕುಮಾರ್ ಪಟೇಲ್ ... ಆತನ ಮಗ ದಿನೇಶ್‌ನನ್ನೂ ಒಳಗೊಂಡಂತೆ ... 27 ಮಂದಿ ದಾರುಣ ಅಂತ್ಯ ಕಂಡಿದ್ದಾರೆ. ಕೇಂದ್ರದ ... ಸಚಿವ ವಿ.ಸಿ.ಶುಕ್ಲಾ ಸೇರಿದಂತೆ ಹಲವರು ...ರವಾಗಿ ಗಾಯಗೊಂಡಿದ್ದಾರೆ. ಈ ಹಿಂಸೆಯನ್ನು ...ವಾದರೂ ಖಂಡಿಸಲೇಬೇಕು.


...ಳಿವಯಸ್ಸಿನಲ್ಲಿರುವ ವಿ.ಸಿ.ಶುಕ್ಲಾ ಎಂದರೆ ಮಾಮೂಲಿ ...ನುಲ್ಲ. ಈ ದೇಶದ ರಾಜಕಾರಣಕ್ಕೆ ಭಾರೀ ...ಬಗೆಗಳನ್ನು ಕೊಟ್ಟಿರುವ ವ್ಯಕ್ತಿ. ಕರಾಳ ತುರ್ತು ...ತಿಯ ಸಂದರ್ಭದಲ್ಲಿ ಕೇಂದ್ರದ ವಾರ್ತಾ ಮತ್ತು ...ವ ಇಲಾಖೆಯ ಹೊಣೆ ಹೊತ್ತಿದ್ದವರು. ಇವರೆಲ್ಲ ...ನಮ್ಮ ಪ್ರಜಾಪ್ರಭುತ್ವವನ್ನು ಯಾವ ರೀತಿ ಉದ್ಧಾರ ...ದ್ದಾರೆ ಎಂಬುದು ಬೇರೆ ವಿಚಾರ.

...ದೇ ಡಿಸೆಂಬರ್ ತಿಂಗಳಿನಲ್ಲಿ ನಡೆಯಲಿರುವ ...ಸ್‌ಗಢ ವಿಧಾನಸಭಾ ಚುನಾವಣೆಯ ...ರ್ತಯಾರಿಯಾಗಿ ಈಗ ವಿರೋಧ ಪಕ್ಷದ ...ಲ್ಲಿರುವ ಕಾಂಗ್ರೆಸ್ ಪಕ್ಷ 'ಪರಿವರ್ತನಾ ರ್‍ಯಾಲಿ'ಯನ್ನು ...ೋಜಿಸಿತ್ತು, ಆ ಸಭೆಯಲ್ಲಿ ಪಾಲ್ಗೊಂಡು ವಾಪಸ್ಸಾಗುತ್ತಿದ್ದ

ಛತ್ತೀಸ್‌ಗಢದಲ್ಲಿ ದಶಕಗಳಿಂದಲೂ ಎಡಬಿಡದೆ ನಡೆಯುತ್ತಿರುವ ಹಿಂಸೆ-ಪ್ರತಿ ಹಿಂಸೆಗಳಿಗೆ ಮೂಲ ಪ್ರೇರೇಪಣೆಯೆಂದರೆ ಅಲ್ಲಿ ಹೇರಳವಾಗಿರುವ ಖನಿಜ ಸಂಪತ್ತು. ಈ ಪ್ರದೇಶದಲ್ಲಿ ಸುಮಾರು 10-15 ಲಕ್ಷ ಕೋಟಿ ಮೌಲ್ಯದ ಅಮೂಲ್ಯ ಖನಿಜ ನಿಕ್ಷೇಪಗಳಿವೆ ಎಂದು ಒಂದು ಅಂದಾಜು. ಆದ್ದರಿಂದ ಈ ಖನಿಜ ನಿಕ್ಷೇಪಗಳು ಹಲವಾರು ದೇಶೀ, ವಿದೇಶಿ ಉದ್ಯಮಿಗಳ ಬಾಯಲ್ಲಿ ನೀರೂರಿಸಿದೆ. ಈಗಾಗಲೇ ಸುಮಾರು 1,50,000 ರೂಪಾಯಿ ಮೌಲ್ಯದ ಒಪ್ಪಂದಗಳಿಗೆ ಸರ್ಕಾರಗಳು ಸಹಿ ಹಾಕಿವೆ.

ಆದರೆ ಈ ಧನದಾಹಿ ಕಂಪನಿಗಳಿಗೆ ತಮ್ಮ ಕಾರ್ಯ ಸಾಧಿಸಲು ಒಂದು ಪ್ರಮುಖವಾದ ತೊಡಕಿದೆ. ಅದೇ ನಕ್ಸಲೀಯ ಸಮಸ್ಯೆ ಹಾಗೂ ಈ ನಕ್ಸಲೀಯರ ಬೆಂಬಲದಿಂದ ಆತ್ಮಸ್ಥೈರ್ಯ ಗಳಿಸಿಕೊಂಡು ಸಂಘಟಿತರಾಗಿರುವ ಆದಿವಾಸಿಗಳು ಈ ಧನಪಿಶಾಚಿಗಳಿಗೆ ಅಡ್ಡಿಯಾಗಿದ್ದಾರೆ.

ಹೀಗಾಗಿ ಛತ್ತೀಸ್‌ಗಢದ ನಕ್ಸಲೀಯ ಸಮಸ್ಯೆಗೆ ಇಂಥದೊಂದು ಹೊಸ ಆಯಾಮ ಸೇರ್ಪಡೆಯಾಗಿದೆ. ಹೀಗಾಗಿ ಇಲ್ಲಿನ ಹಿಂಸಾಚಾರ ಭಿನ್ನವಿಭಿನ್ನ ತಿರುವುಗಳನ್ನು ಪಡೆದುಕೊಳ್ಳುತ್ತಿದೆ. ಈ ಹಿಂಸಾ ಸರಣಿಯಲ್ಲಿ ಸಾವಿರಾರು ಆದಿವಾಸಿಗಳು ಹಾಗೂ ನಕ್ಸಲೀಯರು ಪ್ರಾಣ ತೆತ್ತಿದ್ದಾರೆ. ಹಾಗೇ ನೂರಾರು ಪೊಲೀಸರು ಹಾಗೂ ಪ್ರಭುತ್ವ ಪಡೆಗಳು ಸಾವಿಗೀಡಾಗಿದ್ದಾರೆ. ಅದರ ಮುಂದುವರೆದ ಭಾಗವೇ ಮೊನ್ನೆ




ಯಾತ್ರೆ ಎಂದರ್ಥ. ಆದಿವಾಸಿಗಳನ್ನು ಕಾಡಿನಿಂದ ಒಕ್ಕಲೆಬ್ಬಿಸಿ ತಮ್ಮ ಹಾದಿ ಸುಗಮ ಮಾಡಿಕೊಳ್ಳಲು ಇಂಥಾ ಯಾತ್ರೆಯೊಂದನ್ನು ಛತ್ತೀಸ್‌ಗಢ ಸರ್ಕಾರ ಮಹೇಂದ್ರ ಕರ್ಮನ ನಾಯಕತ್ವದಲ್ಲಿ ನಡೆಸಿತು.

ಕೆಲವಾರು ದಶಕಗಳಿಂದ ಗಟ್ಟಿಯಾಗಿ ಬೇರೂರಿರುವ ನಕ್ಸಲೀಯ ಚಳವಳಿಯನ್ನು ನಿರ್ನಾಮ ಮಾಡುವುದಾಗಿ ಪದೇಪದೇ ಘೋಷಿಸಿದ್ದರೂ ಸಹ ಅದರಲ್ಲಿ ಯಾವುದೇ ಪ್ರಗತಿ ಕಾಣದ ಸರ್ಕಾರ ಒಂದು ಘನಘೋರ ಸಂಚೊಂದನ್ನು ರೂಪಿಸಿತ್ತು, ಆದಿವಾಸಿಗಳಿಂದಲೇ ಆದಿವಾಸಿಗಳನ್ನು ನಾಶ ಮಾಡುವುದೇ ಈ ಷಡ್ಯಂತ್ರ. ಇದರ ಪ್ರಮುಖ ರೂವಾರಿ ಹಾಗೂ ಅಧಿನಾಯಕನೇ ಮಹೇಂದ್ರ ಕರ್ಮ.

ಆದಿವಾಸಿಗಳಲ್ಲಿ ಹಾದಿ ತಪ್ಪಿದ್ದ, ದುಶ್ಚಟಗಳಿಗೆ ಬಲಿಯಾಗಿದ್ದ ಪುಂಡರನ್ನೆಲ್ಲ ಒಟ್ಟುಗೂಡಿಸಿ, ಅದಕ್ಕೆ ಸಲ್ವಾ ಜುಡುಂ ಎಂದು ನಾಮಕರಣ ಮಾಡಲಾಯಿತು. ನೇರವಾಗಿ ಸರ್ಕಾರದ ಬೊಕ್ಕಸದಿಂದ ಈ ಪುಂಡರ ಪಡೆಗೆ ಶಸ್ತ್ರಾಸ್ತ್ರಗಳು, ವೇತನ ಹಾಗೂ ಭತ್ಯೆಗಳು ಬಟವಾಡೆಯಾದವು. ಅಂದಹಾಗೆ ಈ ಖಾಸಗಿ ಗೂಂಡಾಗಳನ್ನು ಸ್ಪೆಷಲ್ ಪೊಲೀಸ್ ಆಫೀಸರ್ಸ್ (ಎಸ್ಪಿಓ) ಎಂದು ಕರೆಯಲಾಯಿತು. ಸುಮಾರು 6,500

ಸಾವಿರಾರು ಸಂಖ್ಯೆಯಲ್ಲಿ ಆಯುಧಗಳನ್ನು ಹಿಡಿದು ನುಗ್ಗುತ್ತಿದ್ದ ಈ ದಂಡು 640 ಹಳ್ಳಿಗಳಿಗೆ ಬೆಂಕಿ ಹಚ್ಚಿ ನಾಶಪಡಿಸಿದೆ. ಸಾವಿರಾರು ಮಂದಿಯನ್ನು ಬರ್ಬರವಾಗಿ ಹತ್ಯೆ ಮಾಡಿದೆ. ಸಾವಿರಾರು ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ



ಮಹೇಂದ್ರ ಕರ್ಮನ ಸಲ್ವಾ ಜುಡುಂ ಸುಟ್ಟ ಆದಿವಾಸಿ ಮನೆಗಳು...



ಸಲ್ವಾ ಜುಡುಂ ಶಿಬಿರವೆಂಬ ನರಕ...

...ಸ್ ಪಕ್ಷದ ನಾಯಕರನ್ನು ನಕ್ಸಲೀಯರು ಟಾರ್ಗೆಟ್ ...ದ್ದರು.

...ಈ ಘಟನೆಯ ಸುದ್ದಿ ತಿಳಿದು ಕೇಂದ್ರ ಹಾಗೂ ... ಸರ್ಕಾರಗಳ ಮುಖ್ಯಸ್ಥರು ಬೆಚ್ಚಿಬಿದ್ದಿದ್ದಾರೆ. ಪ್ರಧಾನಿ ...ಮೋಹನ್ ಸಿಂಗ್, ಸೋನಿಯಾ ಗಾಂಧಿ, ರಾಹುಲ್ ... ಮುಂತಾದವರು ಚಿಂತಾಕ್ರಾಂತರಾಗಿದ್ದಾರೆ.

... ವಿಷಯಕ್ಕೆ ಹೋಗುವ ಮೊದಲು ಛತ್ತೀಸ್‌ಗಢದ ...ೀಯ-ಆರ್ಥಿಕ ಅಂಶಗಳ ಕಡೆ ಸ್ವಲ್ಪ ನೋಡುವುದು ...ಸುದು.

ನಡೆದ ಕಾಂಗ್ರೆಸ್ ನಾಯಕರ ಮೇಲಿನ ದಾಳಿ.

ಹಾಗೆ ನೋಡಿದರೆ ಈಗಿನ ನಕ್ಸಲೀಯ ದಾಳಿಯ ಪ್ರಧಾನ ಟಾರ್ಗೆಟ್ ಮಹೇಂದ್ರ ಕರ್ಮ ಮಾತ್ರ. ಹಾಗೆಂದು ನಕ್ಸಲೀಯರೇ ಬಹಿರಂಗವಾಗಿ ಹೇಳಿಕೆ ನೀಡಿದ್ದಾರೆ. ಅದಕ್ಕೆ ಬಲವಾದ ಕಾರಣವೂ ಇದೆ. ಏನೆಂದರೆ ಸಾವಿರಾರು ಆದಿವಾಸಿಗಳ ಮಾರಣಹೋಮ ಮಾಡಿದ 'ಸಲ್ವಾ ಜುಡುಂ'ಗೆ ಈತನೇ ಅಧಿನಾಯಕನಾಗಿದ್ದ.

ಸಲ್ವಾ ಜುಡುಂ ಎಂಬ ಸಾವಿನಯಾತ್ರೆ

ಸಲ್ವಾ ಜುಡುಂ ಎಂದರೆ ಗೋಂಡಿ ಭಾಷೆಯಲ್ಲಿ ಶಾಂತಿ

ಮಂದಿ ಗೂಂಡಾಗಳು ಸರ್ಕಾರಕ್ಕೆ ತಮ್ಮ ಅಧಿಕೃತ ಸೇವೆ ಸಲ್ಲಿಸಿದರು.

ಅವರಿಗೆ ಆಯುಧ ಬಳಸುವ ತರಬೇತಿ ನೀಡಿ, ಯಥೇಚ್ಛವಾಗಿ ಆಯುಧಗಳನ್ನು ಸರಬರಾಜು ಮಾಡಲಾಯ್ತು. ಮಹೇಂದ್ರ ಕರ್ಮನ ನೇತೃತ್ವದ ಈ ಪಡೆ ಅಮಾಯಕ ಆದಿವಾಸಿಗಳ ಮಾರಣಹೋಮ ನಡೆಸಿತು. ನಕ್ಸಲೀಯರ "ಹಾವಳಿ"ಯಿಂದ ಬೇಸತ್ತಿರುವ ಆದಿವಾಸಿಗಳು ನಕ್ಸಲೀಯರು ಹಾಗೂ ಅವರ ಬೆಂಬಲಿಗರ ವಿರುದ್ಧ ತಿರುಗಿ ಬಿದ್ದಿದ್ದಾರೆ ಎಂದು ಮಾಧ್ಯಮಗಳ ಮೂಲಕ ಬಿಂಬಿಸುವಲ್ಲಿಯೂ ಯಶಸ್ವಿಯಾದರು.

ಎಸಗಿದೆ. ನಕ್ಸಲೀಯರನ್ನು ಬೇರ್ಪಡಿಸುವ ಉದ್ದೇಶದಿಂದ ಸುಮಾರು ಒಂದೂವರೆ ಲಕ್ಷಕ್ಕೂ ಹೆಚ್ಚು ಆದಿವಾಸಿಗಳನ್ನು ಕಾಡಿನಿಂದ ಎತ್ತಂಗಡಿ ಮಾಡಿ, ಪುನರ್ವಸತಿ ಹೆಸರಿನಲ್ಲಿ "ಶಿಬಿರ"ಗಳಲ್ಲಿ ಬಂಧಿಸಿಡಲಾಗಿದೆ. ಇಂಥಾ ಭೀಭತ್ಸ ಯಾತ್ರೆಗೆ ಹೆದರಿದ ಲಕ್ಷಾಂತರ ಮಂದಿ ನೆರೆಯ ರಾಜ್ಯಗಳತ್ತ ವಲಸೆ ಹೋಗಿದ್ದಾರೆ. ಬೆಂಗಳೂರಿನ ಬೀದಿಗಳಲ್ಲೂ ಕಟ್ಟಡ ಕೂಲಿಗಳಾಗಿ ಯಥೇಚ್ಛವಾಗಿ ಕಾಣಸಿಗುತ್ತಾರೆ.

ಆದಿವಾಸಿಗಳ ಮೇಲೆ ಇಂಥಾ ಹಿಟ್ಲರ್ ನೀತಿಯ ಪ್ರದರ್ಶನವನ್ನು ಕಣ್ಣಾರೆ ಕಂಡ ಮಾನವಹಕ್ಕು

>>>14

ಮಹೇಂದ್ರ ಕರ್ಮನ ಪೂರ್ವಾಪರ

ಈ ಮಹೇಂದ್ರ ಕರ್ಮನ ತಂದೆ ಇದೇ ಬಸ್ತರ್ ಜಿಲ್ಲೆಯಲ್ಲಿ ಗೋಂಡಿ ಆದಿವಾಸಿ ಮುಖಂಡನಾಗಿದ್ದ. ಈ ...ಂಬ ದೌರ್ಜನ್ಯದಿಂದ ಆದಿವಾಸಿಗಳ ಭೂಮಿಯನ್ನು ಕಸಿಯುವುದರಲ್ಲಿ ಎತ್ತಿದ ಕೈ. ಹೀಗಾಗಿ ನಕ್ಸಲೀಯ ...ಳ ಈ ಭಾಗದಲ್ಲಿ ಕಾಣಿಸಿಕೊಂಡಾಗ ಮಹೇಂದ್ರ ಕರ್ಮ ಮತ್ತು ಅವನ ಕುಟುಂಬ ನಕ್ಸಲೀಯರನ್ನು ...ರೋಧಿಸುತ್ತಾ ಬಂದಿದ್ದು ಅತ್ಯಂತ ಸಹಜವಾಗಿಯೇ ಇತ್ತು.

...ದೇಶದಲ್ಲಿ ಚುನಾವಣಾ ರಾಜಕೀಯ ವಿಸ್ತರಿಸಿದಂತೆ ಮಹೇಂದ್ರ ಕರ್ಮನ ಕುಟುಂಬವೂ ಸಂಪೂರ್ಣ ...ೀಯಕ್ಕಿಳಿಯಿತು. ಪಂಚಾಯತಿಯ ಮೂಲಕ ರಾಜಕೀಯ ಪ್ರವೇಶಿಸಿದ ಕರ್ಮ ಕ್ರಮೇಣ ಕಾಂಗ್ರೆಸ್ ಪಕ್ಷ ಸೇರಿ ...ಎಲ್‌ಎ ಆಗಿ, ಅಜಿತ್ ಜೋಗಿ ಕ್ಯಾಬಿನೆಟ್‌ನಲ್ಲಿ 2000ದಿಂದ 2004ರವರೆಗೆ ಕೈಗಾರಿಕೆ ಮತ್ತು ವಾಣಿಜ್ಯ ...ಖೆಗೆ ಮಂತ್ರಿಯೂ ಆಗಿದ್ದ. ಛತ್ತೀಸ್‌ಗಢ ಕಾಂಗ್ರೆಸ್‌ನ ಒಂದು ಬಣಕ್ಕೆ ಅಜಿತ್ ಜೋಗಿ ನಾಯಕನಾಗಿದ್ದರೆ ...ನ್ನೊಂದು ಬಣಕ್ಕೆ ಕರ್ಮನೇ ನಾಯಕ. 2004ರಿಂದ 2008ರ ಅವಧಿಯಲ್ಲಿ ವಿರೋಧ ಪಕ್ಷದ ಅಧಿಕೃತ ನಾಯಕ ...ಗಿದ್ದ. ಈತನ ಅಣ್ಣ ಲಕ್ಷ್ಮಣ ಕರ್ಮ ಈ ಹಿಂದೆ ಎಂಪಿಯಾಗಿದ್ದ. ಈತನ ಮಗ ದೀಪಕ್ ಕರ್ಮ ಈಗ ಹಾಲಿ ...ವಾಡ ನಗರ ಪಂಚಾಯತಿಯ ಅಧ್ಯಕ್ಷ. ಹೀಗೆ ಈತನ ಕುಟುಂಬ ರಾಜಕಾರಣದಲ್ಲಿ ಚೆನ್ನಾಗಿಯೇ ಪಳಗಿದೆ.

ಕೈಗಾರಿಕಾ ಮಂತ್ರಿಯಾಗಿದ್ದ ಕಾಲದಲ್ಲಿ ಈತನಿಗೆ ರಾಜಕೀಯ ಮಾತ್ರವಲ್ಲದೆ ಹಲವು ಕೈಗಾರಿಕೋದ್ಯಮಿಗಳ ...ಪೂ ಬೆಳೆಯಿತು. ಆ ಉದ್ಯಮಿಗಳು ಛತ್ತೀಸ್‌ಗಢದ ಆದಿವಾಸಿ ಪ್ರದೇಶದಲ್ಲಿರುವ ಲಕ್ಷಾಂತರ ಕೋಟಿ ಮೌಲ್ಯದ ...ಜ ನಿಕ್ಷೇಪದ ಮೇಲೆ ಕಣ್ಣಿಟ್ಟಿದ್ದವರೇ ಆಗಿದ್ದರು. ಉದ್ಯಮಿಗಳ ದುರ್ಲಾಭವನ್ನು ಹೆಚ್ಚಿಸುತ್ತಾ ಅದರಲ್ಲಿ ತಾನೂ ... ಪಾಲುದಾರನಾಗಿದ್ದ ಮಹೇಂದ್ರ ಕರ್ಮನ ದಾರಿಗೆ ಅಡ್ಡವಾಗಿದ್ದ ನಕ್ಸಲೀಯರನ್ನು ನಿವಾರಿಸಿಕೊಳ್ಳಲು ಸೂಕ್ತ ...ಕಾಶಕ್ಕಾಗಿ ಕಾಯುತ್ತಿದ್ದ.

ಬಿಜೆಪಿ ಸರ್ಕಾರ ಅಧಿಕಾರಕ್ಕೇರಿದ ನಂತರ ಅಂಥಾ ಅವಕಾಶ ಆತನಿಗೆ ಪ್ರಾಪ್ತವಾಯಿತು. ಒಂದು ವರದಿಯ ... ಹೇಗದ ಹಗರಣ ಕಳ್ಳಸಾಗಣೆ ಕೇಸಿನಲ್ಲಿ ಸಿಕ್ಕಿಕೊಂಡು, ಅರೆಸ್ಟ್ ಆಗುವ ಪರಿಸ್ಥಿತಿಯಲ್ಲಿದ್ದ ಕರ್ಮನಿಗೆ ಬಿಜೆಪಿ ... ಮತ್ತು ಪೊಲೀಸ್ ಅಧಿಕಾರಿಗಳು ಈಗಾಗಲೇ ತಯಾರಾಗಿದ್ದ ಯೋಜನೆಯೊಂದರ ಜವಾಬ್ದಾರಿಯನ್ನು ...ಸಿದ್ದರು. ಅದೇ 'ಸಲ್ವಾ ಜುಡುಂ' ಎಂದು ಕರೆಯಲಾಗುವ ಭೀಭತ್ಸ ದಮನಕಾಂಡದ ಜವಾಬ್ದಾರಿ.

...ಗೆ ಈಗ, ಹುಟ್ಟಿನಿಂದಲೇ ಅಮಾಯಕರನ್ನು ನಾನಾರೀತಿಯಲ್ಲಿ ಗೋಳುಹುಯ್ದುಕೊಳ್ಳುತ್ತಿದ್ದ ಮಹೇಂದ್ರ ...ಗೆ "ಬಸ್ತರ್ ಟೈಗರ್" ಎಂಬ ಬಿರುದೂ ಇತ್ತು. ಬಹುಶಃ ಈ ಬಿರುದು ಮಾಧ್ಯಮಗಳ ಕೊಡುಗೆಯಾಗಿದ್ದರೂ ...ಲ್ಲಿ. ಹೀಗೆ ... ನಾಣ್ಣುಡಿಯಂತೆ ಮೆರೆದ "ಟೈಗರ್"ನ ಕಥೆ ದಾರುಣವಾಗಿ ಅಂತ್ಯಗೊಂಡಿದೆ.

ಅಭಿವೃದ್ಧಿಯ ಹೀನಸುಳಿ

ಛತ್ತೀಸ್‌ಗಢದ ಗದ್ದುಗೆಯಲ್ಲಿರುವ ರಮಣ್ ಸಿಂಗ್ ನೇತೃತ್ವದ ಬಿಜೆಪಿ ಸರ್ಕಾರ ಹಲವಾರು ದೇಶೀ ಮತ್ತು ವಿದೇಶಿ ಕಂಪನಿಗಳೊಂದಿಗೆ ನಾನಾ ಎಂ.ಒ.ಯು. ಗಳನ್ನು ಮಾಡಿಕೊಂಡಿದೆ. ಕಳೆದ ವರ್ಷದಲ್ಲಾದ ಇಂಥಾ ಒಪ್ಪಂದಗಳ ಸಂಖ್ಯೆ ಬರೋಬ್ಬರಿ 260!

ಇವೆಲ್ಲ ಯಾವುದೋ ಪಡಪೋಶಿ ಕಂಪನಿಗಳು ಎಂದುಕೊಳ್ಳಬೇಡಿ. ಜಿಂದಾಲ್ ಗ್ರೂಪ್, ಟಾಟಾ ಗ್ರೂಪ್, ಆರ್ಸೆಲರ್ ಮಿತ್ತಲ್, ಡಿ ಬೀರ್ಸ್, ವೇದಾಂತ ರಿಸೋರ್ಸಸ್, ಎಸ್ಸಾರ್ ಗ್ರೂಪ್ ಮುಂತಾದ ದೈತ್ಯ ಕಂಪನಿಗಳು ತಾಮುಂದು ನಾಮುಂದು ಎಂಬಂತೆ ಸಾಲುಗಟ್ಟಿ ನಿಂತು ಈ ಒಪ್ಪಂದಗಳನ್ನು ಏರ್ಪಡಿಸಿಕೊಂಡಿವೆ. ಕಳೆದ ದಶಕದಲ್ಲಿ ಪ್ರಾರಂಭವಾದ ಈ ವಿದ್ಯಮಾನ ದಿನೇದಿನೇ ಮತ್ತಷ್ಟು ವಿಸ್ತಾರಗೊಳ್ಳುತ್ತಿದೆ.

ಬೆಂಗಳೂರಿನಂಥ ಆಧುನಿಕ ನಗರಗಳಲ್ಲಿ ಕೈಗಾರಿಕೆ ಸ್ಥಾಪಿಸಲು ರಸ್ತೆ ವಿದ್ಯುತ್, ದೂರಸಂಪರ್ಕ ಮುಂತಾದ ಮೂಲಸೌಕರ್ಯಗಳ ಕೊರತೆಯಿದೆ ಎಂದು ಆರೋಪಿಸುವ ಉದ್ಯಮಿಗಳು ಛತ್ತೀಸ್‌ಗಢದ ದುರ್ಗಮ ಗೊಂಡಾರಣ್ಯದ ಕಡೆ ಪೈಪೋಟಿಯಲ್ಲಿ ಮುಗಿಬೀಳುತ್ತಿರುವುದರ ಹಿಂದಿನ ಒಳಗುಟ್ಟೇನಿರಬಹುದು? ಅತ್ಯಂತ ಹಿಂದುಳಿದ ಛತ್ತೀಸ್‌ಗಢ ರಾಜ್ಯದಲ್ಲಿ ಬಂಡವಾಳ ಹೂಡಿ, ಆ ಬಡ ರಾಜ್ಯವನ್ನು ಅಭಿವೃದ್ಧಿಪಥದತ್ತ ಕೊಂಡೊಯ್ಯಬೇಕೆಂದು ಈ ಶ್ರೀಮಂತ ಉದ್ಯಮಿಗಳಿಗೆ 50 ವರ್ಷಗಳ ನಂತರ ಇದ್ದಕ್ಕಿದ್ದಂತೆ ಜ್ಞಾನೋದಯವಾಗಿದ್ದೇಕೆ?

ವಿಷಯ ಬಹಳ ನೇರ ಮತ್ತು ಸ್ಪಷ್ಟ. ಹಿಂದುಳಿದ ಬಳ್ಳಾರಿ ಜಿಲ್ಲೆಗೆ ಜಿಂದಾಲ್ ಕಂಪನಿಯನ್ನೂ ಒಳಗೊಂಡಂತೆ ನಾನಾ ಗಣಿ ಕಳ್ಳ ಕಂಪನಿಗಳು ದಾಂಗುಡಿಯಿಟ್ಟು ಬಳ್ಳಾರಿಯನ್ನು ಉದ್ಧಾರ ಮಾಡಿಲ್ಲವೆ?! ಅದೇ ರೀತಿ ಅಪಾರ ಖನಿಜ ಸಂಪತ್ತನ್ನು ತನ್ನ ಒಡಲಲ್ಲಿ ಹುದುಗಿಸಿಕೊಂಡಿರುವ ಛತ್ತೀಸ್‌ಗಢವನ್ನು ಉದ್ಧಾರ ಮಾಡಲು ಈ ಮ...ನ ಕಂಪನಿಗಳೆಲ್ಲಾ ಒಮ್ಮೆಲೆ ಮುಗಿಬಿದ್ದಿವೆ, ಅಷ್ಟೆ. ಇನ್ನು ಏನಿದ್ದರೂ ಛತ್ತೀಸ್‌ಗಢ ಅಭಿವೃದ್ಧಿಯ ಹೆಸರಲ್ಲಿ ದಾಪುಗಾಲಿಡುವುದೊಂದೇ ಬಾಕಿ.

ಈ ಅಭಿವೃದ್ಧಿ ಸಾಧಿಸಬೇಕೆಂದರೆ ಇರುವ ಏಕೈಕ ಅಡೆತಡೆಯೆಂದರೆ ಈ ಪ್ರದೇಶದಲ್ಲಿ ... ನೆಲೆಸಿರುವ ಲಕ್ಷಾಂತರ ಆದಿವಾಸಿಗಳು. ಅದಕ್ಕಿಂತಲೂ ದೊಡ್ಡ ಸಮಸ್ಯೆಯೆಂದರೆ ಈ ಆದಿವಾಸಿಗಳನ್ನು ... ಅವರಿಗೆ ಬೆಂಗಾವಲಾಗಿ ಇಲ್ಲಿ ನೆಲೆಯೂರಿರುವ ಸಶಸ್ತ್ರ ನಕ್ಸಲೀಯರು. ಈ ನಕ್ಸಲೀಯ ... ಹಿಡಿದಿರುವ ಮಾರ್ಗದಲ್ಲಿ ಯಶಸ್ಸು ಸಾಧಿಸುವುದು ಸಾಧ್ಯವಿಲ್ಲವೆಂಬುದು ನಿಜವಾದರೂ, ತಮ್ಮ ... ಸಿದ್ಧಾಂತಕ್ಕೆ ಬದ್ಧರಾಗಿ ಪ್ರಾಣತ್ಯಾಗಕ್ಕೂ ಸಿದ್ಧರಾಗಿ ಅವರು ನಿಂತಿದ್ದಾರೆ. ಹೀಗಾಗಿ ... ಸಂಘರ್ಷ ಏರ್ಪಟ್ಟಿದೆ. ಇದು ಕೊನೆಯಿಲ್ಲದ ರಕ್ತಪಾತಕ್ಕೆ ...

ಗಂಡನ ವಿರುದ್ಧ ಸೇಡು ತೀರಿಸಿಕೊಂಡ ಸಾವಿತ್ರಿ

ಆಿಂದಿನ ಕೊಚ್ಚಿ ರಾಜ್ಯದ ಕಾನೂನಿನ ಪ್ರಕಾರ 'ದಾರಿ ತಪ್ಪಿದ' ನಂಬೂದರಿ ಮಹಿಳೆಯರ ವಿಚಾರಣೆಯನ್ನು ಪೆರುಮನ್ನನ್ ಗ್ರಾಮದ ಮುಖ್ಯಸ್ಥರಾಗಿದ್ದ ವೇದಗಳನ್ನು ಚೆನ್ನಾಗಿ ಬಲ್ಲವರಾಗಿದ್ದ ನಂಬೂದರಿ ಸಂಪ್ರದಾಯಗಳನ್ನು ಅರಿತಿದ್ದ ನಾಯಕರೇ ನಡೆಸುತ್ತಿದ್ದರು. ಅದರಂತೆ ಜಥವೇದನ್ ನಂಬೂದರಿಯವರನ್ನು ಸ್ಮಾರ್ಥ ವಿಚಾರಣೆಯ ಮುಖ್ಯಸ್ಥರನ್ನಾಗಿ ನೇಮಿಸಲಾಯಿತು. (ಮಲೆಯಾಳಂ ಭಾಷೆಯಲ್ಲಿ ಸ್ಮಾರ್ಥ ಪದದ ಅರ್ಥ ನೈತಿಕತೆ ಎಂದು).

ಇಂತಹ ಸಂದರ್ಭಗಳಲ್ಲಿ ಮೊದಲು ನಡೆಯುತ್ತಿದ್ದದ್ದು 'ದಾಸಿಯ ವಿಚಾರಣೆ.' ಅದರಂತೆ ಆರಂಭದಲ್ಲಿ ಸಾವಿತ್ರಿಯ ಸೇವಕಿಯಾಗಿದ್ದ ನಾಯರ್ ಸಮುದಾಯದ ದಾಸಿಗೆ ಪ್ರಶ್ನೆಗಳನ್ನು ಹಾಕಲಾಯಿತು. ಆಕೆ ನೀಡಿದ ಉತ್ತರಗಳಲ್ಲಿ ಸಾಕಷ್ಟು ಮಾಹಿತಿ ಸಿಕ್ಕನಂತರ ವಿಚಾರಣೆಯನ್ನು ಮುಂದು ವರೆಸಬಹುದೆಂದು ಕೊಚ್ಚಿ ರಾಜನಿಗೆ ತಿಳಿಸಲಾಯಿತು. ಇಂಥಾ ಪ್ರಕರಣಗಳಲ್ಲಿ ಸಮಾಜದ ಪ್ರಭಾವಿಗಳ ಮಾನ ಹಾನಿಯಾಗುವ ಸಾಧ್ಯತೆಗಳಿದ್ದರಿಂದ ಸ್ಮಾರ್ಥ ವಿಚಾರಣೆಗೆ ರಾಜನ ಅನುಮತಿ ಬೇಕಿತ್ತು. ಮಾತ್ರವಲ್ಲ ಇಂತಹ ವಿಚಾರಣೆಗಳು ಸಾಕಷ್ಟು ದಿನಗಳ ಕಾಲ, ಹಲವೊಮ್ಮೆ ವಾರಗಳ ಕಾಲ, ನಡೆಯುತ್ತಿದ್ದರಿಂದ ಅದಕ್ಕೊಂದು ಸಾಕಷ್ಟು ಹಣವೂ ಖರ್ಚಾಗುತ್ತಿತ್ತು. ಆದ್ದರಿಂದ ವಿಚಾರಣೆಯ ಖರ್ಚುವೆಚ್ಚಗಳನ್ನು ಆರೋಪಿತ ಮಹಿಳೆಯ ತಂದೆಯಿಂದ ಕಟ್ಟಿಸಿಕೊಳ್ಳಲಾಗುತ್ತಿತ್ತು. ವಿಧಿ ಇಲ್ಲದೆ ಸಾವಿತ್ರಿಯ ತಂದೆ ಹಣವನ್ನು ಭರ್ತಿ ಮಾಡಿದ ನಂತರ ವಿಚಾರಣೆಯ ಎರಡನೆ ಭಾಗ ಪ್ರಾರಂಭವಾಯಿತು. ಅದುವೇ ಆರೋಪಿತ ಸಾವಿತ್ರಿಯ ವಿಚಾರಣೆ.

ಮಹಿಳೆಯ ವಿಚಾರಣೆಯೂ ಸಾಕಷ್ಟು ವಿಧಿವಿಧಾನಗಳ ನಡುವೆ ನಡೆಯುತ್ತಿತ್ತು. ಮೊದಲನೆಯದಾಗಿ ಅಂತಹ ಮಹಿಳೆ ಯಾರ ಸಂಪರ್ಕಕ್ಕೂ ಬಾರದಂತೆ ಆಕೆಯನ್ನು ಪ್ರತ್ಯೇಕವಾಗಿ ಕೂಡಿಡಲಾಗುತ್ತಿತ್ತು. ಆ ವೇಳೆಯಲ್ಲಿ ಆಕೆಗೆ ಊಟ, ಬಟ್ಟೆ ಇತ್ಯಾದಿ ಅಗತ್ಯಗಳನ್ನು ಸರಬರಾಜು ಮಾಡುತ್ತಿದ್ದದ್ದು ಆಕೆಯ ದಾಸಿ ಮಾತ್ರ. ಇದೊಂದು ರೀತಿಯಲ್ಲಿ ಸಾಲಿಟರಿ ಕಂಫೈನ್‌ಮೆಂಟ್ ಇದ್ದಂತೆ. ಆದರೆ ಇಂತಹ ಬಂಧನದಲ್ಲೂ ಸಾವಿತ್ರಿ ಎದೆಗುಂದಲಿಲ್ಲ. ಬದಲಾಗಿ ನಂಬೂದರಿ ಸಮುದಾಯದಲ್ಲಿ ಮಹಿಳೆಯರಿಗೆ ಆಗುತ್ತಿದ್ದ ಅನ್ಯಾಯ ಮತ್ತು ಅವಮಾನಕ್ಕೆ ಸೇಡು ತೀರಿಸಿಕೊಳ್ಳುವ ಆಕೆಯ ದಿಟ್ಟತನವನ್ನು ಮತ್ತಷ್ಟು ಹೆಚ್ಚಿಸಿತು.

ಆರೋಪಿತ ಮಹಿಳೆಯ ವಿಚಾರಣೆಯ ಸಂದರ್ಭದಲ್ಲೂ ಆಕೆಯ ಮುಖವನ್ನು ಇತರರು ನೋಡುವಂತಿರಲಿಲ್ಲ. ಬದಲಾಗಿ ಕಾಣದ ನ್ಯಾಯಾಧೀಶರು ಕೇಳಿದ ಪ್ರಶ್ನೆಗಳಿಗೆ ಯಾರಿಗೂ ಕಾಣದಂತಿದ್ದ ಆಕೆ ಉತ್ತರಗಳನ್ನು ಕೊಡಬೇಕಿತ್ತು.



ಮೊದಲನೆಯದಾಗಿ ಸಾವಿತ್ರಿ ತನ್ನೊಂದಿಗೆ ಲೈಂಗಿಕ ಸಂಪರ್ಕವನ್ನು ಹೊಂದಿದ್ದ ಪುರುಷರ ಹೆಸರುಗಳನ್ನು ಒಂದೊಂದಾಗಿ ಹೇಳಲಾರಂಭಿಸಿದಳು. ಆದರೆ ಹೆಸರು ಹೇಳಿದರೆ ಮಾತ್ರಕ್ಕೆ ಅದು ಹೇಗೆ ಆ ಪುರುಷರ ಪಾತ್ರ ಸಾಬೀತಾದಂತಾಗುತ್ತದೆ? ಆದ್ದರಿಂದ ಆಕೆಯನ್ನು ಒಂದು ಪರದೆಯ ಹಿಂದೆ ಕೂರಿಸಿ ಆಕೆಯ ಮುಂದೆ ಆಕೆ ಹೆಸರಿಸಿದ್ದ ವ್ಯಕ್ತಿಯನ್ನು ಮತ್ತು ಪ್ರಕರಣಕ್ಕೆ ಸಂಬಂಧಪಡದೇ ಇದ್ದ ಹಲವಾರು ಪುರುಷರನ್ನೂ ನಿಲ್ಲಿಸಲಾಯಿತು. ಇದು ಒಂದು ರೀತಿಯಲ್ಲಿ ಈಗ ಪೊಲೀಸರು ನಡೆಸುವ 'ಐಡೆಂಟಿಟಿ ಪರೇಡ್' ಇದ್ದಂತೆ. ಹಾಗೆ ತನ್ನ ಮುಂದೆ ಸಾಲಾಗಿ ನಿಂತಿದ್ದ ಪುರುಷರಲ್ಲಿ ತಾನು ಯಾರ ವಿರುದ್ಧ ಆರೋಪವನ್ನು ಹೊರಿಸಿದ್ದಳೋ ಅವರನ್ನು ಆಕೆ ಗುರುತು ಹಿಡಿಯಬೇಕಿತ್ತು. ನೆನಪಿಡಿ, ಆಗಿನ ಕಾಲದಲ್ಲಿ ಟಿವಿಗಳು, ಪತ್ರಿಕೆಗಳು ಇಲ್ಲದಿದ್ದರಿಂದ ಸಮಾಜದ ಪ್ರತಿಷ್ಠರ ಗುರುತು ಅವರನ್ನು ಬಲ್ಲವರಿಗೆ ಮಾತ್ರ ಗೊತ್ತಿರುತ್ತಿತ್ತು. ಅಷ್ಟಾದರೂ ಸಾವಿತ್ರಿಯ ಮಾತನ್ನು ನಂಬುವುದು ಹೇಗೆ? ಆಗ ಇನ್ನೊಂದು ಸವಾಲನ್ನೂ ಆಕೆಗೆ ಒಡ್ಡಲಾಯಿತು. ಅದೆಂದರೆ ಹೆಚ್ಚಿನ ಸಾಕ್ಷಿಯನ್ನು ನೀಡುವುದು. ಅದಕ್ಕೂ ಸಾವಿತ್ರಿ ಸಿದ್ಧಳಾಗಿದ್ದಳು. ತನ್ನೊಂದಿಗೆ ಸ್ನೇಹ ಹೊಂದಿದ್ದ ಹಲವು ಪುರುಷರು ಬರೆದಿದ್ದ ಪ್ರೇಮಪತ್ರಗಳನ್ನು, ಅಹವಾಲುಗಳನ್ನು ನ್ಯಾಯಾಧೀಶರು ಮುಂದಿಟ್ಟಳು. ಅಷ್ಟೇ ಅಲ್ಲ, ಅಂತಹ ಪತ್ರಗಳನ್ನು ಬರೆಯದಿದ್ದ ಪುರುಷರ ಮೈಮೇಲಿನ ಗುರುತುಗಳನ್ನು, ಲೈಂಗಿಕ ಅಂಗಗಳ ವಿವರಗಳನ್ನು ಕರಾರುವಾಕ್ಕಾಗಿ ಹೇಳಿದಳು.

ಹೀಗೆ ಒಬ್ಬನ ನಂತರ ಮತ್ತೊಬ್ಬ ಪುರುಷನ ಅಸಲಿಯತ್ತು ಬಯಲಾಗುತ್ತಾ ಹೋದಂತೆ ವಿಚಾರಣೆಯನ್ನು ನಡೆಸುತ್ತಿದ್ದ ನ್ಯಾಯಾಧೀಶ ಜಥವೇದನ್ ನಂಬೂದರಿಯವರಿಗೇ ಸಾವಿತ್ರಿ ಒಂದು ಸವಾಲನ್ನು ಹಾಕಿದಳು. ಅದೇನೆಂದರೆ "ನೀವು ಇವತ್ತು ನನ್ನ ನೈತಿಕತೆಯ ಬಗ್ಗೆ ವಿಚಾರಣೆ ನಡೆಸುತ್ತಿದ್ದೀರಿ. ಆದರೆ ನಿಮ್ಮ ಇಬ್ಬರು ಸಹೋದರರ ಚರಿತ್ರೆಯನ್ನು ನೀವು ಬಲ್ಲಿರಾ?" ಎಂಬ ಪ್ರಶ್ನೆ. ಏನಾಗಿತ್ತೆಂದರೆ ನ್ಯಾಯಾಧೀಶ ಜಥವೇದನ್ ನಂಬೂದರಿಯವರ ಇಬ್ಬರು ಸಹೋದರರೂ ಸಾವಿತ್ರಿಯೊಂದಿಗೆ ಅಕ್ರಮ ಸಂಬಂಧವನ್ನು ಹೊಂದಿದ್ದರು. ಆಕೆಯ ಪ್ರಶ್ನೆ ಕೇಳಿ ತಬ್ಬಿಬ್ಬಾದ ಜಥವೇದನ್ ನಂಬೂದರಿ ತಮ್ಮ ಸಹೋದರರ ವಿರುದ್ಧದ ಸಾಕ್ಷಿಯನ್ನು ಕೇಳಿದಾಗ ಅದನ್ನೂ ಆಕೆ ಒದಗಿಸಿದಳು!

ಸಾವಿತ್ರಿಯ ವಿಚಾರಣೆಯಲ್ಲಿ ಸಮಾಜದ ಹಲವಾರು ಪ್ರಮುಖರ ಹೆಸರುಗಳು ಹೊರಬೀಳಲಾರಂಭಿಸಿದಂತೆ ಕೇರಳ ರಾಜ್ಯದಲ್ಲಿ ಕೋಲಾಹಲವೇ ಎದ್ದಿತು. ಅದೆಷ್ಟೋ ಪುರುಷರು ತಮ್ಮ ಹೆಸರು ಯಾವಾಗ ಹೊರಬರುತ್ತದೆಯೋ ಎಂದು ನಡುಗಲಾರಂಭಿಸಿದರು. ಕೆಲವು ಚಪಲರಾಯರು ಅದೆಷ್ಟು ಹೆದರಿದ್ದರೆಂದರೆ ಅವರು ಆ ರಾಜ್ಯವನ್ನೇ ತೊರೆದು ಓಡಿಹೋದರು. ಇನ್ನೂ ಹಲವರು ಸಾವಿತ್ರಿ ತಮ್ಮ ಬಗೆಗೆ ಮರೆವು ಹೊಂದಿರಲಿ ಎಂದು ಹೋಮಹವನಗಳನ್ನು ಮಾಡಿಸಿದರು. ಏನಾಗಿತ್ತೆಂದರೆ ಸಾವಿತ್ರಿಯೊಂದಿಗೆ ಲೈಂಗಿಕ ಸಂಬಂಧ ಹೊಂದಿರದಿದ್ದರೂ, ಇತರೆ ಮಹಿಳೆಯರೊಂದಿಗೆ ಡಿಂಗ್‌ಡಾಂಗ್‌ನಲ್ಲಿ ತೊಡಗಿದ್ದ ಪುರುಷರು ತಾವು ಆಕೆಯೊಂದಿಗೆ ಹೊಂದಿರಬಹುದಾಗಿದ್ದ ಸಂಬಂಧದ ಸಾಧ್ಯತೆಯಿಂದ ನಡುಗಿ ಹೋಗಿದ್ದರು!

ಅವರ ದಿಗಿಲಿಗೆ ಕಾರಣವೂ ಇತ್ತು.

ಅದೇ ಸಾವಿತ್ರಿಯ ಅಸ್ತ್ರವೂ ಆಗಿತ್ತು.

ಮಹಿಳೆಯರ ಮೇಲಿನ ತಮ್ಮ ಅಧಿಪತ್ಯವನ್ನು

ಬಂಡಾಯವೆದ್ದ ಮಹಿಳೆಯ ಕ...

● ಗೌರಿ ಲಂಕೇ...

ಸಾಧಿಸಲು, ಮಹಿಳೆಯರನ್ನು ಶೋಷಿಸಲು,
ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಯಾವ ನಿಯಮಗ...
ನಂಬೂದರಿ ಪುರುಷರು ಜಾರಿಗೆ ತಂದು ಮಹಿಳೆಯ...
ಹೊರಜಗತ್ತಿನೊಂದಿಗೆ ಸಂಪರ್ಕ ಇಲ್ಲದಿದ್ದ 'ಅಂತರ್‌ಜನ...
ಗಳನ್ನಾಗಿಸಿದ್ದರೋ ಅಂತಹ ನೀಚ ನಿಯಮಗ...
ಸಾವಿತ್ರಿ ತನ್ನ ಬಂಡಾಯಕ್ಕೆ ಬಂಡವಾಳವನ್ನಾಗಿಸಿಕೊಂಡಿ...

ಮೊದಲೇ ಹೇಳಿದಂತೆ ಹೆತ್ತ ತಂದೆ ಮತ್ತು ಕೈಹಿ...
ಗಂಡನ ಹೊರತಾಗಿ ಇತರೆ ಪುರುಷರು ನಂಬೂ...
ಮಹಿಳೆಯರ ಮುಖವನ್ನು ನೋಡುವಂತಿರಲಿಲ್ಲ. ಆದ್ದ...
ಸಾವಿತ್ರಿಯ ಮುಖ ಪರಿಚಯ ಇದ್ದದ್ದು ಆಕೆಯ ...
ಮತ್ತು ಮದುವೆಯಾದ ಮುದಿಯ ರಾಮನ್ ನಂಬೂ...
ಎಂಬಾತನಿಗೆ ಮಾತ್ರ. ಬಾಲಕಿ ಆಗಿದ್ದಾಗ ವಿದ್ಯೆಯಿ...
ವಂಚಿತಳಾಗಿದ್ದ, ಮುದಿ ಗಂಡನಿಂದ ತಿರಸ್ಕಾರ...
ಎದುರಿಸಿದ್ದ, ಬದುಕಿದ್ದರೂ 'ಅಂತರ್ ಜನಮ್'...
ನಿರ್ಜೀವ ಬದುಕನ್ನು ಸಾಗಿಸಬೇಕಿದ್ದ ಸಾವಿತ್ರಿ ತನ್ನ ಜೀ...
ಇತಿಮಿತಿಗಳನ್ನೇ ಉಪಯೋಗಿಸಿಕೊಂಡು ಬಂಡಾ...
ಸಾರಿದ್ದಳು.

ತನ್ನ ನಿಷ್ಠಾವಂತ ದಾಸಿಯ ನೆರವಿನೊಂದಿ...
ವೇಶ್ಯೆಯಾಗಿ ಕೆಲಸ ಮಾಡುವ ಜಾಗೆಯನ್ನು ನ...
ಮಾಡಿಕೊಂಡಿದ್ದಳು. ಹೇಗಿದ್ದರೂ ಆಕೆಯ ಮುಖ ಪು...
ಹೊರಜಗತ್ತಿನ ಯಾವ ಪುರುಷರಿಗೂ ಗೊತ್ತಿರದಿದ್ದ...
ತನ್ನನ್ನು ಯಾರೂ ಗುರುತು ಹಿಡಿಯಲಾರರು ಎ...
ಗೊತ್ತಿದ್ದೇ ಆಕೆ ತಾನಿದ್ದಲ್ಲಿಗೆ ತನಗೆ ಬೇಕಾದ ಪುರುಷ...
ಕರೆಸಿ ಅವರ ಮತ್ತು ತನ್ನ ಲೈಂಗಿಕ ದಾಹ...
ತೀರಿಸುತ್ತಿದ್ದಳು/ತೀರಿಸಿಕೊಳ್ಳುತ್ತಿದ್ದಳು. ಅದರಲ್ಲಿ
ಯಶಸ್ಸನ್ನೂ ಕಂಡಿದ್ದಳು.

ಸುಂದರಿಯೂ, ಬುದ್ಧಿವಂತೆಯೂ ಆಗಿದ್ದ ಪ್ರ...
ಕಾಮಿಗಳಿಂದ ಹೆಚ್ಚೆಚ್ಚು ಬೇಡಿಕೆಯನ್ನು ಪಡೆಯು...
ಗುಟ್ಟಾಗಿ ಎಲ್ಲವನ್ನೂ ನಿಭಾಯಿಸುತ್ತಿದ್ದ ಸಾವಿತ್ರಿ
ಬೇಕಿದ್ದಷ್ಟು ದಿನ ವೇಶ್ಯೆಯಾಗಿ ಮುಂದುವರೆಯಬಹು...
ಆದರೆ ಆಕೆಯ ಉದ್ದೇಶ ಕೇವಲ ಲೈಂಗಿಕ ...
ಪಡೆಯುವುದಾಗಿರಲಿಲ್ಲ. ಬದಲಾಗಿ ಮಹಿಳೆಯರಿಗೆ ಆಗ...
ಅನ್ಯಾಯವನ್ನು ಬಯಲಿಗೆಳೆಯುವುದಾಗಿತ್ತು. ಇಲ್ಲವೆ...
ತನ್ನೊಂದಿಗೆ ಒಂದು ರಾತ್ರಿಯ ಸುಖ ಬಯಸುತ್ತಿದ್ದ...
ತನ್ನ ಗಂಡನೇ ಎಂದು ಗೊತ್ತಿದ್ದೂ ಆತನನ್ನು ...
ಇದ್ದಲ್ಲಿಗೆ ಆಕೆ ಕರೆಸಿಕೊಳ್ಳುತ್ತಿರಲಿಲ್ಲ. ಮನೆಯಲ್ಲಿ ಪತ್ನಿ...
ತನ್ನನ್ನು ನಿರ್ಲಕ್ಷಿಸುತ್ತಿದ್ದ ಗಂಡ ವೇಶ್ಯೆಯಾದ ತನ್ನೊ...
ಒಂದು ರಾತ್ರಿಯನ್ನು ಕಳೆದ ನಂತರ "ನಿನಗೆ ಬೇಕಾ...
ಕೊಡುತ್ತೇನೆ. ನನ್ನೊಂದಿಗೆ ಬಾ" ಎಂದು ಕರೆದಾಗ...
ಮುಖವನ್ನು ಮುಚ್ಚಿದ್ದ ಮುಸುಕನ್ನು ತೆರೆದು ...
ನಿಜವಾಗಲೂ ಯಾರೆಂದು ಆತನಿಗೆ ತೋರಿಸುತ್ತಿ...
ಆ ಮೂಲಕ ಸಾಮಾಜಿಕ ನಿಂದನೆಗೆ, ವಿಚಾರಣೆಗೆ ...
ಗುರಿಯಾಗಿಸಿಕೊಳ್ಳುತ್ತಿರಲಿಲ್ಲ.

ಆದರೆ ಸಾವಿತ್ರಿಗೆ ಅದೆಲ್ಲ ಸಾಕಾಗಿತ್ತು; ನಂಬೂ...
ಸಮುದಾಯದಲ್ಲಿ ಮಹಿಳೆಯರಿಗೆ ಆಗುತ್ತಿದ್ದ ಅನ್ಯಾಯ...
ಬಹಿರಂಗಪಡಿಸಬೇಕೆಂಬ ಆಶೆ ಆಕೆಗೆ ಇತ್ತು ಎನಿಸ...

ತಾನು ಸಮಾಜದಿಂದ ತಿರಸ್ಕೃತಳಾಗುತ್ತೇನೆ, ಬಹಿ...
ತುತ್ತಾಗುತ್ತೇನೆ, ಮುಂದಿನ ದಿನಗಳಲ್ಲಿ ದಿಕ್ಕು ದಶೆ ...
ತಾನು ಬದುಕಬೇಕಾಗುತ್ತದೆ ಎಂಬುದೆಲ್ಲ ಗೊತ್ತಿ...
ಸಾವಿತ್ರಿ ಯಾವ ಭಯವೂ ಇಲ್ಲದೆ ಮುಂದಿನ ...
ಇಟ್ಟಳು. ಆ ಮೂಲಕ ಕೇರಳದಲ್ಲಿ ಒಂದು ಸಾವ...
ಕ್ರಾಂತಿಗೇ ಬುನಾದಿಯನ್ನು ಹಾಕಿದ ದಿಟ್ಟ ಮಹಿಳೆಯ...

(ಮುಂದುವರೆಯು...

ಮಹೇಂದ್ರ ಕರ್ಮ- ಕೊಲೆಪಾತಕಿ

13<<<

ಹೋರಾಟಗಾರರು ಹಾಗೂ ಕೆಲವು ಪತ್ರಕರ್ತರು ಈ ವಿಷಯದ ಬಗ್ಗೆ ಸುಪ್ರೀಂಕೋರ್ಟಿನಲ್ಲಿ ದಾವೆ ಹೂಡಿದರು. ಸುಪ್ರೀಂಕೋರ್ಟ್ 2011ರ ಜುಲೈ 5ರಂದು ತೀರ್ಪು ನೀಡಿ ಸಲ್ವಾ ಜುಡುಂ ಎಂಬುದು ಒಂದು ಕಾನೂನುಬಾಹಿರ ಕೃತ್ಯ ಎಂದು ಘೋಷಿಸಿತು. ಅಷ್ಟು ಮಾತ್ರವಲ್ಲ, ಇಂಥಾ ಸಂವಿಧಾನಬಾಹಿರ ಕೃತ್ಯವನ್ನು ಕೂಡಲೇ ನಿಲ್ಲಿಸಿ, ಈ ಖಾಸಗಿ ಪಡೆಗೆ ನೀಡಲಾಗಿರುವ ಎಲ್ಲಾ ಆಯುಧಗಳನ್ನು ಕೂಡಲೇ ವಾಪಸ್ ಪಡೆದುಕೊಳ್ಳಬೇಕೆಂದು ಕಟ್ಟುನಿಟ್ಟಾಗಿ ಆದೇಶಿಸಿತು.

ಪರಿಣಾಮವಾಗಿ ಸಲ್ವಾ ಜುಡುಂ ಎಂಬ ವಿಧ್ವಂಸಕ ಪಡೆಯ ಅಸ್ತಿತ್ವ ರದ್ದಾಯಿತು. ಆದರೆ ಸುಪ್ರೀಂಕೋರ್ಟಿನ ಈ ತೀರ್ಮಾನದ ನಂತರವೂ ಕೇಂದ್ರ ಗೃಹ ಮಂತ್ರಿ ಚಿದಂಬರಂ "ಈ ಎಸ್‌ಪಿಒಗಳನ್ನು ಅಗತ್ಯ ಬಿದ್ದರೆ ಪೊಲೀಸ್ ಅಥವ ಸೇನಾ ಪಡೆಗಳಿಗೆ ಸೇರ್ಪಡೆ ಮಾಡಿಕೊಳ್ಳುತ್ತೇವೆ" ಎಂದು ಬಹಿರಂಗವಾಗಿಯೇ ಘೋಷಿಸಿದರು. ಸಿಎಂ ರಮಣ್‌ಸಿಂಗ್ "ನಕ್ಸಲ್ ಸಮಸ್ಯೆಗೆ ಸಲ್ವಾ ಜುಡುಂ ಅತ್ಯಂತ ಪರಿಣಾಮಕಾರಿ ಉತ್ತರ" ಎಂದು ದೊಡ್ಡ ಗಂಟಲಿನಲ್ಲಿ ಘೋಷಿಸಿದ್ದರು. ಇದು ನಮ್ಮನ್ನು ಆಳುತ್ತಿರುವವರು ಸಂವಿಧಾನವನ್ನು ಗೌರವಿಸುತ್ತಿರುವ ರೀತಿ.

ಈ ಪ್ರಭುತ್ವ ಬೆಂಬಲಿತ ಹಿಂಸೆ ನಕ್ಸಲೀಯರನ್ನು ಮಾತ್ರವೇ ಗುರಿ ಮಾಡಿದೆ ಎಂದುಕೊಳ್ಳುವಂತಿಲ್ಲ. ಛತ್ತೀಸ್‌ಗಢದಲ್ಲಿ ನೀವು ಸತ್ಯದ ಪರವಾಗಿ ದೃಢವಾಗಿ ನಿಂತರೆ ನೀವು ಯಾರೇ ಆಗಿದ್ದರೂ ನಿಮ್ಮ ಗ್ರಹಗತಿಗಳು ಕೆಟ್ಟು ಹೋಗುತ್ತವೆ. ಅದಕ್ಕೊಂದು ತಾಜಾ ಉದಾಹರಣೆ ಗಾಂಧಿವಾದಿ ನಾಯಕ ಹಿಮಾಂಶು ಕುಮಾರ್ ಅವರದು.

ವಿ ಚೇತನ ಆಶ್ರಮ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಪ್ರಾಮಾಣಿಕವಾಗಿ ಆದಿವಾಸಿಗಳ ಸೇವೆಯಲ್ಲಿ ತೊಡಗಿದ್ದ ಹಿಮಾಂಶು ಕುಮಾರ್ ವಾಸ್ತವದಲ್ಲಿ ಅಧಿಕಾರದ ಕೇಂದ್ರದ ಜೊತೆಗೆ ಹತ್ತಿರದ ಸಂಬಂಧವನ್ನು ಹೊಂದಿದ್ದವರು. ಅವರೇ ಹೇಳಿಕೊಂಡಿರುವಂತೆ ಮಹೇಂದ್ರ ಕರ್ಮನಿಗೂ ಸ್ನೇಹಿತರಾಗಿದ್ದವರು. ಆದಿವಾಸಿಗಳ ಮೇಲೆ ಪೊಲೀಸರ ಹಾಗೂ ಸಲ್ವಾ ಜುಡುಂ ಪಡೆಯಿಂದ ನಡೆಯುತ್ತಿದ್ದ ಕಿರುಕುಳವನ್ನು ಕಣ್ಣಾರೆ ಕಂಡ ಹಿಮಾಂಶು ಅದರ ವಿರುದ್ಧ ದನಿಯೆತ್ತಿದರು. ಕೋರ್ಟ್‌ಗಳಲ್ಲಿ ದಾವೆ ಹೂಡಿದರು. ಆದಿವಾಸಿಗಳ ಪರ ನ್ಯಾಯ ಕೋರಿ ದೆಹಲಿಯವರೆಗೂ ಹೋಗಿ ರಾಷ್ಟ್ರಪತಿಯವರನ್ನೂ ಭೇಟಿಯಾದರು.

ಹೀಗೆ ತಮ್ಮ ಹಾದಿಗೆ ಅಡ್ಡವಾಗಿ ನಿಂತಿರುವ ಗಾಂಧಿವಾದಿ ಹಾಗೂ ಅವರ ಸಂಗಡಿಗರಿಗೆ ನಾನಾ ಕಿರುಕುಳ ಪ್ರಾರಂಭವಾಯಿತು. ಇದಾವುದಕ್ಕೂ ಹಿಮಾಂಶು ಬಗ್ಗದಿದ್ದಾಗ ಕೊನೆಗೆ ಆತನನ್ನು ಕೊಲೆ ಮಾಡಲು ಸಂಚು ರೂಪಿಸಲಾಯ್ತು. ಆದರೆ ಗಾಂಧಿವಾದಿಯ ಅದೃಷ್ಟ ಚೆನ್ನಾಗಿತ್ತು. ಅಂದು ರಾತ್ರಿ ನಡೆಯಲಿರುವ ದಾಳಿಯ ಸುಳಿವನ್ನು ಅರಿತು ರಾತ್ರೋರಾತ್ರಿ ಛತ್ತೀಸ್‌ಗಢ ಬಿಟ್ಟು ಪರಾರಿಯಾಗಿ ದೆಹಲಿ ಸೇರಿ ತಮ್ಮ ಪ್ರಾಣ ಉಳಿಸಿಕೊಂಡರು. ಮತ್ತೊಂದು ವಿಚಿತ್ರವೆನಿಸಿದರೂ ಸತ್ಯವಾದ ಸಂಗತಿಯೊಂದಿದೆ. ಈ ಗಾಂಧಿವಾದಿಯ ರಕ್ಷಣೆಗೆ ನಿಂತದ್ದು ರಾಹುಲ್ ಗಾಂಧಿ, ಸೋನಿಯಾ ಗಾಂಧಿಗಳಲ್ಲ; ರಮಣ್ ಸಿಂಗ್‌ನ ಬಿಜೆಪಿ ಸರ್ಕಾರವೂ ಅಲ್ಲ; ಕಾನೂನನ್ನು ರಕ್ಷಿಸಲೆಂದು ನೇಮಕವಾಗಿರುವ ಯಾವೊಂದು ಅಂಗವೂ ಅಲ್ಲ. ಈತನ ರಕ್ಷಣೆಗೆ ಬಂದದ್ದು ಹಿಂಸಾವಾದಿಗಳೆಂದು ಗುರುತಿಸಲಾಗುವ ಇದೇ ನಕ್ಸಲೀಯರು. ಇದು ವಿಚಿತ್ರವೆನಿಸಿದರೂ ಇದೇ ವಾಸ್ತವ ಸತ್ಯ.

ಇಂಥಾ ಘನಘೋರ ವಾಸ್ತವಗಳನ್ನು ಕಂಡಾಗ ಸಂವಿಧಾನದಲ್ಲಿ ಯಾರಿಗೆ ಎಷ್ಟು ನಂಬಿಕೆಯಿದೆ, ಮೈಂಡ್‌ಲೆಸ್ ಕ್ರೈಮ್ ಅನ್ನು ಪ್ರಚೋದಿಸುತ್ತಿರುವವರು, ನಡೆಸುತ್ತಿರುವವರು ಯಾರು ಎಂಬ ಪ್ರಶ್ನೆಗಳನ್ನು ಮತ್ತೆ ಮತ್ತೆ ಕೇಳಬೇಕೆನಿಸುತ್ತದೆ.

ಅಂತೂ ಮಹೇಂದ್ರ ಕರ್ಮನ ಅಂತ್ಯಕ್ರಿಯೆಯನ್ನು ಬಿಜೆಪಿ ಸರ್ಕಾರ ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿಸಿದೆ. ಮಹೇಂದ್ರ ಕರ್ಮ ಸರ್ಕಾರಿ ಹುತಾತ್ಮನಾಗಿ ಬಿಟ್ಟಿದ್ದಾನೆ. ಮಹೇಂದ್ರ ಕರ್ಮನಂಥವರು ನಮ್ಮ ನೀತಿ ನಿರೂಪಕರಾಗಿ, ಪ್ರಜಾತಂತ್ರದ ಚಾಂಪಿಯನ್‌ಗಳಾಗಿ ವಿಜೃಂಭಿಸುತ್ತಿರುವ ಈ ಸಂದರ್ಭದಲ್ಲಿ ಪ್ರಜಾತಂತ್ರ ಎಂಬ ಪರಿಕಲ್ಪನೆಯೇ ಅಪಹಾಸ್ಯಕ್ಕೀಡಾಗಿದೆ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಸಿದ್ದರಾಮಯ್ಯನವರಿಗೆ ಒಂದು ಪತ್ರ



ಮಾನ್ಯರೆ,

ಚುನಾವಣೆಯಲ್ಲಿ ತಮ್ಮ ಪಕ್ಷ ಬಹುಮತ ಪಡೆದು ನೀವು ಮುಖ್ಯಮಂತ್ರಿಗಳಾಗಿ ಆಯ್ಕೆಯಾಗಿದ್ದೀರಿ. ಅಭಿನಂದನೆಗಳು.

ಪ್ರಮಾಣವಚನ ಸ್ವೀಕಾರಕ್ಕೆ ಮುನ್ನ ಹಿರಿಯ ಸಾಹಿತಿಗಳನ್ನೆಲ್ಲ ಭೇಟಿಯಾದ ನಿಮ್ಮ ಅಪರೂಪದ ಪಟ್ಟಿಯಲ್ಲಿ ಒಬ್ಬ ಹಿರಿಯ ಸಾಧಕಿಯೂ ಕಾಣದೇ ಇದ್ದುದರಿಂದ ನಿಮ್ಮ ಧೋರಣೆ ಏಕಮುಖವಾಗಿದೆಯೆಂಬ ಆತಂಕ ಹುಟ್ಟಿದೆ. ನಾಡಿನ ಸಾಂಸ್ಕೃತಿಕ ಸಂಗತಿಗಳ ಕುರಿತು ಚರ್ಚಿಸಲು ನೀವು ಕರೆದ ಚಿಂತಕರ ಸಭೆಯಲ್ಲಿಯೂ ಒಬ್ಬ ಮಹಿಳೆ ಇಲ್ಲದಿರುವುದು ಹಾಗೂ ಮಂತ್ರಿಮಂಡಲದಲ್ಲಿ ಕೇವಲ ಒಬ್ಬ ಮಹಿಳೆ ಸ್ಥಾನ ಪಡೆದಿರುವುದು ಈ ಬಹಿರಂಗ ಪತ್ರ ಬರೆಯಲು ಕಾರಣವಾಗಿದೆ.

ಈ ಸಲದ ಚುನಾವಣೆಯಲ್ಲಿ ದ್ವೇಷ ರಾಜಕಾರಣದ ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಈ ನಾಡಿನ ಪ್ರಗತಿಪರ, ಜಾತ್ಯತೀತ ಜನರ ಶ್ರಮ ಹಾಗೂ ಬದ್ಧತೆಯನ್ನು ನೆನಪಿಸುವುದು ಅನಿವಾರ್ಯವಾಗಿದೆ. ಕೋಮುವಾದಿ ಶಕ್ತಿಗಳು ಇಲ್ಲಿ ಬೇರೂರಲು ಹವಣಿಸುತ್ತಿದ್ದ ದಿನಗಳಿಂದ ಮೊದಲ್ಗೊಂಡು ಒಂದು ರೀತಿ ಪ್ರಬಲ ಪ್ರತಿರೋಧ ಒಡ್ಡುತ್ತಲೇ ಬಂದಿರುವ ಎಡಪಂಥೀಯ, ಮಹಿಳಾ, ದಲಿತ, ಮಾನವ ಹಕ್ಕುಗಳ ಸಂಘಟನೆಗಳ ಶ್ರಮ, ಬದ್ಧತೆಗಳ ಕುರಿತು ಸಾಮಾಜಿಕ ನ್ಯಾಯವನ್ನು ನಂಬುವ ಚಿಂತಕರೂ ಸೇರಿದಂತೆ ಯಾವ ಚುನಾವಣಾ ವಿಶ್ಲೇಷಣೆಗಳೂ ನೆನಪು ಮಾಡಿಕೊಳ್ಳದಿದ್ದುದು ವಿಪರ್ಯಾಸವೇ ಆಗಿದೆ.

ಬೆಂಗಳೂರೊಂದರಲ್ಲೇ 2011ರಲ್ಲಿ ಮಹಿಳೆಯರ ಮೇಲೆ ನಡೆದ ಹಿಂಸಾ ಪ್ರಕರಣಗಳ ಸಂಖ್ಯೆ ಒಟ್ಟು 1890. ಮಹಿಳೆಯರ ಮೇಲೆ ನಡೆಯುವ ಹಿಂಸೆಯಲ್ಲಿ ರಾಜಧಾನಿ ದೆಹಲಿ ಒಂದನೆಯ ಸ್ಥಾನದಲ್ಲಿದ್ದರೆ, ಬೆಂಗಳೂರು ಎರಡನೆಯ ಸ್ಥಾನದಲ್ಲಿದೆ. ಸರ್ಕಾರಿ ಅಂಕಿ-ಅಂಶವೇ ಹೇಳುವಂತೆ ಶಿಕ್ಷೆ ಜಾರಿಯಾಗುವ ಪ್ರಕರಣಗಳು ಶೇ 5.1 ಮಾತ್ರ. ಅಲ್ಲದೆ ದಿನೇದಿನೇ ಹೆಚ್ಚುತ್ತಿರುವ ಮಹಿಳೆ/ಹಸುಳೆ/ಬಾಲಕಿಯರ ಮೇಲಿನ ಬರ್ಬರ ಅತ್ಯಾಚಾರಗಳು ಆಘಾತಕಾರಿಯಾಗಿವೆ. ತಾವು ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಿ, ಶೀಘ್ರ ತನಿಖೆ ನಡೆಸಿ, ತಕ್ಕ ಶಿಕ್ಷೆ ಜಾರಿಯಾಗುವಂತಹ ವ್ಯವಸ್ಥೆ ಮಾಡಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಸೂಕ್ತ ಸುರಕ್ಷಾ ಕ್ರಮಗಳನ್ನು ಕಲ್ಪಿಸಬೇಕು. ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಿ, ಅದರಲ್ಲಿ ಮಹಿಳಾ ನ್ಯಾಯಾಧೀಶರನ್ನೇ ನೇಮಿಸಿ, ತ್ವರಿತ ನ್ಯಾಯದಾನ ವ್ಯವಸ್ಥೆ ಮಾಡಬೇಕು. ಕೌಟುಂಬಿಕ ನ್ಯಾಯಾಲಯದ ಕಾರ್ಯವೈಖರಿಯನ್ನು ಪುನರಾವಲೋಕಿಸಿ ಕಾನೂನು ಪರಿವೀಕ್ಷಣೆ ನಡೆಯಬೇಕು. ಮಹಿಳಾ ದೌರ್ಜನ್ಯ ಎಸಗಿದವರು ಚುನಾವಣೆಯಲ್ಲಿ ನಿಲ್ಲದಂತೆ, ಅಧಿಕಾರದಲ್ಲಿದ್ದರೂ ಕೆಳಗಿಳಿಯುವಂತೆ ಕಾನೂನು ತರಬೇಕು. ಎಲ್ಲ ಸರ್ಕಾರಿ ಇಲಾಖೆಗಳ ಸಿಬ್ಬಂದಿಗೆ ಲಿಂಗಸಂವೇದನಾಶೀಲತೆ ಕಾರ್ಯಾಗಾರ ನಡೆಸಬೇಕು. ಮಹಿಳೆಯರ ಕುರಿತಂತೆ ಒಟ್ಟಾರೆ ಸಮಾಜದ ರೋಗಿಷ್ಠ ಮನಸ್ಥಿತಿಯನ್ನು ಸರಿಪಡಿಸುವ ನಿಟ್ಟಿನಲ್ಲಿ ಮಹಿಳಾ ಸಂಘಟನೆಗಳು, ಮಾನವಹಕ್ಕು ಸಂಘಟನೆಗಳು ಹಾಗು ಸಂಬಂಧಪಟ್ಟ ತಜ್ಞರೊಂದಿಗೆ ಸಮಾಲೋಚಿಸಬೇಕು. ಜಾತ್ಯತೀತ, ಪ್ರಗತಿಪರ, ಮಹಿಳಾಪರ ಹಾಗೂ ಮಹಿಳಾ ಚಳವಳಿಯ ಅನುಭವವಿರುವ ಕ್ರಿಯಾಶೀಲ ಮಹಿಳೆಯರನ್ನು ಮಹಿಳಾ ಆಯೋಗಕ್ಕೆ ನೇಮಿಸಿ, ನೊಂದ ಮಹಿಳೆಯರಿಗೆ ಸೂಕ್ತ ನ್ಯಾಯ ಒದಗಿಸುವ ವಾತಾವರಣ ನಿರ್ಮಾಣ ಮಾಡಬೇಕು.

ಜೊತೆಗೆ,

ಆರೋಗ್ಯಕರ ಕೆಲಸದ ವಾತಾವರಣ, ಸುರಕ್ಷತೆ, ಸೂಕ್ತ ವೇತನವಿಲ್ಲದೆ ಬಿಡಿಗಾಸಿಗೆ ಅಸಂಘಟಿತವಲಯದಲ್ಲಿ ದುಡಿಯುತ್ತಿರುವ ಗುತ್ತಿಗೆ ಪೌರಕಾರ್ಮಿಕ ಮಹಿಳೆಯರು; ಅಂಗನವಾಡಿ, ಆಶಾ, ಬಿಸಿಯೂಟ ಕಾರ್ಯಕರ್ತೆಯರು; ಗಾರ್ಮೆಂಟ್ಸ್, ಮನೆಗೆಲಸ, ಬೀಡಿ ಕಟ್ಟುವ ಮಹಿಳೆಯರು ಮತ್ತು ಕಟ್ಟಡ ಕಾರ್ಮಿಕರಿಗೆ ಉದ್ಯೋಗ ಖಾತ್ರಿ, ಸಮಾನ ವೇತನ, ಉತ್ತಮ ಕೆಲಸದ ವಾತಾವರಣ, ಸುರಕ್ಷೆ, ಮೂಲಭೂತ ಸೌಕರ್ಯಗಳನ್ನು ಶೀಘ್ರವೇ ಜಾರಿಗೊಳಿಸುವ ವ್ಯವಸ್ಥೆ ಮಾಡಿ ಅದಕ್ಕಾಗಿ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕು.

ಬಡವರ ಮನೆ, ನೆಲೆಗಳನ್ನು ನಿರ್ನಾಮ ಮಾಡುವ ಲಾಭಕೋರ ಮಾಲುಗಳು, ದಂಧೆಗಳನ್ನು ತಡೆದು ಮಕ್ಕಳು-ಮಹಿಳೆಯರ ಬದುಕು ಬೀದಿ ಪಾಲಾಗುವುದನ್ನು ನಿಲ್ಲಿಸಬೇಕು. ಕಡಿಮೆ ಬೆಲೆಯ ಸಾರಾಯಿ ಕುಟುಂಬ ಆರೋಗ್ಯ ನಾಶಮಾಡದಂತೆ ನೋಡಿಕೊಳ್ಳಬೇಕು. ಸರ್ಕಾರಿ ಶಾಲೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಯಾವುದೇ ಕಾರಣಕ್ಕೂ ಮುಚ್ಚದೆ ಉತ್ತಮ ಸೇವೆ ಲಭ್ಯವಾಗುವಂತೆ ಮಾಡಬೇಕು.

ಸಮಾಜ/ಆಡಳಿತದ ಎಲ್ಲ ಸ್ತರಗಳಲ್ಲೂ ಮಹಿಳಾ ಪ್ರಾತಿನಿಧ್ಯ ಕನಿಷ್ಠ ಮೂರನೇ ಒಂದು ಭಾಗ ಇರುವಂತೆ ನೋಡಿಕೊಳ್ಳಬೇಕು. ವಿಧಾನಸಭಾ/ಪರಿಷತ್ತಿನಲ್ಲಿರುವ ಮಹಿಳೆಯರನ್ನು ಪರಿಗಣಿಸಿ ಮಂತ್ರಿಮಂಡಲದಲ್ಲಿ ಹಾಗೂ ನಿಗಮಮಂಡಳಿಗಳಲ್ಲಿ ಸಮಾನ ಪ್ರಾತಿನಿಧ್ಯ ನೀಡಬೇಕು. ಮುಂಬರುವ ಚುನಾವಣೆಗಳಲ್ಲಿ ಮಹಿಳಾ ಮೀಸಲಾತಿಯನ್ನು ಕರಾರುವಾಕ್ಕಾಗಿ ಜಾರಿಗೊಳಿಸುವ ಮೂಲಕ ಸಂವಿಧಾನದ ಲಿಂಗ ಸಮಾನತೆಯ ಆಶಯವನ್ನು ಜಾರಿಗೊಳಿಸಬೇಕು.

ದೇವದಾಸಿಯರ/ವಲಸಿಗರ ಮಕ್ಕಳಿಗೆ ವಸತಿಶಾಲೆ ಮಾಡಬೇಕು. ಎಸ್ಸಿ, ಎಸ್ಟಿ/ಒಬಿಸಿ/ಮೈನಾರಿಟಿ ವಿದ್ಯಾರ್ಥಿನಿಯರ ಹಾಸ್ಟೆಲುಗಳನ್ನು ಉತ್ತಮಪಡಿಸಿ ಹೊಸ ನಿಲಯಗಳನ್ನು ತೆರೆಯಬೇಕು. ಎಲ್ಲ ಹೆಣ್ಣುಮಕ್ಕಳ ವಸತಿ ನಿಲಯಗಳಿಗೆ ಮಹಿಳಾ ವಾರ್ಡನ್/ಕೆಲಸಗಾರರನ್ನೆ ನೇಮಿಸಬೇಕು.

ಮಹಿಳಾ ವಿಶ್ವವಿದ್ಯಾಲಯವಷ್ಟೆ ಮಹಿಳೆಯರಿಗಲ್ಲ, ರಾಜ್ಯದ ಇನ್ನಿತರ ವಿಶ್ವವಿದ್ಯಾಲಯಗಳ ವಿಸಿ ಆಯ್ಕೆ ಹಾಗೂ ಸಿಂಡಿಕೇಟ್ ಸದಸ್ಯರ ಆಯ್ಕೆ ಸಮಯದಲ್ಲಿ ಮಹಿಳೆಯರ ಸೂಕ್ತ ಪ್ರಾತಿನಿಧ್ಯ ಇರುವಂತೆ ನೋಡಿಕೊಳ್ಳಬೇಕು.

ಮಹಿಳೆ ಎಂಬ ಕಾರಣಕ್ಕೆ ಯಾವುದೇ ಅಪ್ರಾಮಾಣಿಕ/ಭ್ರಷ್ಟ/ಸ್ವಾರ್ಥಿ ಮಹಿಳೆಗೆ ಅವಕಾಶ ಕಲ್ಪಿಸಬೇಡಿ. ಸೂಕ್ತ ಮಹಿಳೆಯರನ್ನು ಎಲ್ಲ ಜಾತಿ, ಧರ್ಮ, ಜನವರ್ಗಗಳನ್ನು ಪ್ರತಿನಿಧಿಸುವಂತೆ ಆಯ್ದುಕೊಳ್ಳುವ ಎಚ್ಚರಿಕೆ ವಹಿಸಿ.

ಪ್ರಜಾತಂತ್ರದ ಉಸಿರನ್ನೆ ಹಿಸುಕಲು ಪ್ರಯತ್ನಿಸಿದ್ದ ತುರ್ತು ಪರಿಸ್ಥಿತಿ, ಸಿಖ್ ನರಮೇಧದ ಕೋಮುದಳ್ಳುರಿ, ಭ್ರಷ್ಟತೆ ಇತ್ಯಾದಿಗಳು ನಮ್ಮ ನೆನಪೆಂಬ ಹಗೇವಿನಲ್ಲಿನ್ನೂ ಜೀವಂತವಾಗಿವೆ. ಜನಪರ ಆಡಳಿತದ ಮೂಲಕ ದುಡಿದುಣ್ಣುವ ಜನರ ಬದುಕನ್ನು ಹಸನಾಗಿಸುವ, ಜಾತಿ-ಲಿಂಗ-ವರ್ಗ ಇತ್ಯಾದಿ ಯಾವುದೇ ರೀತಿಯ ಅಮಾನವೀಯ ತಾರತಮ್ಯವನ್ನು ತೊಡೆದು ಹಾಕಿ ಸಮಾನತೆಯ, ಸಹಬಾಳ್ವೆಯ ಸಮಾಜ ರಚನೆಗಾಗಿ ಮಾಡುವ ಪ್ರಾಮಾಣಿಕ ಪ್ರಯತ್ನದ ಮೂಲಕವಷ್ಟೆ ಹಳೆಯ ಕಳಂಕಗಳನ್ನು ತೊಡೆದು ಹಾಕಲು ಸಾಧ್ಯ. ಸಮಾಜವಾದಿ ಹಿನ್ನೆಲೆಯಿಂದ ಬಂದ ನೀವು ಮಹಿಳೆಗೆ ಸುರಕ್ಷೆಯ ಜೊತೆಗೆ ಸಮಾಜದ ಎಲ್ಲ ಕ್ಷೇತ್ರಗಳಲ್ಲೂ ಗೌರವ, ಸಮಾನತೆ ಲಭಿಸುವಂತೆ ಮಾಡುವಿರಿ ಎಂಬ ವಿಶ್ವಾಸ ಇಟ್ಟದ್ದೇವೆ.

ಜಾತಿ, ವರ್ಗ, ಧರ್ಮ, ಕುಟುಂಬ, ವಿವಾಹ, ದೇಶ, ಗಡಿ, ಪ್ರಭುತ್ವ - ಹೀಗೆ ಯಾವುದೇ ಹೆಸರಿನಲ್ಲಿ ಮಹಿಳೆಯರ ಮೇಲೆ ನಡೆಸುವ ದೌರ್ಜನ್ಯ/ಹಿಂಸೆಯನ್ನು ತಡೆದು, ಕೊನೆಗಾಣಿಸುವ ಆತ್ಮಬಲವನ್ನು ಪಡೆದುಕೊಳ್ಳಲು ನಾವೇ ಸಜ್ಜಾಗಬೇಕಾದ ಕಾಲ ಇದು. ಎಂದೇ 'ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ' ಹಾಗೂ 'ಮಹಿಳಾ ಸಂಘಗಳ ಜಾಲ'ದ ಅಡಿಯಲ್ಲಿ ಸಮಾನತೆ, ಸಹಬಾಳ್ವೆ ಹಾಗು ಪ್ರಜಾತಂತ್ರದಲ್ಲಿ ನಂಬಿಕೆ ಇರುವ 126 ಮಹಿಳಾ ಸಂಘಟನೆಗಳು ಮಂಗಳೂರಿನಲ್ಲಿ ಮಹಿಳಾ ದಿನಾಚರಣೆ ಆಚರಿಸಿ 'ಕರ್ನಾಟಕ ರಾಜ್ಯ ಮಹಿಳಾ ಒಕ್ಕೂಟ'ವು ರೂಪುಗೊಂಡಿದೆ. ಮಹಿಳಾಪರ ಕ್ರಮಗಳನ್ನು ಕೈಗೊಳ್ಳದೇ ಹೋದಲ್ಲಿ ಮಹಿಳಾ ಒಕ್ಕೂಟವು ಸಮಾನ ಹಕ್ಕುಗಳಿಗಾಗಿ ಮುಂಬರುವ ದಿನಗಳಲ್ಲಿ ವಿಶಾಲ ಆಂದೋಲನವನ್ನು ಹಮ್ಮಿಕೊಳ್ಳಬಯಸುತ್ತದೆ.

- ಕರ್ನಾಟಕ ರಾಜ್ಯ ಮಹಿಳಾ ಒಕ್ಕೂಟದ ಪರವಾಗಿ (ದು. ಸರಸ್ವತಿ, ಎಚ್. ಎಸ್. ಅನುಪಮಾ, ಗುಲಾಬಿ ಬಿಳಿಮಲೆ, ಮರ್ಲಿನ್ ಮಾರ್ಟಿಸ್, ಮಲ್ಲಿಗೆ, ಸಾರಾ ಅಬೂಬಕರ್, ಚಂದ್ರಕಲಾ ನಂದಾವರ, ಗೌರಿ, ವೈದೇಹಿ, ರೀಟಾ ನೊರೋನ್ಹಾ, ಮಧು ಭೂಷಣ್, ಕೆ. ನೀಲಾ, ಶಕುನ್, ಜ್ಯೋತಿ. ಎ, ರತಿ ರಾವ್, ಪ್ರಭಾ ಮತ್ತು ಇತರರು.)

ಮೇಲ್ವರ್ಗದ ಮಿದುಳು, ಮಧ್ಯಮ ವರ್ಗದ ಅವಕಾಶವಾದ ಮತ್ತು ಬಡವರ ಅಕ್ಕಿ

ಒಂದು ಪತ್ರ

ಒಂದು ರೂಪಾಯಿಗೆ ಬಡವರಿಗೆ ಅಕ್ಕಿ ಕೊಡುವ ಯೋಜನೆಯನ್ನು ಸಿದ್ದರಾಮಯ್ಯರವರು ಘೋಷಿಸಿದ ಕೂಡಲೆ ಮೇಲ್ವರ್ಗದ ಮಿದುಳುಗಳು ವಿಷಕಾರುತ್ತ ಮನಬಂದ ಕಾರಣವನ್ನು ಕೊಡುತ್ತಾ 1 ರೂ. ಅಕ್ಕಿ ಯೋಜನೆಯನ್ನು ವಿರೋಧಿಸುತ್ತಿವೆ. ಇವರ ಪ್ರಕಾರ ಕಡಿಮೆ ಬೆಲೆಗೆ ಅಕ್ಕಿ ಕೊಟ್ಟರೆ ಬಡವರು ಸೋಮಾರಿಗಳಾಗಿ ಬಿಡುತ್ತಾರೆ. ಆದರೆ ಮೂಲತಃ ಇವರ ದಿಗಿಲಿರುವುದು "ಬಡವ ನೀ ಮಡುಗಿದಂಗಿರು" ಎಂಬ ಹಿರಿಯರ (?) ಮಾತು ಉಲ್ಟಾ ಹೊಡೆಯಬಹುದು ಎಂಬುದರಲ್ಲಿ.

ವಾಸ್ತವದಲ್ಲಿ ಶ್ರಮಿಕ ವರ್ಗ ಅನುಭವಿಸುವ ಕಿಂಚಿತ್ ಸುಖವನ್ನು ಸಹ ಮೇಲ್ವರ್ಗ ಸಹಿಸದು. ಶೋಷಿಸುವುದು ಮೇಲ್ವರ್ಗಕ್ಕೆ ರಕ್ತಗತವಾಗಿರುವುದೇ ಇದಕ್ಕೆ ಕಾರಣ. 90ರ ದಶಕದ ನಂತರ ಭಾರತದ ಸರ್ಕಾರಗಳು ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ಎಂಬ ತ್ರಿಕರಣಗಳನ್ನು ಮೇಲ್ವರ್ಗದ ಪರವಾಗಿ ಜಾರಿಗೆ ತಂದು, ಅದರ ಬಲೆಯಲ್ಲಿ ಮಧ್ಯಮ ವರ್ಗವನ್ನು ಒಳಹಾಕಿಕೊಂಡು, ಕೆಳವರ್ಗಗಳ ರಕ್ತ ಹಿಸುಕುತ್ತಿರುವುದನ್ನು ನಾವೆಲ್ಲರೂ ಕಾಣುತ್ತಿದ್ದೇವೆ.

ಕಳೆದ ಕೆಲವು ವರ್ಷಗಳಲ್ಲಿ ಸರ್ಕಾರಗಳು ಹಲವು ಲಕ್ಷ ಕೋಟಿ ರೂಪಾಯಿ ತೆರಿಗೆಯನ್ನು ಖಾಸಗಿ ಕಂಪೆನಿಗಳಿಗೆ ಬಿಟ್ಟುಕೊಟ್ಟಿವೆ. ಇತ್ತೀಚೆಗೆ ಇನ್ಫೋಸಿಸ್ ಕಂಪೆನಿಯೂ ತೆರಿಗೆ ಕಟ್ಟದೆ ಆಟವಾಡುತ್ತಿರುವುದು ಬಹಿರಂಗವಾಗಿದೆ. ಹಾಗೆ, ಬೆಂಗಳೂರಿನ ವಿಪ್ರೋ ಕಂಪೆನಿಯು 99 ಕೋಟಿ ವಿದ್ಯುತ್ ಬಿಲ್ ಕಟ್ಟದೆ ಇರುವುದಕ್ಕೆ, ಸರ್ಕಾರದ ಅಧಿಕಾರಿಗಳು ಕಂಪೆನಿ ಮುಂದೆ ತಮಟೆ ಬಾರಿಸಿದ್ದಾರೆ. ಕೇವಲ 100 ರೂ. ವಿದ್ಯುತ್ ಬಿಲ್ ಕಟ್ಟದಿದ್ದರೆ ಸಂಪರ್ಕ ಕಡಿತಗೊಳಿಸುತ್ತಾರೆ. ಸಂಡೂರಿನ ಪ್ರತಿಷ್ಠಿತ ಕಂಪೆನಿಯೊಂದರ ವಿದ್ಯುತ್ ಬಿಲ್ಲನ್ನು ಮನ್ನಾ ಮಾಡಲಾಗಿತ್ತಂತೆ. ಹೀಗೆ ಹೇಳುತ್ತಾಹೋದರೆ ಉಳ್ಳವರ ಪರವಾಗಿ ಆಳುವ ಸರ್ಕಾರಗಳು ತೋರಿಸಿರುವ ಕರುಣೆ ಅಷ್ಟಿಷ್ಟಲ್ಲ. ಈ ನೀತಿಯ ಪರಿಣಾಮವಾಗಿಯೇ ಇಂದು ಖಾಸಗಿ ಕಂಪನಿ ಮಾಲೀಕರುಗಳು ನಮ್ಮ ದೇಶದ ಹಲವಾರು ವರ್ಷಗಳ ಬಜೆಟ್‌ನಷ್ಟು ಹಣವನ್ನು ಗಳಿಸಿದ್ದಾರೆ.

ಜಾಗತಿಕ ಮೇಲ್ವರ್ಗಗಳಿಗೆ ಶ್ರಮಿಕ ವರ್ಗ ಬೇಕಾಗುವುದು ಇಷ್ಟಕ್ಕೆ, ಏಕೆಂದರೆ ಶ್ರಮಿಕವರ್ಗ ಅಷ್ಟು ಸುಲಭಕ್ಕೆ ಕಡಿಮೆ ಕಾಸಿಗೆ ಕೂಲಿ ಮಾಡುವವರು ಸಿಗುವುದಿಲ್ಲ. ಆದಕಾರಣ ಸೋಂಬೇರಿತನ ಅದೂ ಇದೂ ಎಂದು ಹುಯಿಲಿಡುತ್ತವೆ ಅಷ್ಟೆ. ಮೇಲ್ವರ್ಗವು ತನ್ನ ಬೇಳೆ ಬೇಯಿಸಿಕೊಳ್ಳಲು ಉಪಯೋಗಿಸಿಕೊಳ್ಳುತ್ತಿರುವುದು ಮಧ್ಯಮ ವರ್ಗವನ್ನು. ಈ ವರ್ಗಕ್ಕೆ ಮೇಲ್ವರ್ಗವೇ ಆದರ್ಶ.

ಮೀಸಲಾತಿಯು ಶೋಷಿತರನ್ನು ಆರ್ಥಿಕವಾಗಿ ಬಿಡುಗಡೆಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಜೊತೆಜೊತೆಗೆ ಅವರುಗಳಲ್ಲೇ ಒಂದು ವರ್ಗವನ್ನು ಸೃಷ್ಟಿಸುವಲ್ಲಿಯೂ ಗಮನಾರ್ಹ ಪಾತ್ರವಹಿಸಿದೆ. ಜಾತಿಶ್ರೇಣಿಯ ಶ್ರೇಷ್ಠತೆಯನ್ನು ಮೈಗೂಡಿಸಿಕೊಂಡಿರುವ ಮಧ್ಯಮ ವರ್ಗ ವರ್ಗದೃಷ್ಟಿಯಿಂದ ಆಲೋಚಿಸುತ್ತದೆ. ಆ ಕಾರಣಕ್ಕೇ ಮಧ್ಯಮ ವರ್ಗವೂ 1 ರೂ. ಅಕ್ಕಿ ಯೋಜನೆಯನ್ನು ವಿರೋಧಿಸುತ್ತಿದೆ. ಇದರ ಹಿಂದೆ ಜಾತಿಪ್ರಜ್ಞೆಗಿಂತ ವರ್ಗ ಪ್ರಜ್ಞೆ ಕೆಲಸ ಮಾಡಿರುವುದು ಸ್ಪಷ್ಟ. ಮಧ್ಯಮ ವರ್ಗದ ಮುಂದುವರೆದ ಶೂದ್ರರು, ದಲಿತರು ಸಹ ತಮ್ಮ ಜಾತಿಯ ಬಡವರನ್ನು ಮರೆತಿದ್ದಾರೆ. ಇಂತಹ ಜಾತಿಗಳೊಳಗಿನ ವರ್ಗಪ್ರಜ್ಞೆಯೇ ಇಂದು 1 ರೂ. ಅಕ್ಕಿಯನ್ನು ವಿರೋಧಿಸುತ್ತಿರುವುದು ಮತ್ತು ಬಡವರೆಲ್ಲ ಸೋಮಾರಿಗಳಾಗಿ ಬಿಡುತ್ತಾರೆ ಎಂದು ಬೊಬ್ಬೆ ಇಡುತ್ತಿರುವುದು. ಈ ಪ್ರಕ್ರಿಯೆಯ ಹಿಂದಿನ ಮರ್ಮವನ್ನು ಅರಿತುಕೊಳ್ಳುವ ಮೊದಲು ನಮ್ಮ ದೇಶದಲ್ಲಿನ ಶೋಷಿತರ ವರ್ಗ ಪ್ರಜ್ಞೆಯನ್ನೊಮ್ಮೆ ತಿಳಿದುಕೊಳ್ಳಬೇಕಿದೆ.


ಮೇಲ್ಮಧ್ಯಮ ವರ್ಗ ತನಗೆ ಧಕ್ಕೆ ಬಂದಾಗಲೆಲ್ಲ ಆಯಾ ಜಾತಿ ಸಮೂಹದ ಹೆಸರಲ್ಲಿ ಅವಕಾಶವಾದಿತನದಿಂದ ಬೀದಿಗೆ ಬಿದ್ದು ಹೋರಾಡಿದೆ. ಈ ಹಿಂದೆ ಅಡುಗೆ ಅನಿಲವನ್ನು ವರ್ಷಕ್ಕೆ ಆರರಂತೆ ಮಿತಿಗೊಳಿಸಿದಾಗ, ಬೆಲೆ ಹೆಚ್ಚಿಸಿದಾಗ, ತೈಲಗಳ ಮೇಲಿನ ತೆರಿಗೆಯನ್ನು ಹೆಚ್ಚಿಸಿದಾಗಲೂ ಈ ಮೇಲ್ಮಧ್ಯಮ ವರ್ಗ ಪ್ರಬಲವಾದ ವಿರೋಧವನ್ನೇ ಒಡ್ಡಿತ್ತು. ಆಗೆಲ್ಲ ಆಮ್ ಆದ್ಮಿಗಳ ವಕ್ತಾರರಂತೆ ಮಾತನಾಡಿತ್ತು, ಅಷ್ಟೆ ಯಾಕೆ, ಇದೇ 1 ರೂ. ಅಕ್ಕಿ ಜೊತೆಗೆ ಘೋಷಿಸಿದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ನಿಗಮ ಮಂಡಳಿಯ ಸಾಲಮನ್ನಾ ಮಾಡಲಾಗಿದೆ. ಈ ಸೌಲಭ್ಯದ ವಿರುದ್ಧ ಯಾರಾದರೂ ಮಾತನಾಡಿದ್ದಾರೆಯೆ? ಇಲ್ಲ, ಕಾರಣ ಆ ಸಾಲ ಪಡೆದಿರುವವರೆಲ್ಲರೂ ಆಯಾ ಜಾತಿಗಳ ಮೇಲ್ಮಧ್ಯಮ ವರ್ಗ!

ಈ ಹಿಂದೆ ಕರ್ನಾಟಕದಲ್ಲಿ ಶೋಷಣೆಯ ವಿರುದ್ಧ ಬ್ರಾಹ್ಮಣೇತರ ಸಂಘಗಳನ್ನು ಕಟ್ಟಿಕೊಂಡು ಮಾಡಿದ ಹೋರಾಟದ ಫಲವಾಗಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಜಾರಿಗೆ ತಂದ ಮೀಸಲಾತಿಯ ಸೌಲಭ್ಯ ಪಡೆದು, ದೇವರಾಜ್ ಅರಸರ ಕಾಲದಲ್ಲಿ ಮುಂದುವರೆದ ಶೂದ್ರ ಜಾತಿಯ ಒಂದು ವರ್ಗ ಇಂದು ಏನಾಗಿದೆ? ದಲಿತರು ಮತ್ತು ಬಡ ಶೂದ್ರರನ್ನು ಶೋಷಿಸುತ್ತಿವೆ.

ದಲಿತರಿಗೆ ಸ್ವಾಭಿಮಾನ ತುಂಬಿ ತಲೆ ಎತ್ತಿ ನಡೆಯಲು ಕಲಿಸಿಕೊಟ್ಟ ದಲಿತ ಸಂಘಟನೆಯ ನಾಯಕರು ಮತ್ತು ಅದರ ಪ್ರಭಾವದಿಂದ ಮತ್ತು ಮೀಸಲಾತಿಯಿಂದ ಆರ್ಥಿಕವಾಗಿ ಉತ್ತಮರಾಗಿರುವ ದಲಿತರು ಇಂದು ಪ್ರಶ್ನಿಸುತ್ತಿರುವುದೇನನ್ನು? ಖಾಸಗಿರಂಗದಲ್ಲಿ ಮೀಸಲಾತಿಯನ್ನು, ಮೀಸಲಾತಿಯಲ್ಲಿ ಬಡ್ತಿಯನ್ನು, ಖಾಸಗಿ ಶಾಲೆಗಳಿಗೆ ಆರ್.ಟಿ.ಇ ಕಾಯ್ದೆ ಪ್ರಕಾರ ತಮ್ಮ ಮಕ್ಕಳನ್ನು ಸೇರಿಸುವ ಪ್ರಕ್ರಿಯೆಯನ್ನು. ಇವೆಲ್ಲವೂ ಪ್ರಶ್ನಿಸಲೇಬೇಕಾದರೂ ಸರ್ಕಾರವೇ ಒಪ್ಪಿಕೊಂಡಂತೆ ದಲಿತರ ಮೇಲೆ ದಿನಕ್ಕೆ 3 ಅತ್ಯಾಚಾರಗಳು, 2 ಕೊಲೆಗಳು, 3 ಮನೆ ಧ್ವಂಸವಾಗುತ್ತಿವೆ, ಭೂಹೋರಾಟಗಳು ನೆಲಕಚ್ಚಿವೆ. ಇವುಗಳ ವಿರುದ್ಧ ದಲಿತ ನಾಯಕರು ಒಂದೇ ಒಂದು ಹೋರಾಟವನ್ನೂ ಏಕೆ ರೂಪಿಸುತ್ತಿಲ್ಲ? ಇವುಗಳನ್ನು ಏಕೆ ಪ್ರಶ್ನಿಸಲಾಗುತ್ತಿಲ್ಲ?


ಈ ಮೇಲಿನ ಹೋರಾಟಗಳನ್ನು ಮಾಡಿರುವ/ ಮಾಡದೇ ಇರುವ ಎಲ್ಲರೂ ಮೇಲ್ಮಧ್ಯಮ ವರ್ಗದ ಮಂಡಾಲಿಗೆ ಅನುಗುಣವಾಗಿ, ಆ ವರ್ಗದ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಪರದಾಡಿದ್ದಾರೆ. ಈ ಮೇಲ್ಮಧ್ಯಮ ವರ್ಗಗಳಿಗೆ ಎಲ್ಲ ಬಡವರ ಬಗ್ಗೆ ಕಾಳಜಿ ಇರಲಿ, ತಮ್ಮ ಜಾತಿಯಲ್ಲಿನ ಬಡವರ ಬಗ್ಗೆಯೇ ಕಾಳಜಿ ಇಲ್ಲ, ಆಯಾ ಜಾತಿಯ ಬಡವರ ಅಗತ್ಯತೆಗಳ ಬಗ್ಗೆ ಅರಿವೇ ಇಲ್ಲ. ಇದನ್ನ ಆನಂದ ತೇಲ್‌ತುಂಬ್ಡೆಯವರು "ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣ ಮನುಷ್ಯ ಸಮುದಾಯವನ್ನು ವೈಯಕ್ತಿಕ ಹಿತಾಸಕ್ತಿಗೆ ದೂಡಿದೆ" ಎಂದು ವರ್ಣಿಸುವುದು.

ವಿಕಾಸ ಆರ್ ಮೌರ್ಯ, ಬೆಂಗಳೂರು



ಯಾರದೋ ದುಡ್ಡು ಯಲ್ಲಮ್ಮನ ಜಾತ್ರಿ-2

ಖದೀಮ ಕಾಸಿದ್ದೋರ ಕೈಲಾಸ



ಗುಮಾಸ್ತನ ಬ್ಲಾಗ್-21 • ಕೆ.ಫಣಿರಾಜ್

ಕರ್ನಾಟಕದ 'ಘಟದೀಚೆಗಿನ' ಬಹುಪಾಲು ಪ್ರದೇಶಗಳಲ್ಲಿ ಮತ್ತು ಉತ್ತರ ಭಾರತದಲ್ಲಿ, ದೀಪಾವಳಿಯ ಅಮಾವಾಸ್ಯೆಯಂದು ಲಕ್ಷ್ಮಿ ಪೂಜೆ ಅಂತ ಮಾಡ್ತಾರೆ. ಅವತ್ತಿಗೆ ಆ ವರ್ಷದ ವ್ಯಾಪಾರದ ಲಾಭ-ನಷ್ಟಗಳ ಲೆಕ್ಕಾಚಾರ ಮಾಡಿ, ಹಳೆ ವರ್ಷದ ಖಾತೆ ಮುಚ್ಚಿ, ಪಾಡ್ಯದ ದಿನ ಹೊಸ ಖಾತೆ ಶುರುವಿಟ್ಕೋತಾರೆ. ಆ ಖಾತೆ ಪುಸ್ತಕಗಳಲ್ಲಿ 'ರಾಮನ ಲೆಕ್ಕ-ಕೃಷ್ಣನ ಲೆಕ್ಕ' ಒಟ್ಟಾಗಿರ್ತವೆ. ಆದರೆ, ಮಾರ್ಚ್ 31ರಂದು ಮುಚ್ಚಿ ತೆರಿಗೆ ಅಧಿಕಾರಿಗಳಿಗೆ ಒಪ್ಪಿಸೋ ಲೆಕ್ಕಾಚಾರದಲ್ಲಿ ಬರೀ 'ರಾಮನ ಲೆಕ್ಕ' ಮಾತ್ರ ಇರ್ತದೆ. ಆದಾಯ ತೆರಿಗೆ ಪರಿಶೀಲನೆಗೆ ಒಪ್ಪಿಸೋ 'ರಾಮನ ಲೆಕ್ಕ' ಸಾಚಾ ಕಾಸಿನ ಲೆಕ್ಕಾಚಾರ. ಲಚುಮಿ ಪೂಜೆ ದಿವಸ ಲಚ್ಚಮ್ಮಂಗೆ ಒಪ್ಪಿಸೋ ಲೆಕ್ಕಾಚಾರದಲ್ಲಿ ಆದಾಯ ತೆರಿಗೆ ತಪ್ಪಿಸಿ ಕೂಡಿಟ್ಟ 'ಕೃಷ್ಣನ ಲೆಕ್ಕ'ದ ಖದೀಮ ಕಾಸು-ಕಪ್ಪು ಹಣ ಕೂಡ ಸೇರ್ಕಂಡಿರ್ತದೆ. ಅದಕ್ಕೆ ಅವತ್ತಿನ ದಿವಸ ವ್ಯಾಪಾರಿಗಳು, ಆದಾಯ ತೆರಿಗೆ ಅಧಿಕಾರಿಗಳನ್ನೂ ತಮ್ಮ ಅಂಗಡಿ ಪೂಜೆಗೆ ಕರೆಸಿ, ಲಾಡಿನ ಪ್ಯಾಕೆಟ್ ಕೊಟ್ಟು ತಮ್ಮ ನೈತಿಕ ನೈಪುಣ್ಯತೆ ಮೆರೀತಾರೆ! ಲಕ್ಷ್ಮಿ ಪೂಜೆಯ ನಂತರ ಇಡಿ ಊರಿಗೆ ಊರಿನಲ್ಲೇ, ಪಾಡ್ಯದ ಬೆಳಗಿನ ಜಾವದವರೆಗೆ ಭರಪೂರ ಇಸ್ಪೀಟು ಜೂಜಿನಾಟ ನಡೀತದೆ - ಇದೆಲ್ಲ ಅಧಿಕೃತವಾಗೇ ನಡೆಯೋದು - ಯಾವ ಸರಕಾರವೂ ಆ ಖಾತೆ ಪುಸ್ತಕಗಳನ್ನು ಜಪ್ತಿ ಮಾಡುವ, ಆ ಜೂಜನ್ನು ಮಟ್ಟ ಹಾಕುವ ಗೈರತ್ತು ತೋರಿಲ್ಲ. ಇದು ಖದೀಮ ಕಾಸಿನ ವ್ಯವಹಾರದ ಸಿನಿಮಾದ ಟೈಟಲ್‌ಕಾರ್ಡ್ ಕಣ್ರಿ. ಭರ್ಜರಿ ಸಿನಿಮಾಕ್ಕೆ ಒಂದು ಆಹ್ವಾನ! ಅಂದಾಜಿನ ಪ್ರಕಾರ ನಮ್ಮ ದೇಶದಲ್ಲಿ ಹರಿದಾಡೋ ಖದೀಮ ಹಣ ಸಾಚಾ ಹಣದ ಹತ್ತುಪಟ್ಟು ಇದೆಯಂತೆ.

ಈ ಖದೀಮ ಕಾಸು ಹೆಂಗೆ ಹುಟ್ಕೊಳ್ಳುತ್ತೆ, ಹೆಂಗೆ ಸಾಚಾ ಕಾಸಾಗುತ್ತೆ ಅಂತ ಒಂದು ಉದಾಹರಣೆ ಹೇಳ್ತೀನಿ ಕೇಳಿ. ಈಗ ನೋಡಿ, ನಾನು ಖದೀಮ ಕೇಡಿ, ನೀವು ಸಾಚಾ ಮಂದಿ. ಒಂದು ಒಳ್ಳೆ ಏರಿಯಾದಲ್ಲಿ ನಂದೊಂದು ಚಿಕ್ಕ ಮನೆ ಇದೆ. ಅದರ ಸಾಚಾ ಬೆಲೆ 7 ಲಕ್ಷ. ನಿಮಗೆ ಆ ಮನೆ ಇಷ್ಟ ಆಗಿದೆ. ನಂಗೆ ಕೊಡ್ರಿ ಅಂತ ಬರ್ತೀರ. 'ಅಯ್ಯೋ, ನೀವು ನಮ್ಮ ಸುರೇಶನ ಅಕ್ಕ-ಭಾವ ಅಲ್ವಾ. ಹಾಗೆ 20 ಲಕ್ಷಕ್ಕೆ ಕೊಡ್ತೀನಿ. ನಿಜ ಹೇಳ್ಲಾ? ಆ ಖದೀಮ ವೆಂಕಟೇಶ 35ಕ್ಕೆ ಕೇಳ್ತ ಇದ್ದಾನೆ ಸಾರ್! ನಾನು ಪಾಪ-ಪುಣ್ಯಕ್ಕೆ ಹೆದ್ರೋನು; ನಾನು ದಿವ್ಸ ಬೆಳ್ಳಂಬೆಳಗ್ಗೆ ಕಟ್ಟೆ ಆಂಜನೇಯ ಸ್ವಾಮಿಗೆ ಸುತ್ತಾಕೋದನ್ನು ಮೇಡಂ ನೋಡೇ ಅವ್ರೆ' ಅಂತ ನಿಮ್ಮ ಜರೂರಿಗೆ ಮಲ್ಲಿಗೆ ಸುತ್ತೀನಿ. ನೀವು 20 ಲಕ್ಷ ಕೊಡ್ತೀರ. ಸಾಚಾ ಕಾಸಿನ 7 ಲಕ್ಷಕ್ಕೆ ರಿಜಿಸ್ಟ್ರಿ ಮಾಡಿಸಿ ಕೊಡ್ತೀನಿ. ಆ ಮಾರಾಟದ ಬೆಲೆಗೆ ತೆರಿಗೇನೂ ಕಟ್ತೀನಿ. ಇನ್ನು 13 ಲಕ್ಷ ಖದೀಮ ಕಾಸನ್ನು - ಅಯ್ಯೋ ಅದು ನಂದೇ? ನೀವೇ ಸಾಚಾ ಮಂದಿ ಕೊಟ್ಟ ಕಾಸಲ್ವೇ! ಹಂಗ್ಯಾಕ್ ಮೂಗು ಮುರೀತೀರಾ! - ಮೀಟರ್ ಬಡ್ಡಿ ವ್ಯವಹಾರಕ್ಕೆ ಬಿಡ್ತೀನಿ. ಈ ದೇಶದಲ್ಲಿ ಮದುವೆ-ಮುಂಜಿನೂವೇ, ಕಾಯಿಲೆ ಕಸಾಲೆನೂವೇ ಶ್ಯಾನೆ ಅಲ್ವೇನ್ರಿ. ಎಲ್ಲದಕ್ಕೂ ಕಾಸು ಬೇಕಲ್ವ? ಜನೋಪಕಾರ ಬುದ್ಧಿ ನಂದು. ಅಂಥ ಜನರ ಕಷ್ಟಕ್ಕೆ ಸಾಲ ಕೊಡ್ತೀನಿ. ಬಡ್ಡಿ ಬೆಳ್ಕಂಡು 13 ಲಕ್ಷ ಹೂಡಿಕೆ ದುಡ್ಡು ನೋಡುನೋಡೋದ್ರಲ್ಲೇ 1 ಕೋಟಿ ಆಗೋಗುತ್ತೆ. ಬಡವ ಸಾರ್ ನಾನು - ಇಷ್ಟು ಕಾಸಿನ ಕಟ್ಟನ್ನ ಎಲ್ಲಿ ಇಡೋದು? ಎಲ್ಲ ಕೃಷ್ಣನ ಲೆಕ್ಕ, ಸಾಕಪ್ಪ ಸಾಕು; ಒಂದು ಸಾಚಾ ವ್ಯಾಪಾರ: 'ತರ್ಸದು-ಕಳ್ಸದು' ಶುರುಮಾಡ್ಕೋತೀನಿ. ಏನು ತರ್ಸ್‌ಕಳ್ತೀನಿ? ದೇಶದ ಹೊರಗಿಂದ ಹೇರ್‌ಪಿನ್ನು. ಏನು ಕಳ್‌ಸ್ತೀನಿ? 'ಭಾರತದ ಮಿಂಚ್‌ಮಿಂಚಿಂಗ್ ಹರಳು ಹಚ್ಚಿದ ಹೇರ್‌ಪಿನ್'. ಹೇರ್ ಪಿನ್ನೇ ಯಾಕ್ರಿ? ಬೇರೆ ಏನು ಸಿಗಲಿಲ್ವ? ಅಂತ ಮಾತ್ರ ಕೊಂಕು ಮಾತಾಡ್ಬೇಡಿ ಮೇಡಂ ನೀವು! ಹೇರ್‌ಪಿನ್ನು ಕೂದ್ಲನ್ನು ಒಪ್ಪವಾಗಿಡೋಕೂ ಉಪಯೋಗ, ಎಂಥ ತಿಜೋರಿನೂ ಆರಾಮದಲ್ಲಿ ತೆಗೆಯೋಕೂ ಉಪಯೋಗಕ್ಕೆ ಬರೋ ವಸ್ತು ಗೊತ್ತಾ! ಸುಮ್ನೆ ಕೇಳ್ರಿ.

ವ್ಯವಹಾರ ಹೆಂಗೆ ಅಂದ್ರೆ: ಆಫ್ರಿಕಾದ ಫಿಜೂಲ್‌ಲ್ಯಾಂಡಿನಿಂದ ವಿಶಿಷ್ಟ ಲೋಹದ ಹೇರ್‌ಪಿನನ್ನು ಒಂದೂವರೆ ರೂಪಾಯಿಗೆ ಒಂದ್ರಂಗೆ ತರ್ಸಕತೀನಿ-ಹಾಗೆ ನೋಡಿದ್ರೆ ಅದರ ನಿಜ ಬೆಲೆ 50 ಪೈಸೆ-ಏನ್ಮಾಡದು ಸ್ಪರ್ಧಾತ್ಮಕ ಜಗತ್ತು ಕಣ್ರಿ! 30 ಪೈಸೆ ಹರಳು, 10 ಪೈಸೆ ಹಚ್ಕೋ ಕೂಲಿ; 50 ಪೈಸೆಗೆ ಒಂದ್ರಂಗೆ ಸ್ವಿಟ್ಜರ್‌ಲ್ಯಾಂಡಿಗೆ ಕಳಿಸ್ತೀನಿ. ಅಲ್ರೀ! ಒಂದು ಪಿನ್ನಿಗೆ ಒಂದು ರುಪಾಯಿ ನಷ್ಟದ ವ್ಯಾಪಾರ ಮಾಡ್ತೀರಾ? ಅಂತ ನೀವು ಕೇಳ್ತೀರಿ ನಂಗೊತ್ತು, ಏನ್ಮಾಡದು ಸಾ? ದೇಶಸೇವೆ! ಭಾರತದ ಹೆಸ್ರು ಯುರೋಪಿನಲ್ಲಿ ಝುಗಝುಗಾ ಅನ್ಬೇಡ್ವೇ! ಹೇ! ಹೇ! ಹೌದು ಮೇಡಂ! ಈ ನಷ್ಟದ ವ್ಯಾಪಾರದಲ್ಲಿ, ಪ್ರತಿ ಪಿನ್ನಿಗೆ, ನನ್ನ ಹತ್ರ ಇರೋ ಒಂದು ರೂಪಾಯಿ ಕೃಷ್ಣನ ಕಾಸು ಮಾಯದಲ್ಲಿ ರಾಮನ ಕಾಸಾಗಿಬಿಡ್ತದೆ. ಫಿಜೂಲ್‌ಲ್ಯಾಂಡಿನ ನಮ್ಮ ಹೇರ್‌ಪಿನ್ನು ಸರಬರಾಜುದಾರ, ಪ್ರತಿ ಪಿನ್ನಿಗೆ 50 ಪೈಸೆ ಹಂಗೆ ಮಾರೋದು-ರಸೀದಿ ಮಾತ್ರ ಒಂದೂವರೆ ರೂಪಾಯಿಗೆ ಹಾಕ್ತಾನೆ. ಹೇ! ಏನ್ಮೇಡಂ... ತರ್ಸೋ ಪ್ರತಿ ರೂಪಾಯಿ ಮಾಲಿಗೆ ಹತ್ತು ಪೈಸೆ ಸುಂಕ ಕಟ್ಟಿ ದೇಶದ ಬೊಕ್ಕಸದ ಸೇವೆ ಮಾಡೋಲ್ಲವೇ! ಇರಲಿ. ವ್ಯಾಪಾರ ಅಂದ್ಮೇಲೆ ಅಪಾಯ ಇರೋದೆ. ಮಸಲ ಈ ವ್ಯವಹಾರ ಎಲ್ಲ ಒಂದ್ಸಾರಿ ಬಟ್ಟಾ ಬಯಲಾದ್ರೆ, ಕಂಬಿ ಎಣಿಸ್ಬೇಕಾಗ್ತೋದು ಅನ್ನೋದೇ ಭಯ.



ಇಂದಿರಮ್ಮ ತಳಪಾಯ ಹಾಕಿ, ರಾಜೀವ್‌ಪುಟ್ಟ ಗೋಡೆ ಕಟ್ಟಿ, ಮೇಸ್ತ್ರಿ ಮನಮೋಹನ ಗಾರೆ ಸಾರಿಸಿ, 'ದೇಶಭಕ್ತ' ಎನ್‌ಡಿಎ ಬಣ್ಣಗಾರರು ಬಣ್ಣ ಹೊಡೆದು 'ಹೇ! ಹೇ! ಭಾರತ ಮಿಂಚಿಂಗ್' ಅಂತ ಬೊಬ್ಬೆ ಹೊಡೆದು ಕೊಬ್ಬಿಸಿದ 'ನವ ಉದಾರೀಕರಣ' ಅರ್ಥನೀತಿಯ ನಂತರ ಖದೀಮ ಕಾಸಿಗೆ ಯಾವ ಭಯ! ಆದ್ರೆ ಲಕ್ಷ್ಮಿ ಪೂಜೆಯ ಪರಂಪರೆ ಮುರಿಕೂಡದು ಕಣ್ರಿ. ಖದೀಮತನವನ್ನು ನಯದಲ್ಲೇ ಮಾಡಬೇಕು: ಕಂಡೂಕಾಣದ ಹಾಗೆ. ಈ ನಯವಂಚನೆಯ ವ್ಯವಹಾರವನ್ನು ದೇಶದ ಪ್ರತಿಷ್ಠಿತ ಖಾಸಗಿ ಹಾಗು ಸರಕಾರಿ ಬ್ಯಾಂಕುಗಳು ಹೇಗೆ ಮಾಡುತ್ತವೆ ಅಂತ ಬಯಲು ಮಾಡಿದ್ದು ಅನಿರುದ್ಧ ಬಹಾಲ್‌ನ ಸಂಪಾದಕತ್ವದ 'ಕೋಬ್ರಪೋಸ್ಟ್'. ಈ ಅಂತರ್ಜಾಲ ಪತ್ರಿಕೆಯ ವರದಿಗಾರರು 'ಆಪರೇಷನ್ ರೆಡ್‌ಸ್ಪೈಡರ್' ಎಂಬ ಗುಪ್ತ ಕಾರ್ಯಾಚರಣೆ ನಡೆಸಿದರು. ಅವರ ವಿಧಾನ ಸರಳವಾಗಿತ್ತು, ಅವರು ದೇಶದ ದೊಡ್ಡ ಬ್ಯಾಂಕುಗಳಾದ HDFC, AXIS ಗಳಂಥ ಬ್ಯಾಂಕುಗಳ ಶಾಖೆಗಳಿಗೆ ಹೋದರು. ತಾವು ಸಣ್ಣ ವ್ಯಾಪಾರಿಗಳು ಎಂದು ಒಂದು ಕಡೆ, ಒಬ್ಬ ರಾಜಕಾರಣಿಯ ಆಪ್ತ ಎಂದು ಮತ್ತೊಂದು ಕಡೆ ಹೇಳಿಕೊಂಡರು. ತಮ್ಮ ಬಳಿ ಕೋಟ್ಯಾಂತರ ರೂಪಾಯಿ ಖದೀಮ ಕಾಸಿದೆ; ಅದನ್ನು ಖದೀಮತನದ ಸುಳಿವು ಹತ್ತದ ಹಾಗೆ ನಿಮ್ಮ ಬ್ಯಾಂಕಿನಲ್ಲಿ ಸುರಕ್ಷಿತವಾಗಿಟ್ಟುಕೊಳ್ಳಲು ಸಾಧ್ಯವೇ? ಕೆಲವು ಕಾಲದನಂತರ ಸಾಚಾ ಕಾಸಾಗಿಸಲು ಸಾಧ್ಯವೇ? ಎಂದು ಅಧಿಕಾರಿಗಳನ್ನು ನೇರವಾಗಿಯೇ ಕೇಳಿದರು. ಆ ಅಧಿಕಾರಿಗಳು, ಈ ವರದಿಗಾರರಿಗೆ ದಿಗ್ಭ್ರಮೆಯಾಗುವಷ್ಟು ಪ್ರಸನ್ನ ಆತ್ಮವಿಶ್ವಾಸದಿಂದ 'ಓಹೋ! ಆಗಬಹುದು. ಇಷ್ಟು' ಎಂದರು; ಮಾತ್ರವಲ್ಲ ಕಟ್ಟುನಿಟ್ಟಿನ ವ್ಯವಹಾರ ನಿಯಮಗಳ ರಂಗೋಲಿ ಕೆಳಗೆ ನುಸುಳಿ, ಅಂಥ ಖದೀಮ ಕಾಸನ್ನು ಮುಚ್ಚಿಡುವ ವಿಧಾನಗಳನ್ನು ಎಗ್ಗಿಲ್ಲದೆ ಹೇಳಿಕೊಂಡರು. ಔಟ್‌ಲುಕ್ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಅನಿರುದ್ಧ ಬಹಾಲ್ ಹೇಳುತ್ತಾರೆ: "ನಾವು ಇಂತಿಂಥ ಶಾಖೆಗಳಲ್ಲಿ ಅವ್ಯವಹಾರ ನಡೆಯುತ್ತಿದೆ ಎಂದು ಗುರುತಿಸಿಕೊಂಡೇನು ಹೋಗಲಿಲ್ಲ. ನಮ್ಮ ವರದಿಗಾರರು ಬೇಕಾಬಿಟ್ಟಿಯಾಗಿ, ಶಾಖೆಗಳನ್ನು ಗುರುತಿಸಿ ಹೋದರು. ತಾವು ಖದೀಮ ಕಾಸಿನ ವ್ಯವಹಾರಕ್ಕೆ ಬಂದಿರುವುದಾಗಿ ಮುಚ್ಚುಮರೆ ಇಲ್ಲದೆ ಹೇಳಿದರು. ಯಾವೊಬ್ಬ ಅಧಿಕಾರಿಯೂ 'ಗ್ರಾಹಕರ ಸಾಚಾತನ ಖಾತ್ರಿ ಮಾಡಿಕೊಳ್ಳುವ ನಿಯಮ' (Know Your Customer-KYC) ಗಳ ಬಗ್ಗೆ ಕ್ಯಾರೆ ಅನ್ನಲಿಲ್ಲ! ಬದಲಿಗೆ ಅಂಥ ಅನೇಕ ವ್ಯವಹಾರಗಳನ್ನು ತಾವು ನಡೆಸುತ್ತಿರುವುದಾಗಿ ನಿರ್ಭಿಢೆಯಿಂದ ಹೇಳಿಕೊಂಡರು. ಅವರು ಎಲ್ಲ KYC ನಿಯಮಗಳನ್ನೂ ಉಲ್ಲಂಘಿಸುವ ಮಾತನಾಡಿದ್ದನ್ನು ನಾವು ಕ್ಯಾಮೆರಾದಲ್ಲಿ ಸೆರೆಹಿಡಿದು ತೋರಿದ್ದೇವೆ. ನಾವು ಅಸಲು ಹಣವನ್ನು ಕೊಂಡೊಯ್ದು ವ್ಯವಹಾರ ಮಾಡಿ ಅವರನ್ನು ಸಿಕ್ಕಿ ಹಾಕಿಸಲಿಲ್ಲ ನಿಜ. ಆದರೆ, ನಿಯಮಗಳು ಸ್ಪಷ್ಟವಾಗಿವೆ- 'ನಿಯಮಗಳನ್ನು ಉಲ್ಲಂಘಿಸುತ್ತೇವೆ' ಎಂದು ಹೇಳುವುದೂ ಅಪರಾಧವೇ. ಇಷ್ಟರ ಮೇಲೆಯೇ ಅವರ ಮೇಲೆ ಕಾನೂನುಕ್ರಮ ಜರುಗಿಸಬಹುದು. ನಾವು ನಮ್ಮ ಕಾರ್ಯಾಚರಣೆಯನ್ನು ಜಗಜ್ಜಾಹೀರು ಮಾಡಿದ ಒಂದು ತಾಸಿನ ಒಳಗೆ ಕೇಂದ್ರದ ಹಣಕಾಸು ಮಂತ್ರಿಗಳು ತಾವು ಬ್ಯಾಂಕಿನ ಮುಖ್ಯಸ್ಥರ ಜೊತೆ ಮಾತನಾಡಿರುವುದಾಗಿಯೂ, ಅವರು ಅಂಥ ಅವ್ಯವಹಾರ ಏನೂ ನಡೆದಿಲ್ಲ ಎಂದು ತಮಗೆ ತಿಳಿಸಿರುವರೆಂದೂ ಹೇಳುತ್ತಾರೆ ನೋಡಿ. ಇದು ಖದೀಮ ಕೂಟದ ಸಾಕ್ಷಿಯ ಆಧಾರದ ಮೇಲೆ ಮಾಡುವ ನ್ಯಾಯನಿರ್ಣಯವಲ್ಲದೆ ಮತ್ತೇನು!"

ಈಗಲ್ಲ, 1954ರಷ್ಟು ಹಿಂದೆ 'ಶ್ರೀ 420'ಗೆ ಕತೆ-ಚಿತ್ರಕತೆ ಬರೆದಾಗಲೇ ಕೆ.ಎ.ಅಬ್ಬಾಸ್ ದೇಶ ಇಂಥ ದುರ್ವ್ಯವಹಾರದ ಕಡೆ ವಾಲುತ್ತಿರುವುದನ್ನು ತೋರಿದ್ದ. ಅದರಲ್ಲಿ ನೆನಪಲ್ಲಿ ಅಚ್ಚೊತ್ತುವಂಥ ದೃಶ್ಯ ಒಂದಿದೆ. ಅಂದು ಲಕ್ಷ್ಮಿ ಪೂಜೆಯ ದಿನ. ಶ್ರೀಮಂತಿಕೆಯ ಖಯಾಲಿಗೆ ಬಿದ್ದ ಇಸ್ಪೀಟು ಆಟದಲ್ಲಿ ನಿಪುಣನಾದ ನಾಯಕನ ಜೊತೆ ಶ್ರೀಮಂತರ ಖದೀಮ ಜೂಜಿನ ಖಾನೆಗೆ ಹೋಗಿದ್ದ ನಾಯಕಿಗೆ ಇದು ಅಸಹ್ಯವೆನಿಸಿ ಹೊರನಡೆದಿದ್ದಾಳೆ. ನಾಯಕ ಇಬ್ಬಂದಿತನದಲ್ಲಿ ಅವಳು ಹೋದೆಡೆಗೆ ತಿರುತಿರುಗಿ ನೋಡುತ್ತಿರುವಂತೆ ಮಾದಕ ಮೈಮಾಟದ (ಕಾಮಿನಿ ಕೌಶಲ್) ಖಳನಾಯಕಿ ಮಾಯ ಹಾಡುತ್ತಾಳೆ - 'ಮುಡ್‌ಮುಡ್ ಕೆ ನಾ ದೇಖ್ ಮುಡ್‌ಮುಡ್‌ಕೆ..'(ತಿರುತಿರುಗಿ ನೋಡ್ಬೇಡ...). ಒಂದ್ಸಾರಿ ದೀಪ ಆರಿ, ಕತ್ತಲಾಗಿ ಮತ್ತೆ ಝುಗ್ ಅಂತ ಹತ್ಕೊಳ್ಳತ್ತದೆ; ಹಾಡು ಏರುಗತಿಯಲ್ಲಿ ಅನುರಣಿಸುತ್ತ ಹೋಗಿ ನಾಯಕ ಬಂದ ದಾರಿ ಮರೆಯುತ್ತಾನೆ. ಹೂಂ.. ಅಬ್ಬಾಸ್ ಸಾಬ್ ಸಲಾಂ, ಬಹಾಲ್ ಭಾಯ್ ಸಲಾಂ. ●


ಇದ್ದರೆ ಇರಬೇಕು ಪಂಟರ್ ಸುಖೇಶನಂಗೆ.

ಫಿಜೂಲ್ ಕಾರ್ನರ್

▶▶ ಬೈ ತರ್ಲೇಕರ್

ಟೈಮು: ಮಟಮಟ ಮಧ್ಯಾಹ್ನ. ಲೊಕೇಶನ್ನು: ಫಿಜೂಲಾಬಾದಿನ ಫಕೀರ್ ಸ್ಟ್ರೀಟ್ ಕೊನೆಯಲ್ಲಿರೋ ಆಟದ ಮೈದಾನದ ಒಂಟಿ ಮರದ ಕೆಳಗೆ. ಸೀನು: ಫಿಜೂಲ್ ಸ್ಪಾರ್ಟ್ ಕ್ರಿಕೆಟರ್ಸ್‌ನ ಸ್ಟಾರುಗಳಾದ ಎಂಕ, ಡಿಂಕ, ಮಂಕ ಪ್ಯಾಡನ್ನೇ ಚಾಪೆ ಮಾಡ್ಕಂಡು ಮಲಗಿ ಸೀರಿಯಸ್ಸಾಗಿ ಡಿಸ್‌ಕಸನ್ ಮಾಡ್ತಾ ಅವ್ರೆ. ಆಗ ಟೀಂ ಮ್ಯಾನೇಜರ್ ಫಿಜೂಲ್ ಟೋಪಿವಾಲ ಎಂಟ್ರಿ ಒಡೆದುಬಿಟ್ಟ 'ವಾಟ್ಸಾ ಹೈದಾಸ್! ವಾಟ್ ಡಿಸ್‌ಕಸ್ಸನ್ನು' ಅಂತವ್ರೆ.

ಎಂಕ: 'ಸಾ, ಆ ನನ್ಮಗ ಶ್ರೀಶಾಂತ್ ಮ್ಯಾಚಾದ್ಮೇಗೆ ಏಳ್ಲೇ ಇಲ್ಲ! ಹೈದ



ಬೆಡೆ ಎದ್ದಂಗೆ ಸ್ವಿಂಗ್ ಮಾಡ್ತವ್ನೆ-ಕಂಟ್ರೋಲೇ ಬಡ್ಡೆತ್ತದಕ್ಕೆ! ಬಾಲು ಗಲ್ಲಿಯಿಂದ ಬೈಗೆ ಹೋಗಂಗೆ ಸ್ವಿಂಗ್ ಮಾಡಿ ಉಗಸ್ಕಳ್ತಾನೆ! ಭವಿಷ್ಯ ಇಲ್ಲ ಅಂತ!'

ಫಿ.ಟೋ.: 'ಏ! ಅಂಗಲ್ಲ ಕಣ್ಲಾ.. ಸ್ವಿಂಗ್ ಕಂಟ್ರೋಲ್ ಮಾಡಕ್ಯಾಯ್ತದೆ, ಆದ್ರೆ ಆ ಪಾರ್ಟಿ ಚಡ್ಡಿ ಎಲಸ್ಟಿಕ್ಕು ಲೂಜು ಕಣ್ಲೇ... ಯಾರ್‍ಯಾರೋ ವಯ್ಯಾರಿರು ಸಿಕ್ರು ಅಂತ ಜಾರ್ಸ್ಕಂಬಿಟ್ಟ ಜೆಂದಾಖಾನ್ ಪಾಲಾಗವ್ನೆ.'

ಡಿಂಕ: 'ಅಂಗಲ್ಲ ಬಾಸೂ! ಆ ಮಗೀಗೆ ಸುಖೇಶನಂಥ ದೋಸ್ತಿ ಇದ್ದಿದ್ರೆ ಬಚಾವಾಯ್ತಿದ್ದ.'

ಫಿ.ಟೋ.: 'ಯಾವನ್ಲಾ ಈ ಸುಕೇಸ್ನೂ..?'

ಮಂಕ: 'ಈಗಳಪ್ಪ.. ಬಾಸ್ನೂ ದ ಇಂದೂ ಪೇಪರ್ ಓದೇ ಇಲ್ಲ...'

ಎಂಕ: 'ಏ! ಬಾಸೂ ಏಳ್ನೇ ಕಿಲಾಸ್ ಫೇಲು ಕಣ್ಲಾ! ಇಂಗ್ಲಿಸ್ಪೇಪರ್ ಅದ್ರಲ್ಲುವೇ ಇಂದೂ ಓದಕ್ಕೆ ಅವ್ರೇನು ನಮ್ಮಂಗೆ ಟೆಂತ್ ಸ್ಟ್ಯಾಂಡರ್ಡ್ ಫೇಲೇ... ಒಗ್ಗಿ ಬುಡಿ ಬಾಸ್ನೂ.. ಸುಖೇಶ ಅಂತ ಒಂದು ಸಖತ್ ಪ್ರತಿಭೆ ಅದೆ... ಗುರು 20ನೇ ವಯಸ್ನಾಗೇ ಕೈಚಳಕ ತೋರಿ, ಕಂಬಿ ಎಣಿಸಿ ಬಂದ ಸೂಪರ್ ನನ್ಮಗ. ಇವನಯ್ಯನ್ ಆಮೇಲೆ ಹಿಂತಿರುಗಿ ನೋಡಿಲ್ಲ..'

ಡಿಂಕ: 'ಏನ್ ಚಾಲಾಕಿ ಬಾಸ್ ಸಲಾಂ ಹೊಡೀಬೇಕು... ಕರುನಿಧಿ ಅಳಿಯ, ಯೆಡ್ಡಿ ನಮ್ಮ ಬಾಸ್ನೂ... ಅಳಗಿರಿ ನಮ್ಮ ಚಿಗಪ್ಪ ಅಂತೆಲ್ಲ ನೈಸಾಗಿ ನಂಬ್ಸಿ ಹತ್ತು ಸಿಟಿನಾಗೆ ದೊಡ್ಡ ಕುಳಗಳಿಗೆ ಪಂಗನಾಮ ಆಕಿ ಕೋಟಿ ಕೋಟಿ ದೋಚವ್ನೆ..'

ಎಂಕ: 'ಅಯ್... ಬಾಸ್ನೂ.. ಲೀನ ಅನ್ನೋ ಸಖತ್ ಡವ್‌ನ ಒಳಾಗ್ ಆಕಂಡಿ 19 ಕೋಟಿ ಬ್ಯಾಂಕಿಂದ ಎಗರ್ಸವ್ನೇ... ಹಾ..




ಹಾ.. ಪೋಲಿಸ್ರಿಗೆ ನೈಸ್ ಮಾಡಿ ಎಸ್ಕೇಪ್ ಆಗೋ ಹೀರೋ ಬಾಸ್ನು ಸುಕೇಸ... ಮೊನ್ನೆ ಬೆಂಗ್ಳೂರಾಗೆ ಹಿಡ್ಡಿ ಪರಪ್ಪನ ಅಗ್ರಹಾರಕ್ಕೆ ಕಳ್ಸವ್ರೆ..'

ಮಂಕ: 'ಗ್ಯಾರಂಟಿ... ಒರಾಗ್ ಬಂದೇ ಬರ್ತಾನೆ ಬಾಸ್ನೂ... ನಾವೋಗಿ ಮೀಟ್ ಮಾಡ್ತೀವಿ.. ನೀವೂ ಬನ್ರಿ ಬಾಸ್.. ದೆಸೆ ಎಡಗೆನ್ನೆಗೆ ಹೊಡಿದ್ರೆ ಇವನಮ್ಮನ್...'

ಫಿ.ಟೋ.: 'ಮುಚ್ಕಂಡಿರಲ್ಲಾ.. ಆ ಮೇಯಪ್ಪನ್ ಗತಿ ನಂಗುನೂವೇ ಬರ್ಬೇಕು ಅಂತ ಸ್ಕೆಚ್ಚು ಆಕವ್ರೆನಲ್ಲೇ...' ಅಂದ್ಬುಟ್ಟ ಬ್ರಹ್ಮಚಾರಿ ಟೋಪಿವಾಲ ವಹೀದಾ ರೆಹಮಾನ್ ನೆನಸ್ಕಂಡಿ 'ಕಹಿ ಪೇ ನಿಗಾಹೇ ಕಹಿ ಪೇ ನಿಶಾನ್..' ಹಾಡ್ಕಂಡು ಫೀಲ್ಡಿಗೆ ಏಕೆಟ್ ನೆಡಕ್ಕೋಯ್ತಾರೆ..

ಸೀನ್ ಕಟ್.

"ಕುರುಬರ್ದು ಸ್ವಾಮಿ ಆಗಿದ್ಕೆ ಸಾರ್ಥಕ ಆಯ್ತು ಸಾರ್"



ಯಾಹೂ

ಬಡವರಿಗೆ 1 ರೂಪಾಯಿಗೆ ಕೆ.ಜಿ. ಅಕ್ಕಿ ಕೊಡುವ ಯೋಜನೆಯನ್ನು ಸಹಿಸಲಾಗದ ಮೈಗಳ್ಳರು ಆಘಾತಗೊಂಡು, ಫಲಾನುಭವಿಗಳ ವಿರುದ್ಧ ವಚನವೊಂದನ್ನು ಹೊಸೆದು ಎಸ್ಸೆಮ್ಮೆಸ್ಸು ಮುಖಾಂತರ ಹರಿಯಬಿಟ್ಟಿದ್ದಾರಂತಲ್ಲಾ, ಸದರಿ ವಚನವು "ವಾಸಕ್ಕೆ ಆಶ್ರಯ ಮನೆಯಿರಲು, ಸುಖ ನಿದ್ದೆಗೆ ಅಗ್ಗದ ಮದ್ಯವಿರಲು, ರೂಪಾಯಿಗೆ ಕೆ.ಜಿ. ಅಕ್ಕಿ ಸಿಗಲು, ಕೂಲಿಗೆ ಹೋಗುವ ಮನಸ್ಸೇಕೆ ಹುಟ್ಟಿಂದ ಸಿದ್ದರಾಮ" ಎಂದಿದೆಯಂತಲ್ಲಾ, ಇದನ್ನು ಓದಿ ಸಿಟ್ಟಿಗೆದ್ದು ತಿಳಿದುಕೊಂಡ ಕೂಲಿಕಾರರು "ಅಲ್ಲಾ ಸ್ವಾಮೀ, ಒಂದು ರೂಪಾಯಿಗೆ ಕೆ.ಜಿ. ಅಕ್ಕಿಯಂತೆ 30 ಕೆ.ಜಿ. ಕೊಂಡರೆ ಇಡೀ ತಿಂಗಳು ಹೊಟ್ಟೆ ತುಂಬಾ ಮಜ್ಜಿಗೆ ಕುಡಿದು ಜಗಲಿ ಮೇಲೆ ಕೂತು ಬದುಕ್ತೇವೆ ಎಂದು ಮೈಗಳ್ಳರು ಮಾತನಾಡುತ್ತಿದ್ದಾರಲ್ಲಾ, ಈ ಮುಂಡೆ ಮಕ್ಕಳಿಗೆ ಕೆ.ಜಿ. ಟೊಮೋಟೊ, ಈರುಳ್ಳಿ, ಮೆಣಸಿನಕಾಯಿ, ಬೇಳೆ ಎಣ್ಣೆ ರೇಟು ಗೊತ್ತಾ? ಹೋಗಲಿ ರಾಜಾ ವಿಸ್ಕಿ ರೇಟು ಗೊತ್ತಾ? ಇದಕ್ಕೆಲ್ಲಾ ನಾವು ಏನು ಮಾಡಬೇಕಂತೆ? ಬಡವರನ್ನು ಕಂಡರಾಗದ ಬಿ.ಜೆ.ಪಿ.ಗಳು ಮಾತ್ರ ಇಂತ ಮಾತಾಡಬಲ್ಲರು. ಇದಕ್ಕೆ ನಾವು ಪ್ರತ್ಯುತ್ತರ ಕೊಡಲೇ ಬೇಕು" ಎಂದು ತೀರ್ಮಾನಿಸಿದರಂತಲ್ಲಾ,

"ಮನೆಗೆಲಸಕ್ಕಿಬ್ಬರು ಆಳು,
ಹೆಂಡತಿಗೊಬ್ಬ, ಗಂಡನಿಗೊಬ್ಬಳು,
ನಾಯಿಗೊಂದಾಳು. ತೋಟದ ಕೆಲಸಕ್ಕೆ
ಪಂಚ ಪಾಂಡವರಂತೆ ಐದಾಳು.
ಎಲ್ಲದಕ್ಕೂ ಆಳನ್ನೇ ಅವಲಂಬಿಸಿ
ಹೆಳವರಂತಾಗಿದ್ದ ಮೈಗಳ್ಳರು,
ರೂಪಾಯಿಗೆ ಕೆ.ಜಿ. ಅಕ್ಕಿ ತಿನ್ನುವ
ಜನರನ್ನ ಆಡಿಕೊಳ್ಳುತ್ತಾರೆಂದರೆ, ಅವರು ಬೇರೇನನ್ನೊ ತಿನ್ನುತ್ತಿರಬಹುದು ಸಿದ್ದರಾಮ"

ಎಂಬ ಪ್ರತ್ಯುತ್ತರದ ವಚನ ಕೆರೆದು ಭಟ್ಟನ ಪತ್ರಿಕೆಗೆ ಕಳುಹಿಸಿದರಂತಲ್ಲಾ, ಭಟ್ಟ ಅದನ್ನು 'ನೂರೆಂಟು ದೃಷ್ಟಿ'ಯೊಳಗೆ ಸೇರಿಸಿಕೊಂಡು, ಮುಂದೆ ಯಾರಿಂದಲಾದರೂ ಬರೆಸಲು ಒಳ್ಳೆ ಸಾಮಗ್ರಿ ಸಿಕ್ಕಿದ ನೋಟ ಬೀರಿದನಂತಲ್ಲಾ, ಥೂತ್ತೇರಿ!


* * * * *

ಉಳ್ಳವರಿಗೆ ಆಳಿನ ಚಿಂತೆ, ಬಡವರಿಗೆ ಅಕ್ಕಿ ಚಿಂತೆ ಕಾಡುತ್ತಿರುವಾಗ ಕಾಗಿನೆಲೆ ಕನಕ ಗುರು ತೀರ್ಥ ಸ್ವಾಮಿಗೆ ಕುರಿಯ ಚಿಂತೆಯಾಗಿದೆಯಂತಲ್ಲಾ, ಈ ಬಗ್ಗೆ ಅವರನ್ನೇ ಮಾತನಾಡಿಸಿ ಕುರಿ ಪುರಾಣದ ಮಾಹಿತಿ ಸಂಗ್ರಹಿಸಬೇಕೆಂದು ಫೋನ್ ಮಾಡಲಾಗಿ ರಿಂಗಾಯ್ತು,

ರಿಂಗ್‌ಟೋನ್: "ಕರಿಯ ಕಂಬಳಿ ಗದ್ದುಗೆ ಮಾಡಿ ವೀರಡೊಳ್ಳ ತಂದಿರಿಸಿದರೊ... ವೀರಡೊಳ್ಳ ತಂದಿರಿಸಿದ ಪೂಜಾರಿ..."

"ಹಲೋ ಯಾರ್ರಿ?"

"ನಾನು ಸ್ವಾಮೀಜಿ, ನಿಮ್ಮ ಅಭಿಮಾನಿ, ಯಾಹು ಅಂತ."



"ಯಾಹೂ ಅಂದ್ರೆ ಮುಸ್ಲಿಮರೇನ್ರಿ?"

"ಹೌದು ಸಾರ್. ಒಂದು ಪ್ರಶ್ನೆ ಐತೆ ಸಾರ್."

"ಕೇಳಿ."

"ಏನಿಲ್ಲ ಸಾರ್, ಕುರಿಗೆ ರಾಷ್ಟ್ರದ್ದು ಪ್ರಾಣಿ ಮಾಡಿ ಅದ್ಕೆ ಕುಯಿಬಾರ್ದು ಅಂತ ಹೇಳಿ ನಿಮ್ದು ಸ್ಟೇಟ್‌ಮೆಂಟು ನೋಡಿದೆ. ಅದ್ಕೆ ಹೇಳಿ ಸಾರ್."

"ನೋಡ್ರೀ, ಈ ಕುರಿ ಇದಿಯಲ್ಲಾ ಇದರಂತ ಸಾದು ಪ್ರಾಣೀನೆ ಇಲ್ಲ."

"ನಿಜ ಸಾರ್, ಹಿಂದ್ಕೆ ಹೋದ್ರೆ ಒದಿಯಲ್ಲ, ಮುಂದ್ಕೆ ಹೋದ್ರೆ ಗುದ್ದಲ್ಲ, ಸಖತ್ ಸಾದುಪ್ರಾಣಿ ಸಾರ್."

"ಆಮೇಲೆ ಅದರ ಹಿಕ್ಕೆ ನೋಡಿದ್ದಿರಾ? ಎಷ್ಟು ನಯಿಸಾಗಿ ಆಯುರ್ವೇದಿಕ್ ಮಾತ್ರೆ ತರ ಇರತ್ತೆ, ಅದರ ಹಿಕ್ಕೆ ಭೂದೇವಿಗೆ ಮಾತ್ರೆಯಿದ್ದಂಗೆ. ಗಂಜಲ ಅಂತೂ ಅಮೃತ ಇದ್ದಂಗೆ. ಅದರ ಹಿಕ್ಕೆ, ಮೂತ್ರದಿಂದ ಭೂಮಿ ಫಲವತ್ತಾಗಿರತ್ತೆ, ಅದರ ಹಾಲಂತು ಬಿಡಿ ಅಮೃತ ಇದ್ದಂಗೆ."

"ಅದ್ಯಂಗೆ ಸಾರ್ ಉಚ್ಚೆನೂ ಅಮೃತ, ಹಾಲೂನು ಅಮೃತ?"

"ಉಚ್ಚೆ ಭೂಮಿಗೆ ಅಮೃತ, ಹಾಲು ಮನುಷ್ಯರಿಗೆ ಅಮೃತ. ಅಂತಾ ಪ್ರಾಣಿನ ಕೊಲ್ಲಬಾರದು. ಕೊಲ್ಲದೆಯಿರಂಗೆ ಮಾಡಬೇಕಾದ್ರೆ ರಾಷ್ಟ್ರೀಯ ಪ್ರಾಣಿ ಅಂತ ಘೋಷಣೆ ಮಾಡಬೇಕು."

"ಅಂಗೆ ಮಾಡಿದ್ರೆ ಕುರುಬರು ಎಲ್ಲಾ ಯಕ್ಕುಟ್ಟಿ ಹೋಗ್ತರೆ ಸಾರ್."

"ಅದೇ ನೀವು ತಪ್ಪು ತಿಳಿದಿರೋದು. ನಮ್ಮ ಉತ್ತರ ಕರ್ನಾಟಕದಿಂದ ಸಾವಿರಾರು ಕುರಿ ಹೊಡಕೊಂದು ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನದ ಕಡೆ ಹೋಗ್ತರೆ, ಅಲ್ಲಿ ಕುರಿ ಗೊಬ್ಬರಕ್ಕಾಗಿ ಜಮೀನಿರೋರು ಮಂದೆ ನಿಲ್ಲುಸ್ತರೆ. ಹಣ ಕೊಡ್ತಾರೆ. ಆದರಿಂದ ಕುರುಬರಿಗೆ ಲಾಭ ಬರುತ್ತೆ, ಜೀವನ ಮಾಡ್ತರೆ. ಗೊತ್ತ?"

"ಆದ್ರೆ ನಮ್ದು ಹೊಟ್ಟೆ ಮೇಲೆ ಕಾಲು ಮಡಗಿದ್ರಲ್ಲ ಸಾರ್?"

"ಯಾಕೆ ಹಾಗೇಳ್ತಿರಿ?"

"ನಮ್ದು ಮಟನ್ ಸ್ಟಾಲಿದೆ ಸಾರ್. ದಿವಸ ಯರಡು ಕುರಿ ಕುಯ್ತಿವಿ. ನಮ್ದು ನಜೀರ್ ಭಯ್ಯ ಚರಮುದ್ದು ಬಿಜಿನೆಸ್ ಮಾಡ್ತನೆ."

"ಸರಿ, ಬೇರೆ ಏನಾದ್ರು ವ್ಯವಹಾರ ಮಾಡಿ."

"ಕುರಿದು ಹಾಲಿಗೆ ಮಾರ್ಲ ಸಾರ್?"

"ಕುರಿಗಳು ಮಾರೋವಷ್ಟು ಹಾಲು ಕರಿಯಲ್ಲಾ."

"ಇಲ್ಲಾಂದ್ರೆ ಕುರಿದು ಉಚ್ಚೆ, ಹಿಕ್ಕೆ ಮಾರ್ಲ?"

"ಕುರಿ ರಾಷ್ಟ್ರ ಪ್ರಾಣಿ ಆಗಿ, ಅದರ ವಧೆ ನಿಲ್ಲಿಸಿದ್ರೆ ಅಂತ ಕಾಲಾನೂ ಬರಬವುದು."

"ನೀವು ಕುರುಬರ್ದು ಸ್ವಾಮಿ ಆಗಿ ಸಾರ್ಥಕ ಬಿಡಿ ಸಾರ್."

"ಯಾಕೆ ಹಾಗಂತಿರಿ?"

"ನಿಮ್ದು ಮಾತಿಗೆ ಸರಕಾರ ಕೇಳಿದ್ರೆ ಇನ್ನು ಐದು ವರ್ಷದಲ್ಲಿ ಎಲ್ಲಿ ನೋಡಿದ್ರೂ ಕುರಿಗಳೆ ಕಾಣ್ತವೆ ಸಾರ್. ರಂಜಾನ್ ಹಬ್ಬದಲ್ಲಿ ಈದ್ಗಾ ಮೈದಾನ ನೋಡಿದ್ದಿರಾ? ಮೈದಾನದ ತುಂಬಾ ಸಾಬರಿಗೇ ಕಾಣ್ತರೆ. ಅಂಗೇ ಎಲ್ಲಿ ನೋಡಿದ್ರು ಕುರಿ, ಕುರಿ, ಕುರಿ. ಆದ್ರೆ ಕುರಿ ಸಾಕಿದೋರು ಸುಯ್‌ಸೈಡಿಗೆ ಮಾಡಿಕೊಂಡಿರತರೆ ಅಷ್ಟೆ."

"ಅವುರ್‍ಯಾಕೆ ಆತ್ಮಹತ್ಯೆ ಮಾಡಿಕೊಳ್ತರೆ?"

"ಮತ್ತೆ ಕುರಿಗೆ ಯಾರು ತಕ್ಕೊಳ್ತರೆ? ಅದರಿಂದ ಏನು ಪರ್‌ಯೋಜ್ನ? ಕುಯ್ಯಂಗೆ ಇಲ್ಲ, ತಿನ್ನಂಗೆ ಇಲ್ಲ, ಶ್ರವಣ ಬೆಳಗೊಳದ್ದು ಜೈನರದ್ದು ಜೀವನ ಆಗಿಬಿಡ್ತದೆ ಜನಗಳದು. ನನಿಗೆ ಒಂದು ಡವುಟು ಸ್ವಾಮಿ."

"ಏನ್ ಡವುಟು?"

"ನಿಮ್ದು ಮಟನ್‌ಗೆ ತಿಂತಾಯಿಲ್ಲ ಅನ್ನಸ್ತದೆ. ಅದ್ಕೆ ಎಲ್ಲಾರ್ಗೆ ಬಿಡಸಕ್ಕೆ ಪ್ಲಾನ್ ಮಾಡಿದ್ದೀರಾ."

"ನಾನು ಅಂತ ಸ್ವಾಮಿ ಅಲ್ಲ, ಕುರಿಯ ಒಳ್ಳೆತನ ನೋಡಿ ಅಂತಹ ತೀರ್ಮಾನಕ್ಕೆ ಬಂದಿದ್ದಿನಿ."

"ಸಾರ್ ಮನುಸುರಿಗೆ ಬಿಟ್ಟು ಎಲ್ಲಾ ಪ್ರಾಣಿನೂ ಒಳ್ಳೆದು. ನಮ್ದು ಊರಲ್ಲಿ ಚಿಕ್ಕಯ್ಯ ಅಂತ ಹಂದಿ ಸಾಕಿದಾನೆ. ಅವುರುದು ಜಾತಿಯವರು ಮುಖ್ಯಮಂತ್ರಿಯಾಗ್ ಬುಟ್ರೆ ಹಂದಿ ರಾಷ್ಟ್ರದ್ದು ಪ್ರಾಣಿ, ಅದಕ್ಕೆ ಯಾರು ಕೊಂದಾಕ್ ಬೇಡಿ ಅಂತ ಕೇಳಿದ್ರೆ ಸರೀನಾ?"

"ಕೃಷ್ಣದೇವರಾಯನ ನಾಣ್ಯದಲ್ಲಿ ಹಂದಿ ಚಿತ್ರ ಇತ್ತು ಗೊತ್ತ ನಿನಗೆ?"

"ಚಿತ್ರದಲ್ಲಿ ಇರ್ಲಿ ಸಾರ್, ಅದು ನಮ್ಗೆ ತೊಂದ್ರೆಯಿಲ್ಲ, ಚಿತ್ರದಲ್ಲಿ ದೇವರು ಇರತನೆ, ಅದು ನಮ್ಗೆ ಸಮಸ್ಯೆ ಅಲ್ಲ, ಮನುಸುರು ಮೇಲೆ ಬಂದಾಗ ದೊಡ್ಡದು ಸಮಸ್ಯೆ ಎದುರಾಗ್ತದೆ. ಈಗಾಗ್ಲೆ ಆರೆಸೆಸ್‌ದು ಸುವ್ವರ್‌ಗಳು ದನಗೆ ಸಾಯಿಸಬೇಡಿ ಅಂತ ರೈತರಿಗೆ ಅಟ್ಯಾಕ್ ಮಾಡ್ತಾಯಿದಾರೆ. ಇನ್ನು ಕುರಿಗಳದು, ಆಮೇಲೆ ಹಂದಿಗಳದು. ಯಾರಾದ್ರು ಮಯಿಸಾಸುರುಂದು ರಿಲೇಶನ್ ಎಮ್ಮೆ ಕೋಣದ್ದು ಸವಾಸ್‌ಗೆ ಬರಬೇಡಿ ಅಂದ್ರೆ ಕತೆ ಏನೂ ಸಾರ್. ಎಲ್ಲಾ ಜನಾಂಗದ್ದು ಸ್ವಾಮಿ ಅವುರ್ದು ಜನಾಂಗಕ್ಕೆ ಹೆಲಪ್‌ಗೆ ಮಾಡ್ತಯಿದ್ರೆ ನೀವು ಕುರುಬರ ಬುರುಡೆಗೆ ಬಿಸಿನೀರು ಕಾಯಿಸ್ತಾಯಿದ್ದಿರಲ್ಲಾ, ಜನಗಳು ನಗ್ತರೆ ಅಂತ ಗೊತ್ತಾಗಲಿಲ್ಲವ ಸಾರ್?"

"ಜನಗಳು ಯಾಕೆ ನಗ್ತಿರ್‍ರಿ? ಅಂತದ್ದೇನು ಮಾಡಿದ್ದಿನಿ?"

"ಜನಗಳು ಬಾಳ ಹಿಂದಿನ ಕಾಲದಿಂದ ನಗತರೆ ಸಾರ್. ಯಾರು ತಪ್ಪು ಮಾಡ್ತರೆ ಕುರುಬ ಅಂತರೆ, ಯಾರು ತಪ್ಪು ಮಾತಾಡ್ತರೆ ಕುರುಬ ಅಂತರೆ. ತಾನು ಕುಂತಿರೊ ಕೊಂಬೆ ತಾನೇ ಕಡಕಂಡ್ರೆ ಕುರುಬ ಅಂತರೆ. ಕಂಕುಳಲ್ಲಿ ಕುರಿದು ಮಗು ಇಟ್ಟುಕೊಂಡಿ ಅದ್ಕೆ ಹುಡುಕ್ತಾಯಿದ್ರೆ ಕುರುಬ ಅಂತರೆ. ಅಂದ್ರೆ ಎಲ್ಲಾ ಜಾತಿ ದಡ್ಡರಿಗೂ ಹಾಗಂತರೆ. ಅಂತ ತಪ್ಪು ತಿಳವಳಿಕೆ ವಜಾ ಮಾಡಬೇಕೊ, ನಿಜ ಮಾಡಬೇಕೊ ನೀವೇ ಹೇಳಿ ಸಾರ್."

".......!?"


"ಮಾತಾಡಿ ಸಾರ್."

"......!?"

"ಥೂತ್ತೇರಿಕೆ!!!"


ಒಂದು ಹಿಡಿ ಹಯಕು

ಈ ಸಲ ಎ.ಪಿ. ವಾತ್ಸಾಯನ ಗಾರ್ಸಿಯಾ ಲೋರ್ಕಾ ಬಗ್ಗೆ ಬರೆದಿರುವುದರಿಂದ, ಸ್ಪೇನಿನ ಈ ಲೋರ್ಕಾ ಜಪಾನೀ ಹಯಕುಗಳನ್ನು ಮೆಚ್ಚುತ್ತಿದ್ದರಿಂದ ಇಲ್ಲಿ ಕೆಲವು ಹಯಕುಗಳನ್ನೇ ಕೊಟ್ಟುಬಿಡೋಣ.



ಉಸಿರಿನ ಬಿರುಗಾಳಿ
ಕೂಡ
ಈ ಚಳಿಗಾಲದಲ್ಲಿ
ಬೆಳ್ಳಗಿದೆ.
ನಿದ್ದೆ ಹೊಡೆದ ಬೆಕ್ಕು ಎದ್ದು
ಆಕಳಿಸಿ
ಪ್ರೇಮಿಸಲು ಹೊರಡುತ್ತದೆ.
ದೀಪಕ್ಕೆ ಹತ್ತಿದ
ಅಕ್ಷರಗಳನ್ನು ಕೂಡ ಲೆಕ್ಕಿಸದೆ
ಪ್ರೇಮಿಸುವ ಬೆಕ್ಕು!
ಏನು ಭಯಂಕರ! ಬೆಕ್ಕುಗಳು
ಪ್ರೇಮಿಸುವ ಪದ್ಧತಿ,
ಕಳ್ಳ ಗೋಡೆ ಒಡೆದಿದೆ!
* * * *

ಏನದು ? ಚಂದ್ರ ಚೀರಿದನೆ
ಇಲ್ಲ,
ಇದು ಚಿಟ್ಟೆ.
ಎಷ್ಟು ಕರುಣಾಜನಕ! ಪಾಪ!
ಕ್ರಿಮಿಕೀಟಗಳ ಜೊತೆಯಲ್ಲಿ
ಒಬ್ಬಂಟಿ ಸನ್ಯಾಸಿನಿ!
ಅತಿಥಿ, ಅಭ್ಯಾಗತ,
ಬಿಳಿ ಸೇವಂತಿಗೆ ಹೂವು
ಯಾರೂ ಉಸಿರೆತ್ತಲಿಲ್ಲ
ದುಃಖ ಮತ್ತು ನೋವಿನ ಜಗತ್ತು
ಇಲ್ಲಿ ಕೂಡ
ಅರಳಿ ನಿಂತ ಹೂವುಗಳು.



ಕ್ರಿಯಾಶೀಲ ಬರಹ ಯಾವುದು?

ಇದು ಎಷ್ಟು ಕಷ್ಟ ನೋಡಿ. ಯಾವನೋ ಒಬ್ಬ ತನ್ನ ಪ್ರಬಂಧವನ್ನು ನಾನು ಕದ್ದಿದ್ದೇನೆಂದು ಕೂಗಾಡಿದಾಗ ನಾನು ಬೇಕೆಂತಲೇ ಬರೆಯಲಿಲ್ಲ; ಅವನಿಗೆ ಅನಗತ್ಯವಾಗಿ ಪ್ರಾಮುಖ್ಯ ಕೊಟ್ಟಂತಾಗುತ್ತದೆ ಎನ್ನುವುದು ಕಾರಣ. ಕ್ರಿಯಾಶೀಲ ಬರವಣಿಗೆ ವಿಚಿತ್ರವಾದದ್ದು; ಅದು ಒಂದು ರಿಪೋರ್ಟ್ ಅಲ್ಲ, ನಾವೆಲ್ಲ ನೋಡಿದ್ದನ್ನು ಸುಮ್ಮನೇ ಹೇಳಿದ್ದಲ್ಲ, ಹಾಗೆಯೇ ಕ್ರಿಯಾಶೀಲವಾಗಬೇಕೆಂದು ಅನೇಕಾನೇಕ ಸಂಕೇತ, ಉಪಮೇಯಗಳನ್ನು ಪೇರಿಸಿದರೂ ಕ್ರಿಯಾಶೀಲವಾಗುವುದಿಲ್ಲ, ಮೊನ್ನೆ ನನ್ನ ಗೆಳೆಯರಿಬ್ಬರು ತಮ್ಮ ಒಂದೊಂದು ಹೊಸ ಕತೆಯನ್ನು ನನಗೆ ಕೊಟ್ಟರು. ಒಂದು ಕುಟುಂಬದ ಕತೆ; ಹುಡುಗಿ ತಂದೆತಾಯಿಯ ಮಾತು ಕೇಳದೆ ಗೆಳೆಯನೊಬ್ಬನನ್ನು ಕದ್ದು ಪ್ರೇಮಿಸುವ ಕತೆ. ಹೆತ್ತವರಲ್ಲಿ ತಾಯಿ ಇದಕ್ಕೆ ತೀವ್ರ ಆಕ್ಷೇಪಣೆ ಮಾಡುತ್ತಾಳೆ; ಮಗಳು ತಾಯಿಯನ್ನು ಕಂಡು ಕೋಪಗೊಂಡಿರುತ್ತಾಳೆ. ಕಾಯಿಲೆಯಿಂದ ನರಳುವ ತಾಯಿ ಹಾಸಿಗೆ ಬಿದ್ದು ಔಷಧಿ ತರಲು ಮಗಳಿಗೆ ಹೇಳಿದರೆ ಆಕೆ ತರುವುದಿಲ್ಲ, ತನ್ನ ಪ್ರೇಮಕ್ಕೆ ಅಡ್ಡಿಯಾಗಿರುವ ತಾಯಿ ಸಾಯುವುದನ್ನು ನೋಡುತ್ತಾ ನಿಲ್ಲುತ್ತಾಳೆ.

ಹೀಗೆ ನಾನು ಹೇಳಿದರೆ ಅದರಲ್ಲಿ ಏನೋ ಇದೆ ಅನ್ನಿಸುತ್ತೆ. ಆದರೆ ಇಡೀ ಕತೆ ಬಾಹ್ಯ ಘಟನೆಗಳಲ್ಲಿ ನಿರ್ಜೀವವಾಗಿದೆ. ಹುಡುಗಿಯ ಪ್ರೇಮ ಕೂಡ ನಿಜ ಅನ್ನಿಸುವುದಿಲ್ಲ; ಆದರೆ ನನ್ನ ಅಭಿಪ್ರಾಯವಾಗಿ ಇದನ್ನೆಲ್ಲ ಹೇಗೆ ವಿವರಿಸುವುದು ಎಂದು ನಾನು ಮಂಕಾದೆ. ಗೆಳೆಯ ಸಿಕ್ಕಾಗ ಆತನನ್ನು ಕೂರಿಸಿಕೊಂಡು, 'ಎಲ್ಲ ಸರಿ. ಇದರಲ್ಲಿ ಕ್ರಿಯಾಶೀಲತೆ ಇಲ್ಲ' ಅಂದೆ.

ಆತ ನನ್ನ ವಿವರಣೆಗಾಗಿ ಕಾದ. ನಾನು ಯೋಚಿಸುತ್ತಾ ಹೇಳಿದೆ:

'ನಿನ್ನ ಕತೆಯಲ್ಲಿ ಜನ ಬರಹಗಾರನಾದ ನಿನ್ನ ಹಂಗುತೊರೆದು ತಮ್ಮದೇ ಆದ ಜೀವ ಪಡೆಯುವುದಿಲ್ಲ, ಒಂದು ಸಾಹಿತ್ಯಾಕೃತಿಯ ಪ್ರತಿಯೊಂದು ಪಾತ್ರವೂ ಸಾಹಿತಿಯ ನಿಯಂತ್ರಣದಲ್ಲಿ ಇರುವಂತೆ ಕಂಡರೂ ಸ್ವತಂತ್ರವಾಗಿ ವರ್ತಿಸಬೇಕು; ತನ್ನ ಹಿನ್ನೆಲೆ, ಬೆಳೆದ ರೀತಿಗೆ ತಕ್ಕಂತೆ ಘಟನೆ ಮತ್ತು ಸಹಪಾತ್ರಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು, ಮಾಡಿಕೊಳ್ಳಲಾಗದೆ ತನ್ನ ಜೀವ ಬೆಳೆಸಿಕೊಳ್ಳಬೇಕು. ಅದು ನಿನ್ನ ಕತೆಯಲ್ಲಿ ಆಗುವುದಿಲ್ಲ, ಕತೆ ಬರೆಯಬೇಕೆಂದು ಎಲ್ಲೋ ಆದ ಘಟನೆಯನ್ನು ಮಂಡಿಸಿದಂತಿದೆ....'

"ನನಗೆ ಅರ್ಥವಾಗುತ್ತಿಲ್ಲ ಸರ್. ಸ್ವಲ್ಪ ವಿವರಿಸ್ತೀರಾ"

'ಅದೇ ಕಷ್ಟದ ಕೆಲಸ. ನೀನೇ ಇದನ್ನು ಕಂಡುಕೊಂಡರೆ ಒಳ್ಳೆಯದು. ಒಂದು ಜೀವಂತ ಕೃತಿಗೂ, ಘಟನೆಗಳ ಕಟ್ಟಿಗೂ ವ್ಯತ್ಯಾಸವಿರುವುದು ತಿಳಿಯುತ್ತದೆ. ಅದನ್ನೇ ಒಂದು ಘಟ್ಟದಲ್ಲಿ ವಿಮರ್ಶಕರು ತೋರುವುದು....'

ಯಾವುದಕ್ಕೂ ಕಾಲವಿಲ್ಲ

ನನಗೆ ಬೇಸರವಾದಾಗಲೆಲ್ಲ 'ಸ್ಪೈನ್ ಪಾರ್ಟ್ಸ್ ಆಫ್ ಡಿಸ್ಪೈರ್' ಎಂಬ ಚಿಕ್ಕ ಪುಸ್ತಕ ಓದುತ್ತಿರುತ್ತೇನೆ. 'ಇಷ್ಟು ಒಳ್ಳೆಯ ಪುಸ್ತಕವನ್ನು ನಾನು ಪೂರ್ತಿ ಓದಿಲ್ಲವಲ್ಲ, ಎಂಥ ಅಪ್ರಾಮಾಣಿಕ ಮನುಷ್ಯ!' ಎಂದುಕೊಂಡು ಅದರ ಅಧ್ಯಾಯಗಳನ್ನು ನೋಡುತ್ತಾ ಹೋದರೆ, ಎಲ್ಲವನ್ನೂ ನಾನು ಓದಿರುವುದನ್ನು ಕಂಡು ಚಕಿತನಾಗುತ್ತೇನೆ. ನಿನ್ನೆ ರಾತ್ರಿ ಕೆಮ್ಮು, ಶ್ವಾಸಕೋಶಗಳು ನಿಂತುಹೋದಂತೆ ಉಬ್ಬಸ, ಬೆಳಗ್ಗೆ ಸ್ವಲ್ಪ ಗಟ್ಟಿಯಾಗಿ ಹಲ್ಲು ಉಜ್ಜಿದರೂ ರಕ್ತ, ಎಲ್ಲದರಿಂದ ವಿಚಿತ್ರ ದುಗುಡ, **depression.** ಅದಕ್ಕೆಲ್ಲ ಗಮನ ಕೊಡಬಾರದೆಂದು ಮೆನಾರ್ಡ್ ಪಾರ್ಕರ್ ಕುರಿತ ಶ್ರದ್ಧಾಂಜಲಿಯ ಲೇಖನಗಳನ್ನು ಓದಿದೆ. ಸಾವು ಸಹಜ ಅನ್ನಿಸಿತು. ಈ ಬೇಸರ ಕೂಡ ಪ್ರತಿಯೊಬ್ಬ ಮನುಷ್ಯ ಹೊರಬೇಕಾದ ಭಾರ.

ಟೆಹರಾನ್‌ನ ಸ್ಟೇಡಿಯಂ ಒಂದರಲ್ಲಿ ಇರಾನಿನ ಹೆಣ್ಣುಮಕ್ಕಳು ಓಟದ ಸ್ಪರ್ಧೆಯಲ್ಲಿ ಭಾಗವಹಿಸುವುದನ್ನು ನೋಡಲು ಬ್ರೂಕ್ ಎಂಬ ಆಸ್ಟ್ರೇಲಿಯನ್- ಅಮೆರಿಕನ್ ವರದಿಗಾರ್ತಿ ಕೂತಿದ್ದಾಳೆ.

ಇರಾನಿನಲ್ಲಿ ಗಂಡಸರೆದುರು ಹುಡುಗಿಯರು ಓಟದ ಬಟ್ಟೆ ಹಾಕಿ ಸ್ಪರ್ಧಿಸುವಂತಿಲ್ಲ, ಅವರ ಓಟ ಸರ್ಕಾರಕ್ಕೆ ಮುಖ್ಯವಲ್ಲ, ಹುಡುಗಿಯರು ಹಠ ಮಾಡಿ ಸ್ಟೇಡಿಯಂನಲ್ಲಿ ಓಡುತ್ತಿದ್ದಾರೆ.

ಕೋಳಿಯಂಥ ಒಬ್ಬಳು ಹುಡುಗಿಗೆ ಆಗಲೇ ಇಪ್ಪತ್ತೆಂಟು ವರ್ಷ. ಸ್ಪರ್ಧಿಸಲು ಕೊನೆಯ ಅವಕಾಶ. ಉದ್ದನೆಯ ಕಾಲು ಮುಚ್ಚುವ ಬಟ್ಟೆ, ತಲೆಗೆ ಹೊದ್ದ ಚಾದರ್; ಗನ್ ಸೂಚನೆ ಕೊಟ್ಟೊಡನೆ ಎಲ್ಲರಿಗಿಂತ ಮುಂದೆ ಓಡಿದ ಕೋಳಿಕಾಲಿನ ಹುಡುಗಿ ಹಿಂದೆ ಬೀಳುತ್ತಾಳೆ. ಸೋತೊಡನೆ ಅಳತೊಡಗುತ್ತಾಳೆ.

"ಯಾಕೆ, ಇನ್ನೂ ಸ್ಪರ್ಧೆಯ ಅವಕಾಶಗಳಿವೆಯಲ್ಲ, ಯಾಕೆ ಅಳುತ್ತೀ" ಎಂದು ವರದಿಗಾರ್ತಿ ಬ್ರೂಕ್ ಕೇಳಿದರೆ ಆ ಹುಡುಗಿ ಕಂಬನಿದುಂಬಿ ತಲೆಯಲ್ಲಾಡಿಸುತ್ತಾಳೆ.

'ಇಲ್ಲ, ನನ್ನ ಕಾಲ ಮುಗಿಯಿತು.'

ಮನುಷ್ಯರನ್ನು ಕಾಲ ಹೇಗೆ ಮುಗಿಸುತ್ತದೆ!

• ನವೆಂಬರ್ 4, 1998

ಅವ್ನು ನಮ್ಮೋನು ಸಾ!

ಅಣಕ



• ಎಚ್.ಎಲ್.ಕೇಶವಮೂರ್ತಿ

ಕ್ಷೇತ್ರದ ಮತದಾರ. ನನ್ನ ಗೆಲುವಿಗಾಗಿ ದುಡಿದವನು. ಒಂದು ದಿವಸ ನನ್ನ ಬಳಿಗೆ ಬಂದ. ಅದೂ ಇದೂ ಮಾತನಾಡಿ 'ಬಂದದ್ದೂ...', ಅಂದೆ.

'ಏನಿಲ್ಲ ಸಾ ಹಂಗೆ ಬಂದೆ' ಅಂದ.

'ದರ್ಶನ ಮಾಡೋಕೆ ಅನ್ನು' ಅಂತ ಕುಶಾಲಿ ಮಾಡಿದೆ.

'ಹಂಗಲ್ಲ ಸಾ. ಒಂದು ಕೆಲ್ಸ ಆಗ್ಬೇಕಿತ್ತು' ಎನ್ನುತ್ತಾ ತಲೆ ಕೆರೆದುಕೊಂಡ.

'ನ್ಯಾಯವಾಗಿ ಆಗೋದಾದ್ರೆ ಮಾಡಾನೇಳು.'

'ನೀವು ನ್ಯಾಯ ಅಂದ್ರೆ ನ್ಯಾಯ, ಅನ್ಯಾಯ ಅಂದ್ರೆ ಅನ್ಯಾಯ ಆಯ್ತದೆ ಸಾ.'

ಕಾನೂನುಬಾಹಿರ ಕೆಲಸ ಅನ್ನುವುದು ಮನದಟ್ಟಾಯಿತು. ಸುಮ್ಮನೆ ಅವನ ಮುಖ ನೋಡುತ್ತಾ ಕುಳಿತೆ.

'ಏನಿಲ್ಲ ಸಾ... ನಮ್ ಪಿಎ ಅದಲ್ಲ ಸಾ... ಪಾಪ ಮಕ್ಕಳೊಂದಿಗ ಸಾ.'

'ಏನು ಟ್ರಾನ್ಸ್‌ಫರ್ ಮಾಡುಸ್ಬೇಕಾ?'

'ಅದಲ್ಲ ಸಾ ಮಕ್ಕಳೊಂದಿಗ... ಲೋಕಾಯುಕ್ತಕ್ಕೆ ಸಿಗಾಕಿಕೊಂಡು ಮಣ್ಣು ತಿನ್ನ ಕೆಲ್ಸ ಮಾಡ್ಬುಟ್ಟದೆ ಸಾ.'

'ಲಂಚ ತಿಂದವ್ನೆ, ಅನುಭವಿಸಲಿ ಬಿಡು.'

'ಅದ್ಸರಿ ಸಾ. ಏನ್ಮಾಡೀರಿ ಸಾ ಪಾಪ ಮಕ್ಕಳೊಂದಿಗ.'

'ಅದ್ಕೇನು ಮಾಡು ಅಂತೀಯೆ.'

'ಒಂದು ಫೋನ್ ಹಚ್ಬುಡಿ ಸಾ.'

'ಲಂಚ ತಿಂದಿರೋನ್ನ ಬಿಡಿ ಅಂತ ಹೇಳಲಾ. ಅದೆಲ್ಲ ಆಗಲ್ಲ, ಇಂತಹವಕ್ಕೆಲ್ಲ ನನ್ನತ್ರ ಬರಬ್ಯಾಡ.'


'ನಾನೂ ಬತ್ತಿರ್ಲಿಲ್ಲ, ಬ್ಯಾರೆಯೋರು ಆಗಿದ್ರೆ ಶಾಸಕರು ಇಂತಾದ್ರಲ್ಲಿ ಬಲೇ ಖಡಕ್ಕು. ಆಗಾದಿಲ್ಲ ಅಂದ್ಬುಡ್ತಿದ್ರೆ. ಹಾಳಾದ್ದು ಏನ್ಮಾಡೀರಿ ಇವ್ನು ನಮ್ಮೋನು ಸಾ!'

ಅಲ್ಲಿದ್ದದ್ದು ಪಾಯಿಂಟು. ತಪ್ಪು ಮಾಡಿ ಸಿಗಾಕಿಕೊಂಡಿದ್ದಾನೆ, ನಿಜ. ಆದರೆ ಅವನು ನಮ್ಮ ಜಾತಿಯವನು. ಬಿಡಿಸಬೇಕು!

ಈ ಜಾತಿ ಅನ್ನೋದು ಇದೆಯಲ್ಲ ಅದು ಐನಾತಿ ಬಡ್ಡಿ ಮಗಂದು. ಅದರ ಸೆಳೆತ ಬಲವಾಗಿ ಇರುತ್ತೆ. ಎಷ್ಟೋ ಜಾತಿಗಳವರು ಮುಖ್ಯಮಂತ್ರಿಗಳಾಗಿದ್ದಾರೆ. ಅವರ ಜಾತಿಯ ಬಡವರೆಲ್ಲರ ಉದ್ಧಾರ ಆಗಿಲ್ಲ, ಇದ್ದಂತೆಯೇ ಇದ್ದಾರೆ. ಕೀಳ್ದೆಸೆಗೆ ಇಳಿದಿರುವವರೂ ಉಂಟು. ಇದರ ಅರಿವು ಇರುತ್ತದೆ. ಆದರೂ ನಮ್ಮ ಜಾತಿಯವನೊಬ್ಬ ಮುಖ್ಯಮಂತ್ರಿ ಆದರೆ ಏನೋ ಒಂದು ರೀತಿಯ ಮುದ ಮನಸ್ಸನ್ನು ಆಕ್ರಮಿಸುತ್ತೆ, ಹೆಮ್ಮೆ ಅನ್ನಿಸುತ್ತೆ, ಎದೆ ಉಬ್ಬಿಸಿ ಓಡಾಡುವ ಹಾಗಾಗುತ್ತೆ ಅವನಿಗೂ ನಮಗೂ ಪರಿಚಯ ಹಾಗಿರಲಿ. ಆತನ ಮುಖವನ್ನೂ ನೋಡಿರಲ್ಲ, ಆದರೂ ನಮ್ಮವನು ಎಂಬ ಅಭಿಮಾನದಿಂದ ಎದೆ ಉಬ್ಬುತ್ತೆ. ಒಂದು ತರಹ ಹುಚ್ಚು ಧೈರ್ಯ ಬರುತ್ತೆ ಯಾವ ನನ್ನ ಮಗ ಬಂದ್ರೂ ಬಡ್ದು ಬಿಸಾಕಿ ಜಯಿಸಿಕೋಬೌದು ಅನ್ಸುತ್ತೆ. ಇದಕ್ಕೇ ಇರಬೇಕು ಜಿಲ್ಲೆಯ ಪ್ರಮುಖ ಅಧಿಕಾರಿಗಳು ಒಂದೇ ಜಾತಿಗೆ ಸೇರದಿರುವಂತೆ ಅನಧಿಕೃತ ಕಾನೂನೇ ಇದೆಯಂತೆ!

ಇದೆಲ್ಲ ಯಾಕೆ ಹೇಳಬೇಕಾಯಿತು ಅಂದರೆ ಹಿಂದೆ ಭಾಜಪ ಅಧಿಕಾರದಲ್ಲಿತ್ತು. ಲಿಂಗಾಯತರ ರಾಜ್ಯ, ಬ್ರಾಹ್ಮಣರ ದರ್ಬಾರು ನಡೀತಿತ್ತು, ಅವರ ಜಾತಿಯ ಮಠಗಳಿಗೂ ಕೋಡು ಬಂದಿತ್ತು, ಅವೂ ಅವುಗಳ ಯೋಗ್ಯತೆಗೆ ತಕ್ಕಂತೆ ಮೆರೆದೊ. ಆದಾಯವನ್ನೂ ಮಾಡಿಕೊಂಡೊ. ಈಗ ಕಾಗಿನೆಲೆ ಮಠದ ಸ್ವಾಮಿಗಳಿಗೆ ಇದ್ದಕ್ಕಿದ್ದಂತೆ ಹುಮ್ಮಸ್ಸು ಬಂದಿರುವಂತಿದೆ. ದಿಢೀರ್ ಅಂತ ಸುದ್ದಿಯಾಗವ್ರೆ. ಅದೆಂಗಾದ್ರಪಾ ಅಂದರೆ... ಅವರು ಕುರಿ ರಾಷ್ಟ್ರೀಯ ಪ್ರಾಣಿ ಆಗಲಿ ಎಂದಿದ್ದಾರೆ! ಆದರೆ ಇದೇನಪ್ಪಾ ಇದು, ಇದುವರೆವಿಗೂ ಹುಲಿ ರಾಷ್ಟ್ರೀಯ ಪ್ರಾಣಿ ಆಗಿತ್ತಲ್ಲ ಅದರ ಬದಲಾವಣೆ ಮಾಡಬೇಕಾ? ಒಬ್ಬೊಬ್ಬ ಮುಖ್ಯಮಂತ್ರಿ ಆದಾಗಲೂ ಒಬ್ಬೊಬ್ಬ ಸ್ವಾಮಿ ಒಂದೊಂದು ತರಹ ಹೇಳ್ತಾರಲ್ಲ? ಹಂಗೇ ಮಾಡಾಕಾಯ್ತದ ಅಂದರೆ ಅದು ಹಂಗಿರಲಾರದು ಕಣ್ರೀ. ಹುಲಿ ಅನ್ನೋದು ನಾಶ ಆಗ್ತಿರೋ ಸಂತತಿ. ಎಲ್ಲಾ ನಾಶವಾದ ಮೇಲೆ ರಾಷ್ಟ್ರೀಯ ಪ್ರಾಣಿಗೆ ಏನು ಮಾಡ್ತೀರಿ? ಒಂದೂ ಇಲ್ಲದ ಹಾಗೆ ಆಗುವವರೆಗೆ ಅವೂ ಇರಲಿ. ಜೊತೆಗೆ ಕುರೀನೂ ಇರಲಿ. ಇದೊಂದು ತರಹ ಸ್ಟೆಪ್ನಿ ಅರೇಂಜ್‌ಮೆಂಟು! ಮೆಯ್ನ್‌ವೀಲು ಹೋದ ಮೇಲೆ ಸ್ಟೆಪ್ನೀನೆ ಗತಿ ಅಲ್ವಾ, ಹಂಗಿರಬೇಕು!

ಕುರಿ ಯಾಕೆ ರಾಷ್ಟ್ರೀಯ ಪ್ರಾಣಿ ಆಗಬೇಕು ಅನ್ನುವುದಕ್ಕೆ, ಕಾರಣಾನೂ ಕೊಟ್ಟವ್ರೆ. ಪ್ರಾಣಿಗಳಲ್ಲಿ ಅತ್ಯಂತ ಶ್ರೇಷ್ಠ ಯಾವುದು ಅಂತ ಯಾರಾದರೂ ಕೇಳಿದರೆ ನಮ್ಮಂತಹ ಪೆದ್ದು ಮುಂಡೇವು ಏನನ್ತೀವಿ? ಶ್ರೇಷ್ಠ ಕನಿಷ್ಠ ಅಂತ ಪ್ರಾಣಿಗಳಲ್ಲಿ ಎಲ್ಲಿಂದ ಬಂತು?



ಅವೆಲ್ಲ ಒಂದೇ ಅಂತೀವಿ. ಹಿಂದೂತ್ವ ತಲೆ ಒಳಗೆ ತುಂಬಿದ್ದರೆ 'ಗೋವು' ಅಂತೀವಿ. ಅದು ಅಲ್ಲವಂತೆ. 'ಕುರಿ' ಅಂತೆ! ಕಾಗಿನೆಲೆ ಗುರುಗಳೇ ಹಂಗಂದವ್ರೆ. ಶ್ರೀಗಳು ಇನ್ನೂ ಮುಂದುವರೆಸಿ ಹೇಳುತ್ತಾರೆ. ಎಮ್ಮೆಯೊಂದಿಗೆ ಆಡಿ ಹಸು ಹೇಲು ತಿನ್ನಬಹುದಂತೆ. (ನಾವೆಲ್ಲ ಹಂದಿಯೊಂದಿಗಾಡಿ ಹಸಿ... ಹೇಲುತಿಂತು ಅನ್ನುವುದನ್ನು ಕೇಳಿದ್ವೊ, ಎಮ್ಮೆ ಹೇಲು ತಿನ್ನುತ್ತೆ ಎನ್ನುವುದು ವಿನೂತನ ಸಂಶೋಧನೆ!) ಆದ... ಕುರಿ ಇದೆಯಲ್ಲ ಅದು ಎಂದೂ ಹೊಲಸು ತಿನ್ನುವುದಿಲ್ಲ ಇಷ್ಟು ಮಾತ್ರವಲ್ಲ, ಅದು ವಿಷದ ಆಹಾರವನ್ನು ಸೇವಿಸಿ ಅದನ್ನು ಅರಗಿಸಿಕೊಳ್ಳುವ ಶಕ್ತಿ ಹೊಂದಿದೆ. ಅಂದರೆ ಸ್ವಾಮೀಜಿ ಅವರ ಅಭಿಪ್ರಾಯದಂತೆ ಕುರಿ ಅಂದರೆ ಒಂದು ರೀತೀಲಿ ವಿಷಕನ್ಯೆ ಇದ್ದಂತೆ! ಅದರ ಮಾಂಸ ತಿಂದರೆ ವಿಷವನ್ನೇ ತಿಂದ ಹಾಗಾಯಿತು. ಇಂತಹ ವಿಷಪೂರಿತ ಆಹಾರ ಸೇವಿಸಿ ಭಕ್ತರು ಸಾಯಬಾರದು ಎಂಬ ಘನೋದ್ದೇಶದಿಂದಲೆ ಪೂಜ್ಯ ಸ್ವಾಮೀಜಿಯವರು 'ಕುರಿ ವಧೆ ನಿಷೇಧಿಸಲಿ' ಎಂದಿದ್ದಾರೆ.

ಅಲ್ಲಾ ಭಾಜಪ ಸರ್ಕಾರ ಗೋಮಾಂಸ ನಿಷೇಧ ಅಂ... ಕಾನೂನು ಮಾಡಿತ್ತಲ್ಲಾ ಹಂಗೇನೆ ಈ ಸ್ವಾಮಿಗಳು ಕುರಿ ಮಾಂಸ ನಿಷೇಧ ಕಾನೂನು ಬರಲಿ ಅಂತ ಕುಂತವ್ರೆ ಮಾಂಸಾನೆ ತಿನ್ನಬ್ಯಾಡಿ ಅಂದ್ಮೇಲೆ ಅದು ಕೊಡೋ ಮಿಳ್... ಹಾಲಿಗೂ, ಹಾಕೋ ಬೊಗಸೆ ಹಿಕ್ಕೆಗೂ ಕುರಿ ಸಾಕೋರು... ಇದಾರಾ...!

ಭಾಜಪ ಬಂತು ಡುಂಡುಂ
ಗೋಮಾಂಸ ನಿಷೇಧ ಅಂತು
ಕಾಗಿನೆಲೆ ಬಂತು ಡುಂಡುಂ
ಕುರಿಮಾಂಸ ನಿಷೇಧ ಅಂತು
ಹಂದಿ ಚಿಕ್ಕ ಬಂದ ಡುಂಡುಂ
ಹಂದಿಮಾಂಸ ನಿಷೇಧ ಅಂದ!

....

....

ವಾರ್ತಾಭಾರತಿಯಲ್ಲಿ ಬಂದದ್ದು
ಕುರಿ ಗೋವಿಗಿಂತ ಶ್ರೇಷ್ಠ
ಹೌದು ರುಚಿಯಲ್ಲಿ!

ಪ್ರಾದೇಶಿಕ ಪಕ್ಷ!

ಕನ್ನಡ ಮಕ್ಕಳ ಪಕ್ಷ.

ಅದು ಪ್ರಾದೇಶಿಕ ಪಕ್ಷ ಅನ್ನುವ ನಂಬಿಕೆ ಚಂಪಾಗ...

ಆ ಪಕ್ಷದ ಶಾಸಕ ಅಶೋಕ್ ಖೇಣಿ.


ನೂರು ಪುಸ್ತಕಗಳನ್ನು ಓದುವುದೂ ಒಂದೇ, ವಾಸು ಲೇಖನ ಓದುವುದೂ ಒಂದೆ

ಪತ್ರಿಕೆಯ ಜೂನ್ 5, 2013ರ ಸಂಚಿಕೆಯಲ್ಲಿ ಡಾ.ವಾಸು ಅವರು ಬರೆದ 'ಸೋಮಾರಿ ಬಡವರು ಮತ್ತು ಕ್ರಿಯಾಶೀಲ ಮಧ್ಯಮ ವರ್ಗ' ಎಂಬ ಲೇಖನ ತುಂಬಾ ಸೊಗಸಾಗಿದೆ. 30 ರೂ.ಗೆ 30 ಕೆ.ಜಿ. ಅಕ್ಕಿ ಕೊಡುವ ಸರ್ಕಾರದ ನೀತಿಯನ್ನು ಪ್ರತಿಯೊಬ್ಬರೂ ಮೆಚ್ಚಲೇಬೇಕು. ಅದಕ್ಕೆ ಪ್ರತಿಯೊಬ್ಬರೂ ಈ ಲೇಖನವನ್ನು ಓದಲೇಬೇಕು.

ಬಡವರ ಬಗ್ಗೆ ನಿಜವಾದ ಕಾಳಜಿ ಹೊಂದಿರುವ ನನಗೇ ವಿಷಯ ಅರ್ಥವಾಗಿರಲಿಲ್ಲ, ಲೇಖನ ಓದುವುದಕ್ಕೆ ಮುಂಚೆ, ಈ 30 ಕೆ.ಜಿ. ಅಕ್ಕಿ ಜನರನ್ನು ಸೋಮಾರಿಗಳನ್ನಾಗಿ ಮಾಡುತ್ತದೆ ಎಂದೇ ನನಗೆ ಅನಿಸಿತ್ತು. ಅದು ಬಡವ-ಬಲ್ಲಿದರ ನಡುವಿನ ಅಂತರವನ್ನು ಕಡಿಮೆ ಮಾಡಲು ಒಂದು ಪರಿಣಾಮಕಾರಿ ಸಾಧನ ಎಂದು ಅನ್ನಿಸಿಯೇ ಇರಲಿಲ್ಲ.

ಈ ಲೇಖನಕ್ಕಾಗಿ ಡಾ.ವಾಸು ಅವರನ್ನು ಎಷ್ಟು ಅಭಿನಂದಿಸಿದರೂ ಸಾಲುವುದಿಲ್ಲ. 100 ಪುಸ್ತಕಗಳನ್ನು ಓದುವುದೂ ಒಂದೇ, ಇಂತಹ ಒಂದು ಲೇಖನ ಓದುವುದೂ ಒಂದೇ.

ಡಾ.ವಾಸು ಅವರಿಂದ ಇಂತಹ ಮತ್ತಷ್ಟು ಅರ್ಥಪೂರ್ಣ ಲೇಖನಗಳು ಬರಲೆಂದು ಆಶಿಸುತ್ತೇನೆ.



-ವೀರಬ್ಯಾತಯ್ಯ, ಬೆಂಗಳೂರು

ದಮನಿತರ ಬದುಕು ಮುಖ್ಯವಾಗಲಿ

ಪತ್ರಿಕೆಯ ಇತ್ತೀಚಿನ ಸಂಚಿಕೆಗಳು ತುಂಬಾ ಚೆನ್ನಾಗಿ ಮೂಡಿಬಂದಿವೆ. ಅದರಲ್ಲೂ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವಿಷಯಗಳನ್ನು ಕುರಿತು ಪ್ರಕಟಗೊಂಡ ಲೇಖನಗಳು ಚೆನ್ನಾಗಿದ್ದವು. ಡಾ.ವಾಸು ಅವರ ಅಂಕಣ 'ಅಂಚಿನಿಂದ' ಚೆನ್ನಾಗಿ ಮೂಡಿಬರುತ್ತಿದೆ.



ಮುಖ್ಯವಾಹಿನಿಯ ಪತ್ರಿಕೆಗಳು ಹೆಚ್ಚು ಗಮನ ಹರಿಸದ ವಿಷಯಗಳ ಬಗ್ಗೆ ನಿಮ್ಮ ಪತ್ರಿಕೆ ಬರೆಯುತ್ತಿರುವುದು ಸ್ವಾಗತಾರ್ಹ. ಎಡಪಂಥೀಯ ಬುದ್ಧಿಜೀವಿಗಳು ಅನವಶ್ಯಕವಾಗಿ ಬೃಹತ್ ಆಗಿಸುವ ಹಿಂದೂತ್ವ ಭಯೋತ್ಪಾದನೆ ಮತ್ತು ಜಾತ್ಯತೀತತೆ ತರಹದ ಸಂಗತಿಗಳ ಬಗ್ಗೆ ಫೋಕಸ್ ಮಾಡದೆ ಸಾವಿರಾರು ಜನರ ನಿತ್ಯ ಬದುಕನ್ನು ತಾಗುವ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ವಿಷಯಗಳ ಬಗ್ಗೆ, ಅದರಲ್ಲೂ ಬಡವರ, ಗ್ರಾಮೀಣ, ಬುಡಕಟ್ಟು ಮತ್ತು ಹಿಂದುಳಿದವರ, ಜೀವನವನ್ನು ಪತ್ರಿಕೆ ಮುಖ್ಯವಾಗಿಸಿಕೊಂಡರೆ ಉತ್ತಮ.

-ಡಾ. ಅವಿನಾಶ್ ಶೆಟ್ಟಿ, ಮಣಿಪಾಲ್

ಐಪಿಎಲ್ ಹಗರಣ ಮತ್ತು ತನಿಖಾಧಿಕಾರಿಯ ಸಾವು

ಐಪಿಎಲ್‌ನಲ್ಲಿಯ ಸ್ಪಾಟ್ ಫಿಕ್ಸಿಂಗ್ ವಿಷಯದಲ್ಲಿ ಕೇವಲ ಕ್ರಿಕೆಟ್ ಆಟಗಾರರಾದ ಶ್ರೀಶಾಂತ್ ನಾಯರ್, ಅಂಕಿತ್ ಚವಾಣ್, ಅಜಿತ್ ಚಾಂಡಿಲಾ ಮತ್ತು ಬಿಸಿಸಿಐ ಮುಖ್ಯಸ್ಥ ಶ್ರೀನಿವಾಸನ್ ಅವರ ಅಳಿಯ ಗುರುನಾಥನ್ ಮತ್ತು ಬುಕ್ಕಿಗಳ ಬಗೆಗಿನ ಸುದ್ದಿಗಳನ್ನು ಮಾತ್ರ ಮಾಧ್ಯಮಗಳು ವೈಭವೀಕರಿಸುತ್ತಿವೆ.

ಆದರೆ ಎಲ್ಲಕ್ಕಿಂತ ಮುಖ್ಯವಾದ ವಿಷಯವೊಂದನ್ನು ಮಾಧ್ಯಮಗಳು ಮರೆಮಾಚುತ್ತಿವೆ. ಅದು ಈ ಸ್ಪಾಟ್ ಫಿಕ್ಸಿಂಗ್ ಹಗರಣದ ಬಗ್ಗೆ ಅವಿರತವಾಗಿ ತನಿಖೆ ನಡೆಸಿ, ಸಾಕ್ಷಿ ಸಹಿತ ಎಫ್‌ಐಆರ್ ದಾಖಲಿಸಿದ ಪೊಲೀಸ್ ಇನ್ಸ್‌ಪೆಕ್ಟರ್‌ನ ಕಗ್ಗೊಲೆ ಅವರ ಮನೆಯೊಳಗೇ ಆಗಿದ್ದು!!

ಬದ್ರೀಶ್ ದತ್ ಎಂಬ ದೆಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಸ್ಪಾಟ್ ಫಿಕ್ಸಿಂಗ್ ಬಗ್ಗೆ ಒಂದು ತಿಂಗಳಿಗೂ ಹೆಚ್ಚು ಕಾಲ ಗುಪ್ತವಾಗಿ ತನಿಖೆ ನಡೆಸಿ, ಪೂರ್ಣ ಆಧಾರಗಳು ಸಿಕ್ಕಮೇಲೆ, ಎಫ್‌ಐಆರ್ ದಾಖಲಿಸಿಯೇ ಬಿಟ್ಟರು. ಹೀಗೆ ಮಾಡದಂತೆ ಅವರ ಮೇಲೆ ವಿಪರೀತ ಒತ್ತಡಗಳು ಬಂದಿದ್ದವಂತೆ. ಆದರೆ ಅವರು ಅದ್ಯಾವುದಕ್ಕೂ ಕೇರ್ ಮಾಡದೆ ಮುಂದುವರಿದು ಕಳೆದ ಮೇ 9ರಂದು ಎಫ್‌ಐಆರ್ ದಾಖಲಿಸಿದರು. ಅದರ ಮರುದಿನವೇ - ಅಂದರೆ ಮೇ 10ಕ್ಕೆ - ಅವರ ಮನೆಯಲ್ಲೇ ಅವರನ್ನು ಗುಂಡಿಕ್ಕಿ ಕೊಲ್ಲಲಾಯಿತು. ಇದರಲ್ಲಿ ಭೂಗತ ಜಗತ್ತಿನ ಕೈವಾಡದ ಶಂಕೆ ಇದೆ.



ಎಫ್‌ಐಆರ್ ದಾಖಲಿಸಿದ್ದು ಪೊಲೀಸ್ ಇಲಾಖೆಯವರಿಗೆ ಬಿಟ್ಟರೆ ಬೇರಾರಿಗೂ ಗೊತ್ತಿರಲಿಲ್ಲ, ಹಾಗಾದರೆ ಹೊರಗಿನವರಿಗೆ ಇದರ ಸುದ್ದಿ ಮುಟ್ಟಿಸಿದ್ದು ಯಾರು? ಬದ್ರೀಶ್ ದತ್ತರ ಮನೆಯ ವಿಳಾಸ ಹೊರಗಿನವರಿಗೆ ಕೊಟ್ಟಿದ್ದು ಯಾರು? ಪೊಲೀಸ್ ಇಲಾಖೆಯವರೇ ಆಗಿರಬೇಕು ತಾನೇ? ಮುಂಬೈ ಹಾಗೂ ದಿಲ್ಲಿಯ ಬಲಾಢ್ಯ ರಾಜಕಾರಣಿಗಳು ಮತ್ತು ಉದ್ಯಮಿಗಳು ಸ್ಪಾಟ್ ಫಿಕ್ಸಿಂಗ್‌ನ ಹಿಂದಿದ್ದಾರೆ ಎಂಬ ಸಂಶಯಕ್ಕೂ ಈ ಕೊಲೆ ಇಂಬು ಕೊಡುತ್ತದೆ.

ಮಾಧ್ಯಮದವರು ಈ ವಿಷಯವನ್ನು ಯಾಕೆ ಮುಖ್ಯವಾಗಿ ಗಮನಿಸುತ್ತಿಲ್ಲ? ತನಿಖಾ ವರದಿಗಾರರು ಏನು ಮಾಡುತ್ತಿದ್ದಾರೆ?

ಸಿನಿಮಾ ನಟಿಯರನ್ನು ಬುಕ್ಕಿಗಳು ಫಿಕ್ಸಿಂಗಿಗೆ ಬಳಸಿರುವ ಬಗ್ಗೆ ಹಾಗು ಬಿಸಿಸಿಐ ಮುಖ್ಯಸ್ಥ ಶ್ರೀನಿವಾಸನ್‌ನನ್ನು ಅಧ್ಯಕ್ಷ ಪಟ್ಟದಿಂದ ಇಳಿಸುವ ಸುದ್ದಿಗಳಿಗೆ ವಿಪರೀತ ಪ್ರಾಮುಖ್ಯತೆ ಕೊಡುವ ಮಾಧ್ಯಮಗಳು ಮೂಲತಃ ಈ ಕೊಳಕು ಹೊರಬರುವಲ್ಲಿ ಕಾರಣಕರ್ತನಾದ ನತದೃಷ್ಟ ಪೊಲೀಸ್ ಅಧಿಕಾರಿ ಬದ್ರೀಶ್ ದತ್ತರನ್ನು ಮರೆತಿರುವುದು ಖೇದಕರ.

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಗೌರಿ ಲಂಕೇಶ್ ಅವರ 'ಬಂಡಾಯವೆದ್ದ ಮಹಿಳೆಯ... ಕತೆ' ಮತ್ತು ಪ್ರವೀಣ್ ಶೆಟ್ಟಿ ಅವರ 'ರಾಮ ಸೇತು... ಲೇಖನಗಳು ಚಿಂತನೆಗೆ ಹಚ್ಚಿದವು.

ನಾನು ಕಳೆದ 22 ವರ್ಷಗಳಿಂದ ಪತ್ರಿಕೆಯ... ಓದುಗನಾಗಿದ್ದೇನೆ.

- ಲಕ್ಷ್ಮಣ್, ಎಸ್ ಎಂ ಎಸ್ ಮೂಲ...

'ಸಾರ್ವಜನಿಕ ಜವಾಬ್ದಾರಿ' ಮತ್ತು 'ಖಾಸಗಿ ನಂಬಿಕೆ'

ಈ ವಾರದ 'ಘೂತ್ತೇರಿ' (ಮೀನುಗಾರಿಕೆ ಮಂ... ಅಂದ್ರೆ ಮೀನು ತಿನ್ನೋದಲ್ಲ', ಜೂನ್ 12, 201... ಸಂಚಿಕೆ) ಅಂಕಣವನ್ನು ನಾನು ಬಸ್ಸಿನಲ್ಲಿ ಪಯಣಿಸುತ್ತಿದ್ದಾ... ಓದಿ ದೊಡ್ಡ ದನಿಯಲ್ಲಿ ನಗುವಂತೆ ಮಾಡಿತು (... ಯಾರೂ ಹೆಚ್ಚು ಗಮನಿಸಲಿಲ್ಲ!)

ಆದನ್ನು ಓದಿ ನನಗನ್ನಿಸಿದ್ದು ಇಷ್ಟು: ನಮ್ಮ ದೇಶ... ಶಿಷ್ಟ ವಿದ್ಯಾವಂತರಿಗೆ 'ಸಾರ್ವಜನಿಕ ಜವಾಬ್ದಾರಿ' ಮ...

ಅವರು ಇತ್ತೀಚೆಗೆ ಪ್ರಮಾಣವಚನ ಸ್ವೀಕರಿಸಿದರು.

ಯಾವ ಭಾಷೆಯಲ್ಲಿ?

ಇಂಗ್ಲಿಷಿನಲ್ಲಿ!

ಕನ್ನಡ ಮಕ್ಕಳ ಪಕ್ಷದ ಶಾಸಕ ಇಂಗ್ಲಿಷಿನಲ್ಲಿ ...ಮಾಣವಚನ!

...ಓದಲು ಬರೆಯಲು ಕನ್ನಡ ಬಾರದು ಎನ್ನುವ ಸೂಚನೆ!

ಈ ತರಹದ ಶಾಸಕರೂ ಇದ್ದಾರೆ. ಅವರು ತಮಗೆ ...ವಿರುವ ಭಾಷೆಯ ಅಕ್ಷರಗಳಲ್ಲಿ ಬರೆಸಿಕೊಂಡು ಕನ್ನಡದಲ್ಲಿ ...ಮಾಣವಚನ ಸ್ವೀಕರಿಸಿದರು!

...ಭ್ರಮೆಗೆ ಕೊನೆ ಇಲ್ಲ.

ರದ್ದು ಮಾಡಿ!

ಚುನಾವಣೆಯಲ್ಲಿ ಗೆದ್ದರೆ ಶಾಸಕರಾಗಲ್ಲ. ಪ್ರಮಾಣವಚನ ...ಕರಿಸಬೇಕು.

ಈ ಪ್ರಮಾಣವಚನ ಯಾವ ರೂಪದಲ್ಲಿರಬೇಕು?

ಸಂವಿಧಾನವೇ ಸ್ಪಷ್ಟಪಡಿಸಿದೆ.

ಕೆಲವರು ಇದನ್ನು ಪಾಲಿಸಲಿಲ್ಲ. ಮನಸೋ ಇಚ್ಛೆ ...ಕರಿಸಿದರು.

ಇದಕ್ಕೆ ಕೆಲವರ ಆಕ್ಷೇಪ.

...ಟಿವಿಯ ಪ್ರಮುಖ ಸುದ್ದಿ ಸಮಯದಲ್ಲಿ ಇದರ ...ಪ. ಅಲ್ಲಿ ಕೇಳಿಬಂದದ್ದು- 'ಪುಟಗೋಸಿ ಪ್ರಮಾಣ ...ನ.'

...ಜಾಣ ಸುದ್ದಿ ವಾಚಕರ ವಿಶ್ಲೇಷಕರು ಈ ಪದ ಯಾಕೆ ...ಸಿದರು?

...ಯಾರ ಹೆಸರಿನಲ್ಲಿ ಹೇಗೆ ತೆಗೆದುಕೊಂಡರೂ ಅಷ್ಟೆ. ...ರು ಆ ವಚನ ಪಾಲಿಸಲ್ಲ.

...ನ್ಯಾಯಾಲಯಗಳಲ್ಲೂ ಹೇಳಿಕೆ ನೀಡುವ ಮುನ್ನ ...ಮಾಣವಚನ ಸ್ವೀಕರಿಸಬೇಕು. ಸತ್ಯ ಹೇಳುತ್ತೇನೆ. ಸತ್ಯವನ್ನು ...ಬಿಟ್ಟು ಬೇರೆ ಏನನ್ನೂ ಹೇಳುವುದಿಲ್ಲ ಎನ್ನುತ್ತಾರೆ. ಅದಕ್ಕೆ ...ಬದ್ಧವಾಗಿ ನಡೆದುಕೊಳ್ಳುತ್ತಾರೆ.

...ಇಂತಹ ಪ್ರಮಾಣವಚನ ಬೇಡವೆ?

...ಬೇಡ ಎಂದದಾರೆ ಸತ್ಯ ಹೇಳುವವರೇ ಇಲ್ಲ, ಸುಳ್ಳರೇ ... ಎಂದ ಹಾಗಾಗುವುದಿಲ್ಲವೆ? ●

'ಜೀವನ ನೋಡಿ ಸಿನಿಮಾ ಮಾಡಬೇಕು' -ಧನಂಜಯ

ಕನ್ನಡ ಸಿನಿಮಾರಂಗದಲ್ಲಿ 'ಡೈರೆಕ್ಟರ್ಸ್ ಸ್ಪೆಷಲ್'ನ ಹೀರೋ ಧನಂಜಯ ಒಂದು ಪುಟ್ಟ ಸಂಚಲನ ಸೃಷ್ಟಿಸಿದ್ದಾರೆ. ನಟನಾ ಪ್ರತಿಭೆ, ಒಳ್ಳೆಯ ಮೈಕಟ್ಟು ಹಾಗೂ ಚಹರೆ ಇರುವ ಧನಂಜಯ ಕನ್ನಡ ಸಿನಿಮಾದ ಭರವಸೆಯ ನಾಯಕ ನಟನ ಸಾಲಿಗೆ ಸೇರಬಲ್ಲ ಕಲಾವಿದ. ಅವರೊಂದಿಗೆ ನಡೆಸಿದ ಮಾತುಕತೆ ಇಲ್ಲಿದೆ.

ಲಂ: ಮೊದಲ ಸಿನಿಮಾ ಅನುಭವ ಹೇಗೆನಿಸಿತು?

ಧ: ಖುಷಿ... ಸಿನಿಮಾ ರೆಡಿಯಾಗಿ ಜನರ ಮಧ್ಯೆ ಕುಳಿತು ನೋಡುವಾಗ ಖುಷಿ ಅನ್ನಿಸುತ್ತೆ. ನಾಟಕಗಳಲ್ಲಿ ಪ್ರೇಕ್ಷಕರ ಪ್ರತಿಕ್ರಿಯೆ ತಕ್ಷಣ ಗೊತ್ತಾಗುತ್ತೆ, ಆದರೆ ಸಿನಿಮಾದಲ್ಲಿ ಟೇಕ್-ರೀಟೇಕ್ ಇತ್ಯಾದಿ ಆಗಿ ರೀಲಿಸಾಗೋವರೆಗೂ ನಮಗೇ ನಮ್ಮ **performance** ಬಗ್ಗೆ ಗೊತ್ತಾಗಿರಲ್ಲ.

ಲಂ: ನೀವು ರಂಗಭೂಮಿ ಹಿನ್ನೆಲೆಯಿಂದ ಬಂದವರು...?

ಧ: ಹೌದು ಅರಸೀಕೆರೇಲಿ ಹೈಸ್ಕೂಲ್ ದಿನದಿಂದಲೂ ನಾಟಕ ಮಾಡೋ ಗೀಳಿತ್ತು. ಬಾಲ್ಯದಲ್ಲೂ ನಮ್ಮ ಊರಿನಲ್ಲಿ ನಾಟಕಗಳಿದ್ದಾಗ ರಾತ್ರಿ ಇಡೀ ಕುಳಿತು ನೋಡುತ್ತಿದ್ದೆ. ತಂದೆ ಹಾಗೂ ಚಿಕ್ಕಪ್ಪ ಎಲ್ಲಾ ನಟರೆ. ಮೈಸೂರಲ್ಲಿ ಇಂಜಿನಿಯರಿಂಗ್ ಓದಿದ್ದಾಗ ಮೈಮ್ ರಮೇಶ್‌ರ **DPIER** ಟೀಂನಲ್ಲಿ ಸೇರಿ ಏಕಲವ್ಯ, ಜ್ಯೂಲಿಯಸ್ ಸೀಸರ್, ಸೇತು ಮಾಧವ ಸಲ್ಲಾಪ, ಬಾದಲ್ ಸರ್ಕಾರ್‌ರವರ ಮೆರವಣಿಗೆ ನಾಟಕಗಳಲ್ಲಿ ಅಭಿನಯಿಸಿದ್ದೆ. ಮೈಮ್ ರಮೇಶ್ ನನ್ನ ಮೊದಲ ಗುರು.

ಲಂ: ಸಿನಿಮಾ ಸಂಪರ್ಕ ಹೇಗಾಯಿತು?

ಧ: ಇಂಜಿನಿಯರಿಂಗ್ ಓದು ಮುಗಿದಮೇಲೆ ಕೆಲ ತಿಂಗಳು ಇನ್‌ಫೋಸಿಸ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಸಿನಿಮಾ ಬಗ್ಗೆ ಆಸಕ್ತಿ ಇತ್ತಾದರೂ ಯಾರನ್ನು ಕೇಳಬೇಕು ಅನ್ನೋದು ಗೊತ್ತಿರಲಿಲ್ಲ. ಆಗೊಮ್ಮೆ ಗುರುಪ್ರಸಾದ್ ಅನಿಮೇಷನ್ ಸಿನಿಮಾ ಮಾಡಲು ಮೈಸೂರಿಗೆ ಬಂದಾಗ ನನ್ನ ನಾಟಕ ನೋಡಿ 'ಮುಂದೆ ಅವಕಾಶ ಕೊಡ್ತೀನಿ, ತಯಾರಾಗುತ್ತಿರು' ಅಂದಿದ್ದರು. 'ನಿನ್ನ **features** ಹಾಗೂ **voice** ಚೆನ್ನಾಗಿದೆ' ಅಂತಲೂ ಹೇಳಿದ್ದರು. ನಾಲ್ಕು ವರ್ಷ ಕಾದೆ. ಗುರುಪ್ರಸಾದ್ ಕೊಟ್ಟ ಮಾತಿನಂತೆ ಕರೆದು ಅವಕಾಶ ಕೊಟ್ಟರು. ಆ ನಡುವಿನ ಅವಧಿಯಲ್ಲಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ಬೆಂಗಳೂರಿಗೇ ಬಂದು ಗುರುಪ್ರಸಾದ್ ಜೊತೆಗಿದ್ದು ಸಿನಿಮಾರಂಗದ ಕೆಲಸ ಅರ್ಥಮಾಡಿಕೊಂಡೆ.

ಲಂ: ನಿಮ್ಮ ಕುಟುಂಬ ಹಾಗೂ ಬಾಲ್ಯದ ಬಗ್ಗೆ ಹೇಳಿ?

ಧ: ಅರಸೀಕೆರೆಯ ಕಾಳೇನಹಳ್ಳಿ ನಮ್ಮ ಊರು. ತಂದೆ ಟೀಚರ್ ಹಾಗೂ ರೈತ. ನಮ್ಮದು ಜಾಯಿಂಟ್ ಫ್ಯಾಮಿಲಿ. ಚೆನ್ನಾದ ಬಾಲ್ಯ ನನ್ನದು. ಲಂಕೇಶರು ಒಂದು ಕಡೆ 'ಸುಖಕ್ಕಾಗಿ ಹಾತರಿಸುವವರು ಕೋಟ್ಯಾಂತರ ಹಣ ಬೇಕು ಅಂದುಕೊಳ್ಳುತ್ತಾರೆ. ಆದರೆ ಇದ್ದಿದ್ದರಲ್ಲೂ ಸುಖವಿರುತ್ತದೆ' ಅಂದಿದ್ದಾರೆ. ನನ್ನ ಬಾಲ್ಯ ಆ ತರದ್ದು. ಅರಸೀಕೆರೇಲಿ ಸಿನಿಮಾದ ಮೊದಲ ದಿನ ನಮ್ಮ ನೆಂಟರಿಷ್ಟರೆ ಬಂದಿದ್ದರು. ನನ್ನ ಅಜ್ಜಿ ಸಿನಿಮಾ ನೋಡಿ ಅತ್ತರು.

ಲಂ: ಇಷ್ಟವಾದ ಸಿನಿಮಾ ನಟ-ನಟಿ...

ಧ: ಭೂತಯ್ಯನ ಮಗ ಅಯ್ಯು ಹಾಗೂ ಫ್ರಾಂಕ್ ದಾರಾಬೋಂಟನ **'The Shawshank Redemption'** (ಒಂದು ಜೈಲಿನ ಕತೆ) ನನ್ನ ಮೆಚ್ಚಿನ ಸಿನಿಮಾಗಳು. ರಾಜಕುಮಾರ್ ಹಾಗೂ ಉಮಾಶ್ರೀ ಮೆಚ್ಚಿನ ಕಲಾವಿದರು. ಒಬ್ಬ ನಟನಾಗಿ ನಾನು ಎಲ್ಲಾ ತರದ ಪಾತ್ರ ಮಾಡಬೇಕು. ಒಳ್ಳೆ ಕತೆಗಳು ಸಿಗಬೇಕು.

ಲಂ: ಹವ್ಯಾಸಗಳೇನು?

ಧ: ಓದು... ಈಗ ಲಂಕೇಶರ ಈ ನರಕ ಈ ಪುಲಕ, ಮನಕೆ ಕಾರಂಜಿಯ ಸ್ಪರ್ಶ ಓದ್ತಿದ್ದೀನಿ. ತೇಜಸ್ವಿ, ಕಾರಂತ, ಕಂಬಾರ, ದೇವನೂರು ನನ್ನ ಇಷ್ಟದ ಲೇಖಕರು. ಸಿನಿಮಾ ನೋಡ್ತೀನಿ. ಜನರ ಜೊತೆ ಇರೋದು, ಸುತ್ತಾಟವೂ ಇಷ್ಟ.

ಲಂ: ನಿಮ್ಮ ಹೊಸ ಸಿನಿಮಾಗಳು ಯಾವುದು?


ಧ: ಸದ್ಯಕ್ಕೆ ಅರ್ಜುನ್‌ರವರ ರಾಟೆ, ಓಂ ಪ್ರಕಾಶ್‌ರಾವ್‌ರವರ 'ಹುಚ್ಚ' ಹಾಗೂ ಗುರುಪ್ರಸಾದ್‌ರ ಇನ್ನೊಂದು ಸಿನಿಮಾನು ಇದೆ.

ಲಂ: ಗುರುಪ್ರಸಾದ್ ಬಗ್ಗೆ ಹೇಳಿ?

ಧ: ವಿಭಿನ್ನವಾಗಿ ಯೋಚಿಸುವ ಪ್ರತಿಭಾವಂತ, ಅವರದ್ದೇ ಆದ ಸ್ಟೈಲ್ ಇದೆ. ನಟರ ಪ್ರತಿಭೆ ಗುರುತಿಸಿ ಅವರಿಂದ ಏನು ತೆಗೀಬೇಕು ಅನ್ನೋದು ಅವರಿಗೆ ಗೊತ್ತಿದೆ.

ಲಂ: ಕನ್ನಡ ಸಿನಿಮಾ ಇಂಡಸ್ಟ್ರಿ ಬಗ್ಗೆ ಹೇಳಿ?

ಧ: ನಾನಷ್ಟು ದೊಡ್ಡವನಲ್ಲ, ಇಲ್ಲಿ ಒಳ್ಳೆ ನಿರ್ದೇಶಕರು, ಟೆಕ್ನಿಷಿಯನ್ಸ್ ಎಲ್ಲಾ ಇದ್ದಾರೆ. ಒಳ್ಳೆ ಕತೆಗಳು ಬೇಕು. ಒಂದು ಸಿನಿಮಾ ನೋಡಿ ಇನ್ನೊಂದು ಸಿನಿಮಾ ಮಾಡೋ ಬದಲಾಗಿ ಜನಜೀವನ ನೋಡಿ ಸಿನಿಮಾ ಮಾಡಬೇಕು ಅನಿಸುತ್ತೆ. ●



'ಡೈರೆಕ್ಟರ್ಸ್ ಸ್ಪೆಷಲ್' ಚಿತ್ರದ ಹೀರೊ **ಧನಂಜಯ**

...ಖಾಸಗಿ ನಂಬಿಕೆ'ಗಳ ನಡುವಿನ ವ್ಯತ್ಯಾಸ ...ವಾಗುವುದಿಲ್ಲವೇ?

- ರವಿಕುಮಾರ್, ಹಾಸನ

...ಕಳೆದ ಐದು ವಾರಗಳಿಂದ ಹೇಳಬೇಕು ಅಂತ ಇದ್ದೆ. ...ರೆ ಅದನ್ನೇ ನೂರಾರು ಓದುಗರು ಹೇಳಿರುತ್ತಾರೆ ...ದು ತೃಪ್ತಿಪಟ್ಟು ಸುಮ್ಮನಾಗಿದ್ದೆ. ಆದರೂ ...ಬೇಕೆನಿಸುತ್ತಿದೆ:

...ಇತ್ತೀಚೆಗೆ ಪತ್ರಿಕೆಯು 80ರ ದಶಕದಲ್ಲಿ ಓದುತ್ತಿದ್ದ ...ಗಳನ್ನು ನೆನಪಿಸುತ್ತಿದೆ. ಪತ್ರಿಕೆಯು ಗರಿಕೆದರಿ ಹಾರುತ್ತಿದೆ. ...ಕೇಶ್ ಮೇಷ್ಟ್ರು ಅಕ್ಷರಗಳಲ್ಲಿ ಹೂತ ಹಾಗೆ ಅನ್ನಿಸುತ್ತಿದೆ. ...ಅಭಿನಂದನೆ ಕಡಿಮೆ ಮಾತಾಯಿತು.

- ಫಾದರ್ ಚಸರಾ, ಬೆಂಗಳೂರು

...ಮುಖ್ಯಮಂತ್ರಿಗಳಿಗೆ 'ಅಲೆಮಾರಿ ...ಡಕಟ್ಟು ಮಹಾಸಭಾ'ದ ಅಭಿನಂದನೆ

...ಮೊಟ್ಟಮೊದಲ ಬಾರಿಗೆ ದೇವರಾಜ ಅರಸು ...ರದಲ್ಲಿ ಹಿಂದುಳಿದ ಸಮುದಾಯಗಳಿಂದ ಅತ್ಯಂತ ...ಪಿ ನಾಯಕರಾಗಿ ಸಾಮಾಜಿಕ ಕಳಕಳಿಯನ್ನು ...ಸಿಕೊಂಡಿರುವ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು ...ದ ಮುಖ್ಯಮಂತ್ರಿಗಳಾಗಿರುವುದು ಅಲೆಮಾರಿ ...ಕಟ್ಟು ಸಮುದಾಯಗಳ ಪಾಲಿಗೆ ಅತ್ಯಂತ ...ಸೆಯನ್ನು ಮೂಡಿಸಿದೆ. ಶ್ರೀಯುತರ ನಾಯಕತ್ವದಲ್ಲಿ ...ತ ಶೋಚನೀಯವಾಗಿ ಬದುಕುತ್ತಿರುವ ಮೂವತ್ತೇಳು ...ಮಾರಿ, ಬುಡಕಟ್ಟು ಜನರಿಗೆ ತಲೆಗೆ ಸೂರು, ಅವರ ...ಶಿಕ್ಷಣ ಮತ್ತು ಉದ್ಯೋಗ ಸೃಷ್ಟಿಯನ್ನು ಸಿದ್ದರಾಮಯ್ಯ ...ದ ಕಾಂಗ್ರೆಸ್ ಸರ್ಕಾರ ಮಾಡುತ್ತದೆ ಎಂಬ ...ಗಳಿಂದ ಈ ಸಮುದಾಯಗಳು ನೋಡುತ್ತಲೇ ... ಮುಖ್ಯಮಂತ್ರಿಗಳನ್ನು ತುಂಬುಹೃದಯದಿಂದ ...ನಂದಿಸುತ್ತದೆ. ಅತ್ಯಂತ ತುರ್ತಾಗಿ ಅಲೆಮಾರಿ ...ಸಮುದಾಯಗಳ ವೈಜ್ಞಾನಿಕ ಸಮೀಕ್ಷೆಯನ್ನು ...ಸಬೇಕಾಗಿದೆ. ಅಲೆಮಾರಿಗಳಿಗೆ ಬಜೆಟ್‌ನಲ್ಲಿ ...ಮೀಸಲಿಡಬೇಕು ಹಾಗೂ ಅಲೆಮಾರಿ ಬುಡಕಟ್ಟುಗಳ ...ಗಳನ್ನು ಅಧ್ಯಯನ ಮಾಡಲು 'ಅಲೆಮಾರಿ ಬುಡಕಟ್ಟು ...ಗ'ವನ್ನು ರಚಿಸಬೇಕು. ಅಲೆಮಾರಿಗಳ ದೈನಂದಿನ ... [illegible]

... [illegible]

ಅವರಂತೆ ಮಾನ್ಯ ಮುಖ್ಯಮಂತ್ರಿಗಳೂ ಸಾಮಾಜಿಕ ನ್ಯಾಯ ಒದಗಿಸಲಿ ಎಂದು ಮಹಾಸಭಾ ಪರವಾಗಿ ಕೋರುತ್ತೇವೆ.

- 'ಅಲೆಮಾರಿ ಬುಡಕಟ್ಟು ಮಹಾಸಭಾ'ದ ಅಧ್ಯಕ್ಷ ಡಾ. ಬಾಲಗುರುಮೂರ್ತಿ, ಪ್ರಧಾನ ಕಾರ್ಯದರ್ಶಿ ಡಾ. ಎ.ಆರ್. ಗೋವಿಂದಸ್ವಾಮಿ ಮತ್ತು ಖಜಾಂಚಿ ಲೋಹಿತಾಶ್ವ

ಜೈಲಿನ ಹಾದಿಯಲ್ಲಿ ಕಲಾವಿದ ಹಾದಿಮನಿಯ ಬಗ್ಗೆ ಓದಿ ಆತಂಕವಾಯಿತು. ನಮಗೆಲ್ಲ ಹಾದಿಮನಿ ತನ್ನ ಕಾರ್ಟೂನ್‌ಗಳಿಂದ ಚಿರಪರಿಚಿತರು. ದಿ. ಜೆ.ಎಚ್. ಪಟೇಲ್‌ರವರ ಸರ್ಕಾರ ವಿಶ್ವಸುಂದರಿ ಸ್ಪರ್ಧೆಯನ್ನು ಬೆಂಗಳೂರಿನಲ್ಲಿ ನಡೆಸಲು ನಿರ್ಧರಿಸಿದಾಗ 'ಪತ್ರಿಕೆ' ಕಟುವಾಗಿ ವಿರೋಧಿಸಿತ್ತು. 'ಪತ್ರಿಕೆ'ಯು ತನ್ನ ಎಂದಿನ ಸಂಚಿಕೆಯಲ್ಲಿ ಮುಖಪುಟದಲ್ಲಿ ಪಟೇಲರ ವಿಶ್ವಸುಂದರಿ ಕಿರೀಟ ಹೊತ್ತ ವ್ಯಂಗ್ಯ ಚಿತ್ರ ಎಲ್ಲರನ್ನು ಸೆಳೆದುಬಿಟ್ಟಿತ್ತು. ಸ್ವತಃ ಲಂಕೇಶರೇ ಹಾದಿಮನಿಯ ಕಲೆಯನ್ನು ಹೊಗಳಿದ್ದರು. ಹಾದಿಮನಿಗೆ ಈ ರೀತಿಯ ಕೆಟ್ಟಗುಣ ವಿಕೃತ ಮನಸ್ಸು ಇರುವುದು ಖೇದವೆನಿಸುತ್ತಿದೆ. ಹಾದಿಮನಿಯ ವಿಕೃತ ಮನಸ್ಸಿನ ಕಾರ್ಟೂನ್‌ನನ್ನು ಬೇರೆಯವರು ಬಿಡಿಸುತ್ತಿರಬಹುದು.

ಹಾದಿಮನಿಯಂತ ಕಲಾವಿದರು ತಮ್ಮಲ್ಲಿರುವ ಪ್ರತಿಭೆಯನ್ನು ಹೇಗೆ ಹಾಳು ಮಾಡಿಕೊಳ್ಳುತ್ತಾರೆ ಎನ್ನುವುದಕ್ಕೆ ಇದಕ್ಕಿಂತ ಸಾಕ್ಷಿ ಬೇಕೆ? ಎಂ.ಎಫ್. ಹುಸೇನ್, ರವಿವರ್ಮ, ನಮ್ಮಲ್ಲಿರುವ ಪಿ. ಮಹಮದ್‌ರವನ್ನಾದರೂ ನೋಡಿ ಹಾದಿಮನಿ ಬದಲಾಗಲಿ.

-ಸಿ. ಶಿವಕುಮಾರ್, ಚಿನಿವಾರನಹಳ್ಳಿ

ಕೃತಿಯ ಹಿಂದಿನ ವಿಕೃತಿ

ರಾಜ್ಯ ಮತ್ತು ರಾಷ್ಟ್ರಮಟ್ಟದ ವ್ಯಕ್ತಿ ಚಿತ್ರಗಳನ್ನು ತಮ್ಮ ವ್ಯಂಗ್ಯಚಿತ್ರಗಳ ಮೂಲಕ ಜೀವ ತುಂಬುತ್ತಿದ್ದ ಹಾದಿಮನಿಯಂತಹ ಕಲಾವಿದರ ಹಿಂದಿನ ವಿಕೃತ ಮನಸ್ಸು ತಿಳಿದು ಆಶ್ಚರ್ಯವಾಯಿತು. ಸರಿಯಾದ 'ಹಾದಿ'ಯಲ್ಲೂ ಸಾಗದೆ, ಇತ್ತ 'ಮನಿ'ಯನ್ನೂ ಸೇರದೆ ಇದೀಗ ಸೆರೆಮನೆ ಸೇರಿರುವ ಈ ಕಲಾವಿದ ಮಾಡಿದ್ದನ್ನು ಉಣ್ಣಬೇಕಾಗಿ ಬಂದಿರುವುದು ನ್ಯಾಯವಾಗಿಯೇ ಇದೆ.

ಕೆಲವು ಪತ್ರಿಕೆಗಳಿಗೆ ಮತ್ತು ಪುಸ್ತಕಗಳ ಮುಖಪುಟ, ಒಳಪುಟಗಳಿಗೆ ಚಿತ್ರವಿಚಿತ್ರವಾಗಿ 'ಚಿತ್ರಗೀಚುವ ಕಲಾವಿದ'ನೆಂದೇ 'ಖ್ಯಾತ'ನಾಗಿರುವ ವಿ.ಎಂ. ಮಂಜುನಾಥ್ ಅರೆಬೆಂದ ಮಡಕೆಯೂ



ಹೌದು, ಸಾಂಸ್ಕೃತಿಕ ರಂಗದ ವ್ಯಾಧಿಯೂ ಹೌದು.

ಈ ಇಬ್ಬರ ಮುಖಗಳನ್ನು ಸರಿಯಾಗಿಯೇ ಅನಾವರಣ ಮಾಡಿದ್ದೀರಿ.

- ವಸುಂಧರ, ಕೋಲಾರ


ದಿನೇಶ್ ಅಮೀನ್ ಮಟ್ಟುರವರ ತೀರ್ಮಾನದ ಹಿಂದೆ...

ಮಟ್ಟುರವರು ಮಾಧ್ಯಮ ಪ್ರತಿನಿಧಿಯಾದ ವರದಿಗಳು ಪತ್ರಿಕೆಗಳಲ್ಲಿ ಪ್ರಕಟವಾದದ್ದು ಓದಿದಾಗ ಮೊದ-ಮೊದಲು ಬೇಸರವಾಗಿತ್ತು. ಬಹುಮುಖ್ಯವಾಗಿ ಪ್ರಜಾವಾಣಿಯಲ್ಲಿ ಅವರು ಬರೆಯುತ್ತಿದ್ದ ವರದಿಗಳು, ಅಂಕಣಗಳು 'ನಮ್ಮನ್ನೇ' ಪ್ರತಿನಿಧಿಸುತ್ತಿದ್ದು ಅವುಗಳು ನಿಂತುಹೋಗುತ್ತವೆ ಎಂಬ ಕಾರಣಕ್ಕೆ ಅವರನ್ನು ಸರಕಾರ ಅಪಹರಿಸಿತು ಎಂದು ಅನಿಸಿತ್ತು.

ತಾವು ಪ್ರಕಟಿಸಿದರ ಅವರ ವಿಚಾರ ಓದಿದಾಗ ಅವರೂ ನಮ್ಮಂತೆ ಚಿಂತಿಸಿದ್ದಾರೆ ಎಂದು ತಿಳಿಯಿತು. ಯಾವುದೇ ಕಾರಣಕ್ಕೂ ಅವರು ಹೊಸ ಜವಾಬ್ದಾರಿ ಒಪ್ಪಿಕೊಂಡದ್ದು ಒಳ್ಳೆಯದಾಯಿತು. ಅವರ ವಿಚಾರಗಳು ಸಾರ್ವತ್ರಿಕ ಮನ್ನಣೆಗೆ- ಜನರ ನೋವಿಗೆ ಸ್ಪಂದಿಸಲು ಅಧಿಕೃತ ವೇದಿಕೆ ದೊರೆತಂತಾಗಿದೆ.


ಅವರಿಗೆ ಯಶಸ್ಸು ದೊರೆಯಲಿ.

- ಸುರೇಶ್, ಮಡಿಕೇರಿ



ವೈಭವೀಕರಣದ ಅಪಾಯ

ಪ್ರತಿಗಾಮಿ ಶಕ್ತಿಗಳು ಜನಮಾನಸದಿಂದ ಮರೆಯಾಗುತ್ತಿರುವ ಲಕ್ಷಣಗಳು ಗೋಚರಿಸಿದ ತಕ್ಷಣ ವೈದಿಕ ಮನಸ್ಸುಗಳು ಜಾಗೃತಗೊಂಡು ಅಕ್ಷರ ಮಾಧ್ಯಮವೋ, ದೃಶ್ಯ ಮಾಧ್ಯಮವೋ ಹೀಗೆ ಯಾವುದಾದರೂ ಮೂಲಗಳನ್ನು ಬಳಸಿ ಅಂತಹ ಶಕ್ತಿಗಳನ್ನು ಪುನರ್ ಪ್ರತಿಷ್ಠಾಪನೆಗೊಳಿಸಲು ಪ್ರಯತ್ನಿಸುವುದು ಈ ಇಂಡಿಯಾ ನೆಲದ ಗುಣವೇ ಆಗಿದೆ. 'ಭಾರತ ಯಾತ್ರೆ' ನಾಟಕ ವಿಮರ್ಶೆಯ ಹಿನ್ನೆಲೆಯಲ್ಲಿ (ಗೌರಿ ಲಂಕೇಶ್, ಜೂನ್ 12, 2013) ಈ ಮಾತುಗಳು.



ಕೆ.ವಿ. ಅಕ್ಷರರವರದು ಮೂಲಭೂತವಾದಿ ಮನಸ್ಸು. ಹಾಗಾಗಿಯೇ 'ಭಾರತ ಯಾತ್ರೆ' ನಾಟಕದ ಮೂಲಕ ಶಂಕರಾಚಾರ್ಯರ ವೈಭವೀಕರಣವನ್ನು ಪ್ರಾರಂಭಿಸಿರಬಹುದು ಎಂಬ ಗುಮಾನಿ ನನಗೆ. ಪ್ರಗತಿಪರರ ಮುಖವಾಡವನ್ನು ಧರಿಸಿಯೂ ಅಂತರಂಗದಲ್ಲಿ ಅವರು 'ಹವ್ಯಕ'ರೇ. ಈ ನಾಟಕವನ್ನು ಬರೆಯುವ ಮುನ್ನ ಅವರು ಶ್ರೀ ಕೆ.ಎಸ್. ಭಗವಾನ್‌ರವರ 'ಶಂಕರಾಚಾರ್ಯ ಮತ್ತು ಪ್ರತಿಗಾಮಿತನ' ಎಂಬ ಅತ್ಯುತ್ತಮ ವೈಚಾರಿಕ ಕೃತಿಯನ್ನು ಒಮ್ಮೆ ಓದಿದ್ದರೂ ಸಾಕಾಗಿತ್ತು. ವೈಭವೀಕರಣದ ಅಪಾಯದಿಂದ ತಪ್ಪಿಸಿಕೊಳ್ಳಬಹುದಿತ್ತು. ಹೆಗ್ಗೋಡಿನ ರಂಗಶಿಕ್ಷಣಕ್ಕಾಗಿ ಅಕ್ಷರ ಅವರು ಇಂಗ್ಲೆಂಡ್‌ಗೆ ಬಹಳ ಹಿಂದೆಯೇ ಹೋಗಿ ಬಂದಿದ್ದರೂ ಇನ್ನೂ ಅವರನ್ನು ಶಂಕರಾಚಾರ್ಯ ಆವರಿಸಿಕೊಂಡಿದ್ದಾರೆಂದರೆ ಏನು ಹೇಳುವುದು? ಮಹಾನ್ ರಂಗಕರ್ಮಿ ಕೆ.ವಿ. ಸುಬ್ಬಣ್ಣನವರು ಬದುಕಿದ್ದಿದ್ದರೆ ಪ್ರಾಯಶಃ ಶಂಕರಾಚಾರ್ಯ ಈ ರೂಪ ತಾಳುತ್ತಿರಲಿಲ್ಲವೇನೋ?

ನಾಟಕವನ್ನು ವಿಮರ್ಶಿಸುತ್ತ ಹೆಚ್.ವಿ. ರಾಘುರವರು ಈ ನಾಟಕ ದೇಶದಾದ್ಯಂತ ಪ್ರದರ್ಶನಗೊಂಡರೆ ತುಂಬ ಉಪಯುಕ್ತ ಎಂದು ಬರೆದಿದ್ದಾರೆ. ಬೇಡ ಸ್ವಾಮಿ, ದಯವಿಟ್ಟು ಬೇಡ. ಸೀಮಿತ ಪ್ರದರ್ಶನಗಳೇ ಸಾಕು. ಕಾರಣ, ಶ್ರೀರಾಮನ ಸ್ಥಾನವನ್ನು ಶಂಕರಾಚಾರ್ಯ ಆಕ್ರಮಿಸಿಕೊಂಡರೆ ಕಷ್ಟ ಎಂಬ ಅವ್ಯಕ್ತ ಭಯ ನನ್ನದು.

- ಎನ್.ಕೆ. ವರದರಾಜ್, ಕೋಲಾರ

lankesh70@rediffmail.com ... 9980331427 ...

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 19-06-2013 RNI No. KARKAN2005/1464

ಒಂದು ವಿಕೃತದ ಸುತ್ತ...



ಕನ್ನಡ ಚಿತ್ರರಂಗದಲ್ಲಿ ಒಂದೇ ಕಥೆಯನ್ನಾಧರಿಸಿ ಎರಡು ಚಿತ್ರಗಳು ತೆರೆ ಕಾಣುವುದು ಹೊಸ ವಿಷಯವೇನಲ್ಲ. ಈ ಹಿಂದೆ ಅಂತಹ ಘಟನೆಗಳು ನಡೆದು, ಎರಡೂ ಚಿತ್ರಗಳ ನಿರ್ಮಾಪಕರು ನಷ್ಟ ಅನುಭವಿಸಿದ್ದೂ ಇದೆ. ಆದರೂ ಸ್ಪರ್ಧಾತ್ಮಕ ಕ್ಷೇತ್ರವಾದ ಸಿನಿಮಾರಂಗದಲ್ಲಿ ಇನ್ನೂ ಅಂತಹ ಸಾಹಸಗಳು ನಡೆಯುತ್ತಿವೆ ಎಂಬುದಕ್ಕೆ ವಿಕೃತ ಕಾಮಿ ಉಮೇಶ್ ರೆಡ್ಡಿಯ ಜೀವನ ಕಥೆ ಒಂದು ಉದಾಹರಣೆ.

ಮಳವಳ್ಳಿ ಸಾಯಿಕೃಷ್ಣ ತನ್ನ ಚೊಚ್ಚಲ ಚಿತ್ರಕ್ಕಾಗಿ ಈ ಉಮೇಶ್ ರೆಡ್ಡಿಯ ಕಥೆಯನ್ನು ಆಯ್ಕೆ ಮಾಡಿದಾಗ ದೊಡ್ಡ ವಿವಾದವೇ ಉಂಟಾಗಿತ್ತು. ಖ್ಯಾತ ಕಲಾವಿದ ರವಿಕಾಳೆ 'ಉಮೇಶ್ ರೆಡ್ಡಿ' ಚಿತ್ರದ ಹೀರೋ. ಇದರ ಚಿತ್ರೀಕರಣ ಇತ್ತೀಚೆಗೆ ಮುಗಿದಿದೆ. ಈ ಮಧ್ಯೆ ಯಾವುದೇ ಸದ್ದುಗದ್ದಲವಿಲ್ಲದೆ ನಿರ್ದೇಶಕ ಜೋಸೈಮನ್ ಅವರ ಕಿರಿಯ ಮಗ ಜಿತೇಂದ್ರ ಸೈಮನ್ ನಾಯಕನಾಗಿ ನಟಿಸಿರುವ 'ಉಮೇಶ್' ಎಂಬ ಚಿತ್ರವೂ ಈಗ ಬಿಡುಗಡೆಗೆ ತಯಾರಾಗಿದೆ. ಈ ಚಿತ್ರವೂ ವಿಕೃತಕಾಮಿ ಉಮೇಶ್‌ರೆಡ್ಡಿಯ ಜೀವನಕಥೆಯ ಸುತ್ತ ಹೆಣೆಯಲ್ಪಟ್ಟಿದೆ.

ಈಗ ಇವೆರಡು ಚಿತ್ರಗಳಲ್ಲಿ ಯಾವುದು ಮೊದಲು ತೆರೆ ಕಾಣುತ್ತದೆಯೋ ಆ ಚಿತ್ರಕ್ಕೆ ಪರಿಸ್ಥಿತಿ ಲಾಭದಾಯಕವಾಗಿರುತ್ತದೆ. ತಡವಾಗಿ ಬಿಡುಗಡೆಯಾಗುವ ಚಿತ್ರದ ನಿರ್ಮಾಪಕರಿಗೆ ಖಂಡಿತವಾಗಿಯೂ ನಷ್ಟ ಕಟ್ಟಿಟ್ಟ ಬುತ್ತಿ. ಹೀಗಾಗಿ ಈಗ ಉಮೇಶ್ ರೆಡ್ಡಿಯನ್ನು ಬೆಳ್ಳಿತೆರೆಯ ಮೇಲೆ ಮೊದಲು ತೋರಿಸಲು ಈ ಎರಡು ಚಿತ್ರಗಳ ನಿರ್ಮಾಪಕರು ಪ್ರಯತ್ನಿಸುತ್ತಿದ್ದಾರೆ.

ಹಲವಾರು ಮಹಿಳೆಯರ ಮೇಲೆ ಅತ್ಯಾಚಾರವೆಸಗಿದ ಉಮೇಶ್ ರೆಡ್ಡಿ ಗಾಂಧಿನಗರದ ಜನರನ್ನು ಆಕರ್ಷಿಸಿರುವುದೇ ಒಂದು ವಿಕೃತ ಎಂದರೆ ತಪ್ಪಾಗಲಾರದು. ಕನ್ನಡ ಸಾಹಿತ್ಯ ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ - ಒಟ್ಟು ಎಂಟು - ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿದ್ದರೂ ನಮ್ಮ ಸಿನಿಮಾದವರಿಗೆ ಉಮೇಶ್ ರೆಡ್ಡಿಯ ಜೀವನಕಥೆಯೇ ಬೇಕಾಗಿರುವುದು ನಿಜಕ್ಕೂ ವಿಷಾದದ ಸಂಗತಿ.

ತ್ಯಾಗರಾಜನ ಭಕ್ತಿ ಪಾತ್ರ

'ತ್ಯಾಗರಾಜ' ಎಂದೇ ಚಿತ್ರರಂಗದಲ್ಲಿ ಅನ್ವರ್ಥ ನಾಮ ಪಡೆದಿರುವ ನಾಯಕ ನಟ ರಮೇಶ್ ಇತ್ತೀಚಿನ ದಿನಗಳಲ್ಲಿ ಸೋಲು ಕಂಡಿದ್ದೇ ಹೆಚ್ಚು. ಅವರಿಗೆ 'ತ್ಯಾಗರಾಜ'ನ ಪಾತ್ರದ ಹೊರತಾಗಿ ಉಳಿದ ಪಾತ್ರಗಳು ಸಿಕ್ಕರೂ ಪ್ರೇಕ್ಷಕರು ಅವರನ್ನು ತುಂಬುಹೃದಯದಿಂದ ಸ್ವಾಗತಿಸಿದ ಉದಾಹರಣೆ ಕಡಿಮೆ. ಈ ಮಧ್ಯೆ ಕೆಲವು ತಮಾಷೆಯ ಚಿತ್ರಗಳಲ್ಲಿ ನಟಿಸಿ, ಪ್ರೇಕ್ಷಕರನ್ನು ರಂಜಿಸಿದ ರಮೇಶ್ ನಟನೆಯಿಂದ ಸ್ವಲ್ಪ ಪಕ್ಕಕ್ಕೆ ಸರಿದು ನಿರ್ದೇಶನದಲ್ಲಿ ಕೂಡ ತನ್ನ ಕೈಚಳಕವನ್ನು ತೋರಿಸಿದ್ದರು. ಆದರೆ ಅಲ್ಲೂ ಕೂಡ ಅವರಿಗೆ ನಿರೀಕ್ಷಿಸಿದಷ್ಟು ಯಶಸ್ಸು ಸಿಗಲೇ ಇಲ್ಲ.



ಇಂತಹ ವೃತ್ತಿಜೀವನದ ಸಂದಿಗ್ಧ ಸ್ಥಿತಿಯಲ್ಲಿರುವ ರಮೇಶ್ ಈಗ ಎಲ್ಲ ತರಹದ ಹೊಸತನದ ಪಾತ್ರಗಳಿಗೆ ಸೈ ಅನ್ನುತ್ತಿದ್ದಾರೆ. ಉದಾಹರಣೆಗೆ 'ನಿರೆಳ್' ಎಂಬ ತುಳು ಭಾಷೆಯ ಚಿತ್ರವೊಂದರಲ್ಲಿ ರಮೇಶ್ ಇತ್ತೀಚೆಗೆ ಅತಿಥಿನಟರಾಗಿ ಕಾಣಿಸಿಕೊಂಡಿದ್ದಾರೆ. ಅದರ ಬೆನ್ನಿಗೇ ಈಗ ಬಸವಣ್ಣನ ಪಾತ್ರದಲ್ಲಿ ರಮೇಶ್ ನಟಿಸುತ್ತಿರುವ ಸುದ್ದಿ ಕೇಳಿಬಂದಿದೆ. ಭಕ್ತಿಪ್ರಧಾನವಾದ ಚಿತ್ರವೊಂದರಲ್ಲಿ ರಮೇಶ್ ಕಾಣಿಸಿಕೊಳ್ಳುತ್ತಿರುವುದು ಇದೇ ಮೊದಲ ಬಾರಿ.

ಭಕ್ತಿಪ್ರಧಾನ 'ಜಗದ್ಗುರು ರೇಣುಕಾಚಾರ್ಯ', 'ಭಕ್ತಶಂಕರ', 'ದೇವಿ ಬಾಗಮ್ಮ', 'ಜ್ಞಾನಜ್ಯೋತಿ ಸಿದ್ಧಗಂಗಾ' ಮೊದಲಾದ ಚಿತ್ರಗಳನ್ನು ನಿರ್ದೇಶಿಸಿದ ಖ್ಯಾತಿ ಹೊಂದಿರುವ ಪುರುಷೋತ್ತಮ್ ಈ ಚಿತ್ರವನ್ನು ನಿರ್ಮಿಸಿ ನಿರ್ದೇಶಿಸುತ್ತಿದ್ದಾರೆ.

ಒಂದು ಸಣ್ಣ ಚೇಂಜ್

ಈಗಾಗಲೇ 'ಸ್ವೀಟಿ' ಎಂಬ ಅಪ್ಪಟ ಪ್ರೇಮಕಥಾವಸ್ತುವಿನ ಕಮರ್ಷಿಯಲ್ ಚಿತ್ರವನ್ನು ನಿರ್ಮಿಸಿ ತೆರೆಗೆ ನೀಡಲು ಸಿದ್ಧಳಾಗಿರುವ ನಾಯಕಿ ರಾಧಿಕಾ ಕುಮಾರಸ್ವಾಮಿ ಈಗ ಮತ್ತೊಂದು ಚಿತ್ರವನ್ನು ಆರಂಭಿಸಲು ರೆಡಿಯಾಗಿದ್ದಾರೆ.

ಈ ಬಾರಿ ಆಕೆ ಪ್ರೇಮಕಥೆಯನ್ನಾಧರಿಸಿರುವ ಕಮರ್ಷಿಯಲ್ ಚಿತ್ರದ ಬದಲು ಅಣ್ಣತಂಗಿಯ ನಡುವಿನ ಬಾಂಧವ್ಯ ಕುರಿತಾದ ಚಿತ್ರ ಮಾಡಲು ಹೊರಟಿದ್ದಾರೆ. ನಿಮಗೆ ನೆನಪಿರಬಹುದು, ಕೆಲವು ವರ್ಷಗಳ ಹಿಂದೆ ಶಿವರಾಜ್‌ಕುಮಾರ್ ಮತ್ತು ರಾಧಿಕಾ ನಟಿಸಿದ 'ಅಣ್ಣತಂಗಿ' ಚಿತ್ರ ಕರ್ನಾಟಕದ ಮೂಲೆ ಮೂಲೆಯಲ್ಲೂ ಜಯಭೇರಿ ಭಾರಿಸಿತ್ತು. ಬಹುಶಃ ಅದನ್ನು ಮನಸ್ಸಿನಲ್ಲಿಟ್ಟುಕೊಂಡೇ ರಾಧಿಕಾ ಹಿಸ್ಟರಿ ರಿಪೀಟ್ ಮಾಡಲು ಹೊರಟಂತಿದೆ.



ವಿಶೇಷವೆಂದರೆ 'ಅಣ್ಣತಂಗಿ' ಚಿತ್ರವನ್ನು ನಿರ್ದೇಶಿಸಿದ್ದ ಸಾಯಿಪ್ರಕಾಶ್ ಅವರೇ ಈ ಚಿತ್ರವನ್ನೂ ನಿರ್ದೇಶಿಸಲಿದ್ದಾರಂತೆ. ಈ ಚಿತ್ರದಲ್ಲಿ ಮರುಜನ್ಮದ ವಿಷಯಕ್ಕೆ ಆದ್ಯತೆಯನ್ನು ನೀಡಲಾಗಿದೆಯಂತೆ. ಇತ್ತೀಚೆಗೆ ಭಾವನಾತ್ಮಕ ಚಿತ್ರಗಳಲ್ಲಿ ಕಾಣಿಸಿಕೊಳ್ಳದೇ ಬರೀ ಹೊಡಿ-ಬಡಿ-ಕಡಿ ಚಿತ್ರಗಳಲ್ಲೇ ಮಿಂಚುತ್ತಿದ್ದ ಶಿವರಾಜ್‌ಕುಮಾರ್ ಪಾಲಿಗೆ ಈ ಚಿತ್ರ ಒಂದು ಸಣ್ಣ ಚೇಂಜ್ ಕೊಟ್ಟರೂ ಆಶ್ಚರ್ಯವಿಲ್ಲ.



ಆ 'ಅದೃಷ್ಟವಂತೆ' ಯಾರು



ರವಿಚಂದ್ರನ್ ಅವರ ಪುತ್ರ ಮನೋರಂಜನ್ ರವಿಚಂದ್ರನ್ ನಾಯ[...] ನಟಿಸಲಿರುವ 'ಅಂದು' ಚಿತ್ರಕ್ಕೆ ನಾಯಕಿಯ ಶೋಧ ಭರದಿಂದ ಸಾಗು[...] ಏನೇ ಆದರೂ ಕನ್ನಡದ ಅಪ್ಪಟ ಪ್ರತಿಭೆಯನ್ನೇ ತನ್ನ ಮಗನ ಚಿತ್ರಕ್ಕೆ ನಾಯಕಿ[...] ಆಯ್ಕೆ ಮಾಡುತ್ತೇನೆ ಎಂದು ರವಿಚಂದ್ರನ್ ಹೇಳಿರುವುದು ಮೆಚ್ಚುವಂ[...] ಅಂದಹಾಗೆ ಈಗಾಗಲೇ ಜಯಮಾಲ ಅವರ ಪುತ್ರಿ ಸೌಂದರ್ಯ ಜಯಮಾ[...] ಅವರ ಫೋಟೋ ಸೆಶನ್‌ಅನ್ನು ಕ್ರೇಜಿ ಸ್ಟಾರ್ ಮಾಡಿ ಮುಗಿಸಿದ್ದಾರೆ. [...] ಬಂದ ಸುದ್ದಿ ಎಂದರೆ 'ಬುಲ್‌ಬುಲ್' ಚಿತ್ರದ ನಾಯಕಿ ರಚಿತಾ ರಾಂ [...] ಫೋಟೋ ಸೆಶನ್‌ಅನ್ನೂ ರವಿಚಂದ್ರನ್ ಮಾಡಿದ್ದಾರಂತೆ.

ಈಗಾಗಲೇ ರಚಿತಾ ಮತ್ತು ಸೌಂದರ್ಯ ಇಬ್ಬರೂ ತಲಾ ಒಂದೊ[...] ಸಿನಿಮಾದಲ್ಲಿ ನಾಯಕಿಯಾಗಿ ನಟಿಸಿದ್ದಾರೆ. ಎರಡನೇ ಚಿತ್ರ, ಅದರಲ್ಲೂ ರವಿಚಂ[...] ನಿರ್ದೇಶನದ ಚಿತ್ರವೆಂದರೆ ಖಂಡಿತವಾಗಿಯೂ ಆ ನಾಯಕಿಯ ಪಾ[...] ಬಂಪರ್ ಬಹುಮಾನ ಸಿಕ್ಕಿದಂತೆ. ಆ ಅದೃಷ್ಟವಂತೆ ಯಾರು? [...] ಗಾಂಧಿನಗರದವರು ಮಾತ್ರವಲ್ಲ, ಪ್ರೇಕ್ಷಕರೂ ಕೂಡ ಎದುರು ನೋಡುತ್ತಿ[...]

ಭೂತದ ಬಾಯಲ್ಲಿ ಭಗವದ್ಗೀ[...]



ಏನೇ ಆದರೂ ರೆಬಲ್ ಸ್ಟಾರ್ ಅಂಬರೀಷ್ ಬದಲಾಗುವು[...] ಎಂದು ಅವರನ್ನು ಹತ್ತಿರದಿಂದ ಬಲ್ಲವರು ಹಲವು ದಶಕಗಳಿಂದ ಹೇ[...] ಬಂದಿದ್ದಾರೆ. ಆದರೆ ಈಗ ಎಲ್ಲರೂ ಅಚ್ಚರಿಪಡುವ ರೀತಿಯಲ್ಲಿ ಅಂಬರೀ[...] ಮಂತ್ರಿಯಾದ ನಂತರ ಬದಲಾಗುತ್ತಿದ್ದಾರೆ.

ಮೊನ್ನೆ 'ಗೂಗ್ಲಿ' ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭಕ್ಕೆ ಸ[...] ಅಂಬರೀಷ್ ಮುಖ್ಯ ಅತಿಥಿಯಾಗಿದ್ದರು. ಈ ಚಿತ್ರದಲ್ಲಿ ನಾಯಕ[...] ಯಶ್ ನಟಿಸಿದ್ದಾರೆ. ಅಂದು ವಿಧಾನಸಭೆ ಇದ್ದರೂ ಅಂಬರೀಷ್ ಕ[...] ಮುಗಿಸಿ ನೇರವಾಗಿ 'ಗೂಗ್ಲಿ' ಚಿತ್ರದ ಸಮಾರಂಭಕ್ಕೆ ಬಂದರು. [...] ಅಲ್ಲಿ ಅವರಿಗೆ ಆಶ್ಚರ್ಯ ಕಾದಿತ್ತು. ಯಾಕೆಂದರೆ ನಾಯಕ ನಟ [...] ಇನ್ನೂ ಸಮಾರಂಭಕ್ಕೆ ಬಂದಿರಲಿಲ್ಲ. ಸುಮಾರು 20 ನಿಮಿಷಗಳ ನ[...] ಯಶ್ ಅಲ್ಲಿ ಪ್ರತ್ಯಕ್ಷರಾದರು.

ಇದನ್ನೆಲ್ಲ ಗಮನಿಸುತ್ತಿದ್ದ ಅಂಬರೀಷ್ ತನ್ನ ಭಾಷಣದಲ್ಲಿ ಯಶ್[...] ತಮಾಷೆಯಾಗಿಯೇ ತರಾಟೆಗೆ ತೆಗೆದುಕೊಂಡರು. "ಎಲ್ಲರೂ ನನ್ನನ್ನು ಲೇ[...] ಲತೀಫ್ ಅನ್ನುತ್ತಾರೆ. ಆದರೆ ನೀನು ನನಗಿಂತ ಲೇಟಾಗಿ ಬರುತ್ತಿದ್ದೀಯ[...] ನಾಯಕ ನಟರು ಸಿನಿಮಾದ ನಿರ್ಮಾಪಕರಿಗೆ ಈ ರೀತಿ ತಡವಾಗಿ ಬ[...] ತೊಂದರೆ ಕೊಡಬಾರದು" ಎಂದು ಅಂಬಿ ಹೇಳಿದರು.

ಅಂಬರೀಷ್ ಅವರ ಬಾಯಿಂದ 'ನಾಯಕ ನಟರು ತಡವಾಗಿ ಬರಬಾ[...] ಎಂಬ ಮಾತು ಉದುರಿದ್ದನ್ನು ನೋಡಿ ಹಿರಿಯ ಪತ್ರಕರ್ತರೊಬ್ಬರು "[...] ಇದು, ಭೂತದ ಬಾಯಲ್ಲಿ ಭಗವದ್ಗೀತೆ" ಎಂದು ತಮಾಷೆ ಮಾಡಿದ[...]

● ಶ[...]

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427,
Fax : 26604536, E-mail :lankesh70@rediffmail.com